
ಮಂಗಳವಾರ, ಮಾರ್ಚ್ 4, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 63 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,085	22,119	₹89,300 (ಬೆಂಗಳೂರು)	₹1 ಲಕ್ಷ (ಬೆಂಗಳೂರು)	87.32

ಕೆಸಿಎಸ್‌ಆರ್ ನಿಯಮ 32ರ ಅಡಿ ಮುಖ್ಯ ಎಂಜಿನಿಯರ್ ಹುದ್ದೆಗೆ ಪ್ರಭಾರ

ಬಡ್ತಿಗೂ ಮುನ್ನ ಆಯಕಟ್ಟಿನ ಹುದ್ದೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಬಡ್ತಿಗೆ ಅರ್ಹತೆಯನ್ನೇ ಹೊಂದಿರದ ಎಂಟು ಎಂಜಿನಿಯರ್‌ಗಳಿಗೆ ಸ್ವತಂತ್ರ ಪ್ರಭಾರದ ಮೇಲೆ ಆಯಕಟ್ಟಿನ ಹುದ್ದೆಗಳನ್ನು ಲೋಕೋಪಯೋಗಿ ಇಲಾಖೆ ನೀಡಿದೆ.

ಸೇವಾ ಜ್ಯೇಷ್ಠತೆಯ ಆಧಾರದ ಮೇಲೆ ಬಡ್ತಿ ಪಡೆದ ನಾಲ್ವರು ಮುಖ್ಯ ಎಂಜಿನಿಯರ್‌ಗಳು ಕಳೆದ ಐದು ತಿಂಗಳಿನಿಂದ ಸ್ಥಳ ನಿಯೋಜನೆಯ ಆದೇಶಕ್ಕಾಗಿ ಅಲೆದಾಡುತ್ತಿದ್ದರೂ ಅವರಿಗೆ ಹುದ್ದೆ ನೀಡಿಲ್ಲ. ಆದರೆ, ಅಧೀಕ್ಷಕ ಎಂಜಿನಿಯರ್‌ಗಳನ್ನು ಕರ್ನಾಟಕ ನಾಗರಿಕ ಸೇವಾ ನಿಯಮ (ಕೆಸಿಎಸ್‌ಆರ್) 32ರ ಅಡಿ ಸ್ವತಂತ್ರ ಪ್ರಭಾರ ತಾತ್ಕಾಲಿಕ ವ್ಯವಸ್ಥೆಯ ಆಧಾರದ ಮೇಲೆ ಅತ್ಯಂತ ಪ್ರಮುಖ ಜವಾಬ್ದಾರಿ ಹೊಂದಿರುವ ಹುದ್ದೆಗಳಿಗೆ ನೇಮಕ ಮಾಡಿರುವುದು ಆಕ್ಷೇಪಕ್ಕೆ ಕಾರಣವಾಗಿದೆ.

ಮುಖ್ಯ ಎಂಜಿನಿಯರ್ ಹುದ್ದೆಗೆ ಬಡ್ತಿ ಪಡೆದವರಿಗಷ್ಟೇ ಮೀಸಲಾದ ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ದಾವಣಗೆರೆ ಸ್ಮಾರ್ಟ್‌ಸಿಟಿ ಮುಖ್ಯ ಎಂಜಿನಿಯರ್, ರಾಜ್ಯಮಟ್ಟದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕೋಶದ (ಗಣಿ ಮತ್ತು ಭೂ ವಿಜ್ಞಾನ) ಮುಖ್ಯ ಎಂಜಿನಿಯರ್, ಕರ್ನಾಟಕ ನಿರ್ಮಾಣ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸ್ಥಾನ, ಬೆಂಗಳೂರು, ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆಯ (ಕೆಯುಡಬ್ಲ್ಯುಎಸ್‌ಎಂಪಿ) ಟಾಸ್ಕ್ ವ್ಯವಸ್ಥಾಪಕ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯ (ಕೆಯುಐಡಿಎಫ್‌ಸಿ) ಪ್ರಧಾನ ವ್ಯವಸ್ಥಾಪಕ ಹುದ್ದೆಗಳಿಗೆ ಅಧೀಕ್ಷಕ ಎಂಜಿನಿಯರ್‌ಗಳನ್ನು ನೇಮಿಸಿ, ಇಲಾಖೆ ಆದೇಶ ಹೊರಡಿಸಿದೆ.

'ಕ್ರಮಬದ್ಧ ಮುಂಬಡ್ತಿ ಬದಲಿಗೆ ಮಾಡುವ ತಾತ್ಕಾಲಿಕ ವ್ಯವಸ್ಥೆಯ ಅವಕಾಶಗಳನ್ನು ಕಲ್ಪಿಸಲು, ಕರ್ನಾಟಕ ನಾಗರಿಕ ಸೇವಾ ನಿಯಮ 32ರ ಅಡಿ ಪ್ರಭಾರ ನೀಡುವ ಒಳದಾರಿ ಇದೆ. ಇದು ಮುಂಬಡ್ತಿಯಲ್ಲ, ಸ್ವತಂತ್ರ ಪ್ರಭಾರದ ಆದೇಶವನ್ನು ಯಾವ ಸಮಯದಲ್ಲಾದರೂ ವಾಪಸ್ ಪಡೆಯಬಹುದು. ಈ ಸ್ಥಾನಗಳ ಕಾರ್ಯನಿರ್ವಹಣೆಯನ್ನು ಮುಂಬಡ್ತಿಯ ಜ್ಯೇಷ್ಠತೆಗೂ ಪರಿಗಣಿಸಲಾಗದು. ಬಡ್ತಿ ಪಡೆದ ಮುಖ್ಯ ಎಂಜಿನಿಯರ್‌ಗಳು ಲಭ್ಯವಿದ್ದರೂ ಅವರಿಗೆ ಸ್ಥಳ ನಿಯುಕ್ತಿ ಆದೇಶ ನೀಡದೆ, ಕೆಳ ಹಂತದ ಎಂಜಿನಿಯರ್‌ಗಳನ್ನು ಸ್ವತಂತ್ರ ಪ್ರಭಾರದ ಮೇಲೆ ನಿಯೋಜಿಸುವ ಮೂಲಕ ಸರ್ಕಾರ ಹುದ್ದೆಗಳನ್ನು ಹರಾಜಿಗಿಟ್ಟಿದೆ' ಎಂದು ಉನ್ನತಾಧಿಕಾರಿಯೊಬ್ಬರು ದೂರಿದರು.

ಮುಖ್ಯ ಎಂಜಿನಿಯರ್‌ಗಳ ವೇತನ ಶ್ರೇಣಿ ₹1,44,700–₹1,97,200 ಇದೆ. ಈ ವೇತನಶ್ರೇಣಿಯ ಹುದ್ದೆಗಳಿಗೆ ಕೆಳ ಹಂತದವರನ್ನು ನಿಯೋಜಿಸುವ ಜತೆಗೆ, ಆಯಾ ಹುದ್ದೆಗಳ ಪ್ರಭಾರ ಭತ್ಯೆಯನ್ನು ಪಡೆಯುಲು ಅವಕಾಶ ಮಾಡಿಕೊಡುವ ಮೂಲಕ ಸರ್ಕಾರದ ಖಜಾನೆಗೂ ಹೊರೆ ಮಾಡಲಾಗಿದೆ ಎಂದೂ ಅವರು ಆಕ್ಷೇಪಿಸಿದರು.

ಹೈಕೋರ್ಟ್‌ನಲ್ಲಿ ವಿಚಾರಣೆ

ಹಿಂದೆ ಇದೇ ರೀತಿ ವಿವಿಧ ಇಲಾಖೆಗಳಲ್ಲಿ ಮಾಡಲಾಗಿದ್ದ ಸ್ವತಂತ್ರ ಪ್ರಭಾರ ವ್ಯವಸ್ಥೆಯನ್ನು ಕೆಲವು ಅಧಿಕಾರಿಗಳು ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಿದ್ದರು. ಕೆಳಹಂತದ ಅಧಿಕಾರಿಗಳಿಗೆ ಸ್ವತಂತ್ರ ಪ್ರಭಾರದ ಹೆಸರಲ್ಲಿ ಆಯಕಟ್ಟಿನ ಹುದ್ದೆಗಳನ್ನು ನೀಡಿದ್ದ ಸರ್ಕಾರದ ಆದೇಶವನ್ನು ಮಂಡಳಿ ರದ್ದು ಮಾಡಿತ್ತು. ಈ ತೀರ್ಪಿನ ವಿರುದ್ಧ ಹೈಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಕೆಯಾಗಿದ್ದು, ವಿಚಾರಣೆ ನಡೆಯುತ್ತಿದೆ. ಈ ನಡುವೆಯೇ ಲೋಕೋಪಯೋಗಿ ಇಲಾಖೆ ಕೆಳ ಹಂತದ ಎಂಜಿನಿಯರ್‌ಗಳಿಗೆ, ಮುಖ್ಯ ಎಂಜಿನಿಯರ್‌ಗಳಿಗೆ ಮೀಸಲಾದ ಮಹತ್ವದ ಹುದ್ದೆಗಳನ್ನು ನೀಡಿದೆ.

ಹೆಸರು	ಹುದ್ದೆ	ಸ್ಥಳ
• ವಿ. ಚಂದ್ರಮೋಹನ್	ಮುಖ್ಯ ಎಂಜಿನಿಯರ್, ಮೇಲ್ವಿಚಾರಣೆ–ಮೌಲ್ಯಮಾಪನ ಕೋಶ (ಗಣಿ)	ಬೆಂಗಳೂರು
• ಎಚ್‌.ಎಲ್‌. ವೆಂಕಟೇಶ್	ಮುಖ್ಯ ಎಂಜಿನಿಯರ್, ಸ್ಮಾರ್ಟ್‌ಸಿಟಿ	ಬೆಂಗಳೂರು
• ಆರ್‌. ಗಣೇಶ್	ಮುಖ್ಯ ಎಂಜಿನಿಯರ್, ಸ್ಮಾರ್ಟ್‌ಸಿಟಿ	ಹುಬ್ಬಳ್ಳಿ–ಧಾರವಾಡ
• ಕೆ.ಸಿ. ವಿಜಯಕುಮಾರಿ	ಟಾಸ್ಕ್ ವ್ಯವಸ್ಥಾಪಕಿ, ಕೆಯುಡಬ್ಲ್ಯುಎಸ್‌ಎಂಪಿ	ಬೆಂಗಳೂರು
• ಪಿ. ಶ್ರೀನಿವಾಸ್	ಪ್ರಧಾನ ವ್ಯವಸ್ಥಾಪಕ (ತಾಂತ್ರಿಕ), ಕೆಯುಐಡಿಎಫ್‌ಸಿ	ಬೆಂಗಳೂರು
• ಪಿ.ಬಿ. ಪ್ರಕಾಶ್	ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ನಿರ್ಮಾಣ ನಿಗಮ	ಬೆಂಗಳೂರು
• ಶಿವಾನಂದ್ ಆರ್‌. ನಾಯಕ್	ಮುಖ್ಯ ಎಂಜಿನಿಯರ್, ಸ್ಮಾರ್ಟ್‌ಸಿಟಿ	ಬೆಳಗಾವಿ
• ಚಂದ್ರಹಾಸ್ ಎಂ. ಬಂಡಿ	ಮುಖ್ಯ ಎಂಜಿನಿಯರ್, ಸ್ಮಾರ್ಟ್‌ಸಿಟಿ	ದಾವಣಗೆರೆ



ಸೌಧ ಬಿಂಬ

ವಿಧಾನ ಮಂಡಲದ ಉಭಯ ಸದನಗಳ ಜಂಟಿ ಅಧಿವೇಶನಕ್ಕೆ ರಾಜ್ಯಪಾಲರನ್ನು ಬರಮಾಡಿ ಕೊಳ್ಳಲು ಕಾರಿನಲ್ಲಿ ಕುಳಿತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿಸುತ್ತಿದ್ದಾಗ, ಕಾರಿನ ಗಾಜಿನಲ್ಲಿ ವಿಧಾನಸೌಧದ ಬಿಂಬ ಕಾಣಿಸಿದ್ದು ಹೀಗೆ

ಚಿತ್ರ: ಎಂ. ಎಸ್. ಮಂಜುನಾಥ್

ಅನಧಿಕೃತ, ವಿವೇಚನಾರಹಿತ ಮರಳು ಗಣಿಗಾರಿಕೆ: ಆತಂಕ

ನದಿಗಳ ಸಾವು: ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಅನಧಿಕೃತ ಮತ್ತು ವಿವೇಚನಾರಹಿತ ಮರಳು ಗಣಿಗಾರಿಕೆಯ ಪರಿಣಾಮ ರಾಜ್ಯದಲ್ಲಿ ನದಿಗಳು ಮತ್ತು ನದಿ ಪಾತ್ರಗಳು ಬತ್ತಿ ಹೋಗುತ್ತಿದ್ದು, ಎಷ್ಟೋ ಪ್ರಕರಣಗಳಲ್ಲಿ ಸಂಪೂರ್ಣವಾಗಿ ನದಿಗಳೇ ಸತ್ತುಹೋಗಿವೆ. ಇದರಿಂದಾಗಿ, ಸಕಲ ಜೀವರಾಶಿಗೆ ಕುಡಿಯುವ ನೀರಿನ ಪೂರೈಕೆಯೂ ದುಸ್ತರವಾಗಿದ್ದು, ಭವಿಷ್ಯದಲ್ಲಿ ಇದರ ದುಷ್ಪರಿಣಾಮ ತಾರಕಕ್ಕೇರುವ ಅಪಾಯವಿದೆ' ಎಂದು ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

'ಯಾವುದೇ ಅನುಮತಿಯಿಲ್ಲದೆ ಟಕ್ಕಳಕಿ ಗ್ರಾಮದ ಸರ್ವೆ ನಂಬರ್ 118/1ರಲ್ಲಿ 2,904 ಮೆಟ್ರಿಕ್ ಟನ್ ಮರಳನ್ನು ದಾಸ್ತಾನು ಇರಿಸಿಕೊಂಡಿದ್ದೀರಿ. ಈ ಮರಳು ದಾಸ್ತಾನು ಕೃಷ್ಣಾ ನದಿ ಕೊಳ್ಳದಲ್ಲಿ ಗಣಿಗಾರಿಕೆ ಮಾಡಿದ್ದಾಗಿದೆ' ಎಂದು ಆಕ್ಷೇಪಿಸಿ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ತಹಶೀಲ್ದಾರ್, ಟಕ್ಕಳಕಿ ನಿವಾಸಿ ಭಗವಂತ ಅಲಗೂರು (65) ಅವರಿಗೆ ನೋಟಿಸ್ ನೀಡಿದ್ದರು.

7ನೇ ಪುಟ ನೋಡಿ

'ಗಣಿಗಾರಿಕೆ ಮೇಲೆ ನಿಗಾ ಇಲ್ಲ'

'ಈ ಪ್ರಕರಣವು ನದಿ ಗಣಿಗಾರಿಕೆಯ ಮೇಲೆ ಸೂಕ್ತ ನಿಗಾ ಇಲ್ಲದಿರುವುದನ್ನು ಎತ್ತಿ ತೋರಿಸುತ್ತಿದೆ. ಹೀಗಾಗಿ, ಲಭ್ಯವಿರುವ ತಂತ್ರಜ್ಞಾನ ಬಳಸಿ ಸಮಸ್ಯೆಗಳನ್ನು ನಿಭಾಯಿಸಲು ಇದು ಸಕಾಲವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, 'ನದಿ ಪಾತ್ರಗಳಲ್ಲಿನ ಬದಲಾವಣೆಗಳ ಬಗ್ಗೆ ನೈಜ ಸಮಯದಲ್ಲಿ ಮಾಹಿತಿ ನೀಡುವ ವ್ಯವಸ್ಥೆಯೊಂದನ್ನು ಅಳವಡಿಸಿಕೊಳ್ಳಬೇಕು' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ನದಿಗಳ ಗಡಿ, ಮರಳಿನ ದಿಬ್ಬಗಳನ್ನು ಉಪಗ್ರಹ ಆಧಾರಿತ ಚಿತ್ರಗಳ ಮೂಲಕ ಗುರುತಿಸಬೇಕು. ಇವುಗಳಲ್ಲಿ ಬದಲಾವಣೆ ಕಂಡುಬಂದಲ್ಲಿ ತಕ್ಷಣವೇ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳಿಗೆ ತಿಳಿಸಬೇಕು. ಗಣಿ, ಕಂದಾಯ ಮತ್ತು ಅರಣ್ಯ ಇಲಾಖೆಗಳ ಸಹಯೋಗದೊಂದಿಗೆ ಉಪಗ್ರಹ ಆಧಾರಿತ ಚಿತ್ರಗಳ ವ್ಯವಸ್ಥೆಯನ್ನು ಬಳಸಿಕೊಂಡು ಇಂತಹ ಸಮಸ್ಯೆಗಳನ್ನು ನಿರ್ವಹಿಸಬೇಕು' ಎಂದು ಆದೇಶದಲ್ಲಿ ವಿವರಿಸಿದೆ.

'ಸಂಪೂರ್ಣ ನಿಷೇಧ ಹೇರಿಕೆ ಅಸಾಧ್ಯ'

ಶಾಲಾ ಮಕ್ಕಳಲ್ಲಿ ಮೊಬೈಲ್ ಫೋನ್ ಬಳಕೆ: ದೆಹಲಿ ಹೈಕೋರ್ಟ್ ಅಭಿಮತ

ನವದೆಹಲಿ (ಪಿಟಿಐ): ಶಾಲಾ ಮಕ್ಕಳು ಮೊಬೈಲ್ ಫೋನ್ ಬಳಸುವುದನ್ನು ಸಂಪೂರ್ಣ ನಿಷೇಧಿಸುವುದು 'ಅಪೇಕ್ಷಣೀಯವಲ್ಲ ಮತ್ತು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ' ಎಂದು ದೆಹಲಿ ಹೈಕೋರ್ಟ್ ಹೇಳಿದೆ.


ಮಕ್ಕಳು ಮೊಬೈಲ್ ಫೋನ್ ಬಳಸುವುದರ ಮೇಲೆ ನಿಯಂತ್ರಣ ಹೇರಬೇಕು ಎಂದು ನ್ಯಾಯಮೂರ್ತಿ ಅನೂಪ್ ಜೈರಾಮ್ ಭಂಭಾನಿ ಅವರು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ. ಶಾಲಾ ಮಕ್ಕಳು ಮೊಬೈಲ್ ಫೋನ್ ಬಳಸುವುದನ್ನು ನಿಯಂತ್ರಿಸಲು ಕೆಲವು ಮಾರ್ಗಸೂಚಿಗಳನ್ನು ಹೈಕೋರ್ಟ್ ನಿಗದಿಪಡಿಸಿತು. ಜವಾಬ್ದಾರಿಯುತ ಆನ್‌ಲೈನ್ ನಡವಳಿಕೆ, ಡಿಜಿಟಲ್ ನಡವಳಿಕೆ ಮತ್ತು ಸ್ಮಾರ್ಟ್‌ಫೋನ್‌ಗಳ ಬಳಕೆಗೆ ಸಂಬಂಧಿಸಿದ ನೀತಿಸೂತ್ರಗಳ ಬಗ್ಗೆ ಶಾಲಾ ಮಕ್ಕಳಿಗೆ ಶಿಕ್ಷಣ ನೀಡಬೇಕು ಎಂದು ಹೇಳಿತು.

'ಶೈಕ್ಷಣಿಕ ಮತ್ತು ಅದಕ್ಕೆ ಸಂಬಂಧಿತ ಕ್ಷೇತ್ರಗಳಲ್ಲಿ ತಂತ್ರಜ್ಞಾನದ ಬಳಕೆಯ ವಿಚಾರದಲ್ಲಿ ಕಳೆದ ಕೆಲ ವರ್ಷಗಳಲ್ಲಿ ಹಲವು ಬದಲಾವಣೆ ಉಂಟಾಗಿದೆ. ಆದ್ದರಿಂದ ಶಾಲೆಗೆ ಹಾಜರಾಗುವ ವಿದ್ಯಾರ್ಥಿಗಳು ಸ್ಮಾರ್ಟ್‌ಫೋನ್ ಬಳಸುವುದನ್ನು ಸಂಪೂರ್ಣವಾಗಿ ನಿಷೇಧಿಸುವುದು ಸಾಧ್ಯವಿಲ್ಲ' ಎಂದು ಫೆ. 28ರಂದು ನೀಡಿದ ಆದೇಶದಲ್ಲಿ ಹೈಕೋರ್ಟ್ ಹೇಳಿದೆ.

ಸ್ಮಾರ್ಟ್‌ಫೋನ್‌ಗಳ ಅತಿಯಾದ ಬಳಕೆ ಅಥವಾ ದುರುಪಯೋಗದಿಂದ ಹಾನಿಕಾರಕ ಪರಿಣಾಮಗಳು ಉಂಟಾಗುವುದನ್ನು ಹೊರತುಪಡಿಸಿದರೆ, ಈ ಸಾಧನವು ಪೋಷಕರು ಮತ್ತು ಮಕ್ಕಳು ಪರಸ್ಪರ ಸಂಪರ್ಕದಲ್ಲಿರಲು ಹಾಗೂ ಅವರ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು ನೆರವಾಗುತ್ತಿದೆ ಎಂದು ಅಭಿಪ್ರಾಯಪಟ್ಟಿತು.

ವಿದ್ಯಾರ್ಥಿಗಳು ಶಾಲೆಗೆ ಸ್ಮಾರ್ಟ್‌ಫೋನ್‌ಗಳನ್ನು ಕೊಂಡೊಯ್ಯುವುದನ್ನು ನಿರ್ಬಂಧಿಸಬಾರದು. ಆದರೆ, ಶಾಲೆಯಲ್ಲಿ ಸ್ಮಾರ್ಟ್‌ಫೋನ್‌ಗಳ ಬಳಕೆಯನ್ನು ನಿಯಂತ್ರಿಸಬೇಕು ಮತ್ತು ಮೇಲ್ವಿಚಾರಣೆ ಮಾಡಬೇಕು ಎಂದು ಹೇಳಿದೆ. ಶಾಲೆಯಲ್ಲಿ ಸ್ಮಾರ್ಟ್‌ಫೋನ್ ಬಳಸಿದ್ದಕ್ಕೆ ಶಿಸ್ತುಕ್ರಮ ಎದುರಿಸಿದ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಯೊಬ್ಬ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಈ ಆದೇಶ ಹೊರಡಿಸಿದೆ.

ಮಾರ್ಗಸೂಚಿಗಳು ಏನು?



- ಮಕ್ಕಳು ಶಾಲೆಗೆ ಮೊಬೈಲ್ ಫೋನ್‌ಗಳನ್ನು ತಂದರೆ ಅದನ್ನು ಒಂದು ಕಡೆ ಸುರಕ್ಷಿತವಾಗಿ ಇರಿಸಲು ವ್ಯವಸ್ಥೆ ಕಲ್ಪಿಸಬೇಕು. ಶಾಲೆಯಿಂದ ಮನೆಗೆ ಮರಳುವಾಗ ಅದನ್ನು ಹಿಂಪಡೆಯಬೇಕು
- ಬೋಧನೆ, ಶಿಸ್ತು ಅಥವಾ ಒಟ್ಟಾರೆ ಶೈಕ್ಷಣಿಕ ವಾತಾವರಣಕ್ಕೆ ಸ್ಮಾರ್ಟ್‌ಫೋನ್‌ಗಳು ಅಡ್ಡಿಯಾಗಬಾರದು. ಈ ದಿಸೆಯಲ್ಲಿ, ತರಗತಿಯಲ್ಲಿ ಅವುಗಳ ಬಳಕೆ ನಿಷೇಧಿಸಬೇಕು
- ಶಾಲೆಯ ಆವರಣ ಮತ್ತು ಶಾಲಾ ವಾಹನಗಳಲ್ಲಿ ಕ್ಯಾಮೆರಾ ಮತ್ತು ವಿಡಿಯೊ ರೆಕಾರ್ಡಿಂಗ್ ಸೌಲಭ್ಯ ಬಳಸುವುದನ್ನು ನಿರ್ಬಂಧಿಸಬೇಕು
- ಸುರಕ್ಷತೆ ಮತ್ತು ಸಂವಹನದ ಉದ್ದೇಶಗಳಿಗಾಗಿ ಮಾತ್ರ ಬಳಕೆಗೆ ಅನುಮತಿಸಬೇಕು. ಮನರಂಜನೆಯ ಬಳಕೆಗೆ ಅನುಮತಿ ನೀಡಬಾರದು
- ಶಾಲೆಯಲ್ಲಿ ಸ್ಮಾರ್ಟ್‌ಫೋನ್‌ಗಳ ಬಳಕೆಯನ್ನು ನಿಯಂತ್ರಿಸುವ ಮತ್ತು ಮೇಲ್ವಿಚಾರಣೆಗೆ ಸಂಬಂಧಿಸಿದ ನೀತಿಯನ್ನು ರೂಪಿಸುವಾಗ ಪೋಷಕರು, ಶಿಕ್ಷಕರು ಮತ್ತು ತಜ್ಞರೊಂದಿಗೆ ಸಮಾಲೋಚನೆ ನಡೆಸಬೇಕು
- ನಿಯಮ ಉಲ್ಲಂಘಿಸುವ ವಿದ್ಯಾರ್ಥಿಗಳ ವಿರುದ್ಧ ತೀರಾ ಕಠಿಣ ಎನಿಸುವಂತಹ ಶಿಸ್ತುಕ್ರಮ ಜರುಗಿಸಬಾರದು
- ನಿಯಮ ಉಲ್ಲಂಘಿಸಿದ ವಿದ್ಯಾರ್ಥಿಗಳ ಸ್ಮಾರ್ಟ್‌ಫೋನ್‌ಗಳನ್ನು ನಿರ್ದಿಷ್ಟ ಅವಧಿಗೆ ಮುಟ್ಟುಗೋಲು ಹಾಕಿಕೊಳ್ಳುವ ಮತ್ತು ನಿರ್ದಿಷ್ಟ ದಿನಗಳವರೆಗೆ ಸ್ಮಾರ್ಟ್‌ಫೋನ್ ಶಾಲೆಗೆ ತರುವುದಕ್ಕೆ ನಿರ್ಬಂಧ ಹೇರುವುದನ್ನು ಶಿಸ್ತುಕ್ರಮವಾಗಿ ಪರಿಗಣಿಸಬಹುದು

ಒಳಪುಟಗಳಲ್ಲಿ



'ರೋಹಿತ್ ದಪ್ಪ': 'ಎಕ್ಸ್' ಪೋಸ್ಟ್ ವಿವಾದ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕಾಂಗ್ರೆಸ್ ವಕ್ತಾರೆ ಡಾ. ಶಮಾ ಮೊಹಮ್ಮದ್ ಅವರು ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರ 'ದಪ್ಪ ದೇಹ'ದ ಕುರಿತು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಮಾಡಿದ ಪೋಸ್ಟ್ ವಿವಾದಕ್ಕೆ ಕಾರಣವಾಗಿದೆ.



ರೋಹಿತ್ ಶರ್ಮಾ

ಈ ಬೆಳವಣಿಗೆ ಬೆನ್ನಲ್ಲೇ ಶಮಾ ನಡೆಯನ್ನು ಪಕ್ಷದ ನಾಯಕರು ತರಾಟೆಗೆ ತೆಗೆದುಕೊಂಡಿದ್ದಾರೆ. ಕೂಡಲೇ ಪೋಸ್ಟ್ ಅನ್ನು ತೆಗೆದು ಹಾಕುವಂತೆ ಸೂಚಿಸಿದ್ದು, ಇಂತಹ ವರ್ತನೆಯನ್ನು ಪುನರಾವರ್ತಿಸದಂತೆ ಎಚ್ಚರಿಕೆ ನೀಡಿದ್ದಾರೆ.

ಪೋಸ್ಟ್‌ನಲ್ಲಿ ಏನಿತ್ತು?: 'ರೋಹಿತ್ ಶರ್ಮಾ ದಪ್ಪಗಾಗಿದ್ದಾರೆ. ತೂಕವನ್ನು ಇಳಿಸಿಕೊಳ್ಳಬೇಕಾಗಿದೆ' ಎಂದು ಡಾ. ಶಮಾ ಮೊಹಮ್ಮದ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

11ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಪೂರ್ವ ರೈಲು ನಿಲ್ದಾಣ 13ರಿಂದ ಬಂದ್

ಹಳಿ ದುರಸ್ತಿ ಕಾಮಗಾರಿ: ನಿಲುಗಡೆ ತಾತ್ಕಾಲಿಕ ರದ್ದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರು ಪೂರ್ವ ನಿಲ್ದಾಣದಲ್ಲಿ ಹಳಿ ದುರಸ್ತಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಾರ್ಚ್ 13ರಿಂದ ನಿಲ್ದಾಣವನ್ನು ತಾತ್ಕಾಲಿಕವಾಗಿ ಮುಚ್ಚಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಬೆಂಗಳೂರು ಪೂರ್ವ ನಿಲ್ದಾಣದಲ್ಲಿ ಈಗ ಇರುವ ಎತ್ತರ-ತಗ್ಗಿನ ಪ್ಲಾಟ್‌ಫಾರ್ಮ್‌ಗಳನ್ನು ತೆಗೆದು ಹಾಕಿ ಮೂರು ಮತ್ತು ನಾಲ್ಕನೇ ಹಳಿಗಳನ್ನು ಹಾಕಲು ಯೋಜನೆ ರೂಪಿಸಲಾಗಿದೆ. ಮಾರ್ಚ್ 13ರಿಂದ ಕಾಮಗಾರಿ ಆರಂಭಿಸಲು ನಿರ್ಧರಿಸಲಾಗಿದೆ. ಈ ಮಾರ್ಗದಲ್ಲಿ 15 ಎಕ್ಸ್‌ಪ್ರೆಸ್ ಮತ್ತು 26 ಪ್ಯಾಸೆಂಜರ್, ಮೆಮು ಸೇರಿ 41 ರೈಲುಗಳ ನಿಲುಗಡೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ.

ಕೆಎಸ್‌ಆರ್ ಬೆಂಗಳೂರು-ಬಂಗಾರಪೇಟೆ-ಬೆಂಗಳೂರು, ಎಂಜಿಆರ್ ಚೆನ್ನೈ ಸೆಂಟ್ರಲ್-ಮೈಸೂರು, ತಿರುಪತಿ-ಚಾಮರಾಜನಗರ, ಎಂಜಿಆರ್ ಚೆನ್ನೈ ಸೆಂಟ್ರಲ್-ಕೆಎಸ್‌ಆರ್ ಬೆಂಗಳೂರು, ಕಡಲೂರು ಪೋರ್ಟ್-ಮೈಸೂರು, ಸಿಎಸ್‌ಎಂಟಿ ಮುಂಬೈ-ಕೆಎಸ್‌ಆರ್ ಬೆಂಗಳೂರು, ತೂತುಕುಡಿ-ಮೈಸೂರು, ಕಾಚಿಗುಡ-ಮೈಸೂರು, ಕನ್ಯಾಕುಮಾರಿ-ಕೆಎಸ್‌ಆರ್ ಬೆಂಗಳೂರು, ಜೋಲಾರಪೇಟೆ-ಕೆಎಸ್‌ಆರ್ ಬೆಂಗಳೂರು, ಭುವನೇಶ್ವರ-ಕೆಎಸ್‌ಆರ್ ಬೆಂಗಳೂರು, ಲೋಕಮಾನ್ಯ ತಿಲಕ್ ಟರ್ಮಿನಸ್-ಕೊಯಮತ್ತೂರು, ದರ್ಭಾಂಗ-ಮೈಸೂರು ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆ ಇರುವುದಿಲ್ಲ.

ಕೆಎಸ್‌ಆರ್ ಬೆಂಗಳೂರು-ಧರ್ಮಾವರಂ-ಬೆಂಗಳೂರು, ಕೆಎಸ್‌ಆರ್ ಬೆಂಗಳೂರು-ಮಾರಿಕುಪ್ಪಂ-ಬೆಂಗಳೂರು, ಕೆಎಸ್‌ಆರ್ ಬೆಂಗಳೂರು-ಬಂಗಾರಪೇಟೆ-ಬೆಂಗಳೂರು, ಕೆಎಸ್‌ಆರ್ ಬೆಂಗಳೂರು-ಧರ್ಮಪುರಿ-ಬೆಂಗಳೂರು, ಬೆಂಗಳೂರು ಕಂಟೋನ್ಮೆಂಟ್-ಕೋಲಾರ- ಕಂಟೋನ್ಮೆಂಟ್, ಕೆಎಸ್‌ಆರ್ ಬೆಂಗಳೂರು-ಕೋಲಾರ, ಕೆಎಸ್‌ಆರ್ ಬೆಂಗಳೂರು-ಶ್ರೀ ಸತ್ಯ ಸಾಯಿ ಪ್ರಶಾಂತಿ ನಿಲಯಂ-ಬೆಂಗಳೂರು, ಕೆಎಸ್‌ಆರ್ ಬೆಂಗಳೂರು-ಜೋಲಾರಪೇಟೆ-ಬೆಂಗಳೂರು, ಕೆಎಸ್‌ಆರ್ ಬೆಂಗಳೂರು-ವೈಟ್ ಫೀಲ್ಡ್-ಕೆಎಸ್‌ಆರ್ ಬೆಂಗಳೂರು, ಕೆಎಸ್‌ಆರ್ ಬೆಂಗಳೂರು-ಬಂಗಾರಪೇಟೆ, ಕುಪ್ಪಂ-ಕೆಎಸ್‌ಆರ್ ಬೆಂಗಳೂರು ರೈಲುಗಳು ಪ್ಯಾಸೆಂಜರ್ ಮತ್ತು ಮೆಮು ರೈಲುಗಳು ರದ್ದಾಗಿವೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಯೋಜನೆಗೆ ಭೂಸ್ವಾಧೀನ

ನೋಟಿಸ್‌ಗೆ ಆಕ್ಷೇಪಣೆಯ ಮಹಾಪೂರ

• ಕೆ.ಎಸ್.ಸುನಿಲ್

> **ಬಿಬಿಸಿ ಯೋಜನೆಗೆ ಸಂಬಂಧಿಸಿದಂತೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು ನೀಡಿರುವ ನೋಟಿಸ್‌ಗೆ ಜಮೀನು ಮಾಲೀಕರು ಆಕ್ಷೇಪಣೆ ಅರ್ಜಿ ಸಲ್ಲಿಸುತ್ತಿದ್ದಾರೆ. ಅರ್ಜಿ ಸಲ್ಲಿಸಲು ಇನ್ನೂ ಕಾಲಾವಕಾಶ ಇದೆ. ಅರ್ಜಿಗಳ ಪರಿಶೀಲನೆ ಪೂರ್ಣಗೊಂಡ ಬಳಿಕ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗುವುದು**
> **ಜಗದೀಶ್,** ಬಿಡಿಎ (ಹೆಚ್ಚುವರಿ ಭೂಸ್ವಾಧೀನ) ಉಪ ಆಯುಕ್ತ

ಬಿಡಿಎ ಸುದ್ದಿ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ (ಬೆಂಗಳೂರು ಬ್ಯುಸಿನೆಸ್ ಕಾರಿಡಾರ್) ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನುಗಳ ಮಾಲೀಕರಿಗೆ ನೋಟಿಸ್ ನೀಡಿದ ಬೆನ್ನಲ್ಲೇ ಹತ್ತು ಸಾವಿರಕ್ಕೂ ಅಧಿಕ ಆಕ್ಷೇಪಣೆ ಅರ್ಜಿಗಳು ಸಲ್ಲಿಕೆಯಾಗಿವೆ.

ಬಿಬಿಸಿ ಯೋಜನೆಗಾಗಿ ಭೂ ಸ್ವಾಧೀನ ಪ್ರಕ್ರಿಯೆ ನಡೆಸಲು ನೇಮಕ ಮಾಡಿರುವ ಒಂಬತ್ತು ವಿಶೇಷ ಭೂ ಸ್ವಾಧೀನಾಧಿಕಾರಿಗಳ ಪೈಕಿ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಬೈಲಕೋನೇನಹಳ್ಳಿ, ಲಕ್ಷ್ಮೀಪುರ, ದಾಸನಪುರ ಹೋಬಳಿಯ ಮಾದವಾರ, ಬಿಡ್ಡರಹಳ್ಳಿ, ಕದಿರೇನ ಹಳ್ಳಿ, ಹಾರೋಕ್ಯಾತನಹಳ್ಳಿ, ಸಿದ್ದನ ಹೊಸಹಳ್ಳಿ, ಮಾದನಾಯಕನಹಳ್ಳಿ ಮತ್ತು ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಗೊಲ್ಲಹಳ್ಳಿ, ಹುಲ್ಲಹಳ್ಳಿ, ಕನ್ನನಾಯಕನ ಅಗ್ರಹಾರ, ಲಕ್ಷ್ಮೀಪುರ, ಸಕಲವಾರ, ವಡೇರಹಳ್ಳಿಯ ಜಮೀನುಗಳ ಮಾಲೀಕರಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ.

ಸೂಕ್ತ ದಾಖಲೆಗಳೊಂದಿಗೆ ಆಕ್ಷೇಪಣೆ ಸಲ್ಲಿಸಲು 30 ದಿನ ಕಾಲಾವಕಾಶ ನೀಡಲಾಗಿತ್ತು. ಬಿಡಿಎ ಭೂ ಸ್ವಾಧೀನಾಧಿಕಾರಿ ಕಚೇರಿಗಳಿಗೆ ನಿತ್ಯ ನೂರಾರು ಅರ್ಜಿಗಳು ಸಲ್ಲಿಕೆಯಾಗುತ್ತಿವೆ. ಈಗಾಗಲೇ ಹತ್ತು ಸಾವಿರಕ್ಕೂ ಅಧಿಕ ಆಕ್ಷೇಪಣೆಗಳು ಸಲ್ಲಿಕೆಯಾಗಿವೆ. ಇನ್ನೂ ಆರು ಭೂಸ್ವಾಧೀನಾಧಿಕಾರಿಗಳ ವ್ಯಾಪ್ತಿಯ ಗ್ರಾಮಗಳ ಜಮೀನುಗಳ ಮಾಲೀಕರಿಗೆ ನೋಟಿಸ್ ನೀಡುವುದು ಬಾಕಿ ಇದೆ.

ಆಕ್ಷೇಪಣೆ ಅರ್ಜಿಯಲ್ಲಿ ಏನಿದೆ?: '2006ರಲ್ಲಿ ಅಧಿಸೂಚನೆ ಹೊರಡಿಸಿ, ಈಗ ಜಮೀನು ಸ್ವಾಧೀನ ಪಡಿಸಿಕೊಳ್ಳುತ್ತಿರುವುದು ಅವೈಜ್ಞಾನಿಕ', 'ಸ್ವಾಧೀನ ಪಡಿಸಿಕೊಳ್ಳುವ ಜಮೀನಿಗೆ ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಪರಿಹಾರ ನೀಡಬೇಕು', 'ಈಗಾಗಲೇ ಮನೆಗಳನ್ನು ನಿರ್ಮಿಸಲಾಗಿದೆ, ಜಮೀನು ಕಳೆದುಕೊಂಡು ಎಲ್ಲಿಗೆ ಹೋಗಬೇಕು? ಬಿಬಿಸಿ ಯೋಜನೆಯೇ ಅಗತ್ಯವಿಲ್ಲ, 'ಸರ್ಕಾರ ನೀಡುವ ಪರಿಹಾರ ಬೇಡ, ನಮ್ಮ ಜಮೀನನ್ನು ಕಿತ್ತುಕೊಳ್ಳಬೇಡಿ' ಎಂಬ ವಿರೋಧವನ್ನು ಜಮೀನುಗಳ ಮಾಲೀಕರು ಆಕ್ಷೇಪಣೆ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಯೋಜನೆಗೆ 2,600 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಬೇಕಿದೆ. 100 ಮೀಟರ್ ಅಗಲದ ಕಾರಿಡಾರ್ ನಿರ್ಮಿಸಲು ಯೋಜನೆ ರೂಪಿಸಲಾಗಿದ್ದು, ಕಾರಿಡಾರ್‌ನ ಎರಡೂ ಬದಿಯ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವ ಪ್ರಸ್ತಾವವಿದೆ. 50 ಮೀಟರ್ ಅಗಲದಲ್ಲಿ 6 ಪಥಗಳ ರಸ್ತೆ ನಿರ್ಮಿಸಲಾಗುತ್ತದೆ. ಉಳಿದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲು ನಿರ್ಧರಿಸಲಾಗಿದೆ.

ಸಂಚಾರ ದಟ್ಟಣೆ ತಗ್ಗಿಸುವ ಸಲುವಾಗಿ ತುಮಕೂರು ರಸ್ತೆ ಮತ್ತು ಹೊಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ 73 ಕಿ.ಮೀ. ಉದ್ದದ ರಸ್ತೆ ನಿರ್ಮಿಸುವ ಯೋಜನೆ ಇದಾಗಿದೆ. 77 ಗ್ರಾಮಗಳಲ್ಲಿ ಈ ಮಾರ್ಗ ಹಾದು ಹೋಗಲಿದೆ. ತುಮಕೂರು ರಸ್ತೆಯ ಮಾದನಾಯಕಹಳ್ಳಿ ಬಳಿಯ ನೈಸ್ ಜಂಕ್ಷನ್‌ನಿಂದ ಆರಂಭವಾಗುವ ಕಾರಿಡಾರ್, ಹೆಸರಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಬಳ್ಳಾರಿ ರಸ್ತೆ, ಹೆಣ್ಣೂರು ಹಳೇ ಮದ್ರಾಸ್ ರಸ್ತೆ, ವೈಟ್‌ಫೀಲ್ಡ್, ಚನ್ನಸಂದ್ರ, ಸರ್ಜಾಪುರ ರಸ್ತೆ ಮಾರ್ಗವಾಗಿ ಹೊಸೂರು ರಸ್ತೆ ತಲುಪಲಿದೆ. ಹೆಸರಘಟ್ಟ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ವೈಟ್‌ಫೀಲ್ಡ್, ಹೊಸೂರು ರಸ್ತೆಗಳನ್ನು ಇದು ಸಂಪರ್ಕಿಸಲಿದೆ.

ರಸ್ತೆ ನಿರ್ಮಾಣಕ್ಕೆ ₹6 ಸಾವಿರ ಕೋಟಿ

ಬಿಬಿಸಿ ನಿರ್ಮಾಣಕ್ಕೆ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯದ ಅಧೀನದ ವಸತಿ ಮತ್ತು ನಗರಾಭಿವೃದ್ಧಿ ಕಾರ್ಪೊರೇಷನ್ (ಹುಡ್ಕೊ) ₹ 27 ಸಾವಿರ ಕೋಟಿ ಸಾಲ ನೀಡಲು ಒಪ್ಪಿರುವುದರಿಂದ ಸರ್ಕಾರದ ಖಾತರಿ ಮೂಲಕ ಸಾಲ ಪಡೆಯಲಾಗುತ್ತಿದೆ. ಇದರಲ್ಲಿ ಭೂಸ್ವಾಧೀನದ ಪರಿಹಾರಕ್ಕೆ ₹21 ಸಾವಿರ ಕೋಟಿ ಹಾಗೂ ರಸ್ತೆ ನಿರ್ಮಾಣಕ್ಕೆ ₹6 ಸಾವಿರ ಕೋಟಿ ವೆಚ್ಚವಾಗಲಿದೆ. ಈ ಯೋಜನೆ ಪೂರ್ಣಗೊಳ್ಳಲು 3 ವರ್ಷ ಬೇಕಾಗಿರುವ ಕಾರಣ, ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರವೇ ನಾಲ್ಕು ವರ್ಷ ಭರಿಸಲಿದೆ. ಆ ಅವಧಿಯೊಳಗೆ ಸಾಲ ಮರುಪಾವತಿಸಬೇಕು ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ನಿಧನ ವಾರ್ತೆ

ಎಂ.ವಿ. ಗೌರಮ್ಮ



ಬೆಂಗಳೂರು: ಕುಂಬಳಗೋಡು ನಿವಾಸಿ ಎಂ.ವಿ. ಗೌರಮ್ಮ (75) ಸೋಮವಾರ ನಿಧನರಾದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ.

ಸೋಮವಾರ ಸಂಜೆ ಕುಂಬಳಗೋಡು ಸಾರ್ವಜನಿಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಮೆಟ್ರೊ ನಿಲ್ದಾಣ: ಬಳಕೆಗಿಲ್ಲ ಎಟಿಎಂ

2 ತಿಂಗಳಿನಿಂದ ಸಮಸ್ಯೆ ಇದ್ದರೂ ಸರಿಪಡಿಸದ ಬಿಎಂಆರ್‌ಸಿಎಲ್, ಎಸ್‌ಬಿಐ

• ಬಾಲಕೃಷ್ಣ ಪಿ.ಎಚ್.

ಮುಖ್ಯಾಂಶಗಳು
- ಜನಬಳಕೆಗೆ ಅಳವಡಿಸಿದ ಎಟಿಎಂ ಮೂಲೆಗುಂಪು
- ಜನ ಆನ್‌ಲೈನ್ ವ್ಯವಹಾರ ಮಾಡಲೆಂದು ಸುಮ್ಮನಿರುವ ಬಿಎಂಆರ್‌ಸಿಎಲ್
- ಪ್ರದರ್ಶನಕ್ಕಷ್ಟೇ ಸೀಮಿತವಾದ ಎಟಿಎಂಗಳು

ಬೆಂಗಳೂರು: ನಮ್ಮ ಮೆಟ್ರೊ ನಿಲ್ದಾಣಗಳಲ್ಲಿ ಇರುವ ಎಟಿಎಂಗಳು ಕಾರ್ಯನಿರ್ವಹಿಸುತ್ತಿಲ್ಲ. ಕೆಲವು ಕಡೆಗಳಲ್ಲಿ ಎಟಿಎಂ ಸರಿ ಇದ್ದರೂ ಹಣ ತುಂಬಿಲ್ಲ. ಉಳಿದೆಡೆ ನಿರ್ವಹಣೆ ಇಲ್ಲದೇ ಕೆಟ್ಟಿವೆ. ಜನರು ನಗದು ತೆಗೆದುಕೊಳ್ಳಲು ಬಂದು ಹಣ ಇಲ್ಲದೇ ನಿರಾಸೆಗೊಂಡು ವಾಪಸ್ಸಾಗುತ್ತಿದ್ದಾರೆ.

ಎಟಿಎಂಗಳು ಕಾರ್ಯ ನಿರ್ವಹಿಸುವುದನ್ನು ನಿಲ್ಲಿಸಿ ಎರಡು ತಿಂಗಳು ಕಳೆದರೂ ಸರಿಪಡಿಸಲು ಬಿಎಂಆರ್‌ಸಿಎಲ್ ಆಗಲಿ, ಬ್ಯಾಂಕ್ ಆಗಲಿ ಕ್ರಮ ಕೈಗೊಂಡಿಲ್ಲ.

ಕೇಂದ್ರ ನಿಲ್ದಾಣವಾದ ಮೆಜೆಸ್ಟಿಕ್‌ನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಎರಡು ಎಟಿಎಂಗಳಿವೆ. ಎರಡಕ್ಕೂ ಬ್ಯಾಂಕ್‌ನವರು ಹಣ ತುಂಬುತ್ತಿಲ್ಲ. 'ಕರೆಂಟ್ಲಿ ದಿಸ್ ಎಟಿಎಂ ಕೆನಾಟ್ ಡಿಸ್ಪೆನ್ಸ್ ಕ್ಯಾಶ್' ಎಂದು ಅದರಲ್ಲಿ ತೋರಿಸುತ್ತಿದ್ದರೂ ಗಮನಿಸದೇ ಹಲವರು ಕಾರ್ಡ್ ಹಾಕಿ ದುಡ್ಡಿಲ್ಲ ಎಂದು ಗೊತ್ತಾಗಿ ಬೈದುಕೊಂಡು ಹೋಗುತ್ತಿದ್ದಾರೆ.

ಶ್ರೀರಾಂಪುರ ಮೆಟ್ರೊ ನಿಲ್ದಾಣದಲ್ಲಿ ಎರಡು ಎಟಿಎಂಗಳಿದ್ದು, ಒಂದರಲ್ಲಿ ದುಡ್ಡಿಲ್ಲ ಎಂಬ ಮಾಹಿತಿಯೇ ಇರುವುದಿಲ್ಲ. ಕಾರ್ಡ್ ಹಾಕಿದ ಮೇಲೆ ಭಾಷೆಯ ಆಯ್ಕೆ ಬರುತ್ತದೆ. ಇಂಗ್ಲಿಷ್, ಹಿಂದಿ, ಕನ್ನಡ ಮೂರು ಆಯ್ಕೆಗಳಿದ್ದು, ಯಾವುದನ್ನು ಒತ್ತಿದರೂ ಹಿಂದಿಯೇ ಆಯ್ಕೆಯಾಗುತ್ತದೆ. ಹಿಂದಿ ಓದಲು ಬಾರದವರನ್ನು ಇದು ತಬ್ಬಿಬ್ಬುಗೊಳಿಸುತ್ತಿದೆ. ಹಿಂದಿ ಗೊತ್ತಿರುವವರಿಗೂ ಮುಂದಿನ ಆಯ್ಕೆ ಒತ್ತಿದರೆ ಅದು ಆಯ್ಕೆಯೇ ಆಗುವುದಿಲ್ಲ. ಅಲ್ಲಿಗೆ ನಿಂತು ಬಿಡುತ್ತದೆ. ಇನ್ನೊಂದು ಎಟಿಎಂ ಬಳಿ ಹೋದರೆ ಡಿವೈಸ್ ದುರಸ್ತಿಯಲ್ಲಿದೆ ಎಂಬುದನ್ನು ತೋರಿಸುತ್ತಿದೆ.

ಯಶವಂತಪುರ, ಮಹಾಕವಿ ಕುವೆಂಪು ಮೆಟ್ರೊ ನಿಲ್ದಾಣ, ಬನಶಂಕರಿ ಸಹಿತ ವಿವಿಧ ಮೆಟ್ರೊ ನಿಲ್ದಾಣಗಳಲ್ಲಿ ಎಟಿಎಂಗಳು ಪೂರ್ತಿ ಕೆಟ್ಟು ನಿಂತಿವೆ. ಎಂ.ಜಿ. ರಸ್ತೆಯಂಥ ಪ್ರಮುಖ ನಿಲ್ದಾಣಗಳಲ್ಲಿ ಬ್ಯಾಂಕ್‌ನವರೇ ಎಟಿಎಂ ಅನ್ನು ತೆರವುಗೊಳಿಸಿದ್ದಾರೆ.

'ನಾವು ಮೆಟ್ರೊ ನಿಲ್ದಾಣದ ಬಳಿಯೇ ಆಟೊ ನಿಲ್ಲಿಸಿ ಪ್ರಯಾಣಿಕರಿಗಾಗಿ ಕಾಯುತ್ತಿರುತ್ತೇವೆ. ಅಗತ್ಯ ಬಿದ್ದಾಗ ಇಲ್ಲಿಯೇ ಮೆಟ್ರೊ ಆವರಣದ ಒಳಗೆ ಇರುವ ಎಟಿಎಂಗೆ ಹೋಗಿ ಹಣ ಡ್ರಾ ಮಾಡಿಕೊಂಡು ಬರುತ್ತಿದ್ದೆವು. ಸುಮಾರು ಎರಡು ತಿಂಗಳಿನಿಂದ ಎಟಿಎಂ ಕೆಲಸ ಮಾಡುತ್ತಿಲ್ಲ. ಎಟಿಎಂ ಎಲ್ಲಿದೆ ಎಂದು ಹುಡುಕಿಕೊಂಡು ಹೋಗುವಂತಾಗಿದೆ. ಅನೇಕರು ದುಡ್ಡು ಡ್ರಾ ಮಾಡಲೆಂದು ಬಂದು ಎಟಿಎಂ ಕೆಲಸ ಮಾಡುತ್ತಿಲ್ಲ ಎಂದು ಗೊತ್ತಾಗಿ ವಾಪಸ್ಸಾಗುತ್ತಿದ್ದಾರೆ' ಎಂದು ಮಹಾಕವಿ ಕುವೆಂಪು ಮೆಟ್ರೊ ನಿಲ್ದಾಣ ಬಳಿಯ ಆಟೊ ಚಾಲಕ ರಾಜು ಅವರು ಬೇಸರ ವ್ಯಕ್ತಪಡಿಸಿದರು.

'ಬಹಳ ಸಮಯದಿಂದ ಬ್ಯಾಂಕ್‌ನವರು ಎಟಿಎಂ ನಿರ್ವಹಣೆಯನ್ನೇ ಮಾಡುತ್ತಿಲ್ಲ. ಎಟಿಎಂನಲ್ಲಿ ದುಡ್ಡು ಬಾರದೇ ಇದ್ದಾಗ ಜನರು ನಮ್ಮನ್ನು ಕೇಳುತ್ತಾರೆ. ಎಟಿಎಂ ನಿರ್ವಹಣೆ ನಮ್ಮ ಕೆಲಸ ಅಲ್ಲ. ಬ್ಯಾಂಕ್‌ನವರೇ ಮಾಡುವುದು ಎಂದು ನಾವು ಉತ್ತರಿಸಿದರೂ ಜನರು ನಮಗೇ ಬೈಯುತ್ತಾರೆ' ಎಂದು ರಾಜಾಜಿನಗರ ಮೆಟ್ರೊ ನಿಲ್ದಾಣದ ಸಿಬ್ಬಂದಿ ತಿಳಿಸಿದರು.

'ಕೆಲವೇ ದಿನಗಳಲ್ಲಿ ಸರಿಯಾಗಲಿದೆ'

'ನಮ್ಮ ಮೆಟ್ರೊ' ನಿಲ್ದಾಣಗಳಲ್ಲಿರುವ ಕೆಲ ಎಟಿಎಂಗಳು ಕಾರ್ಯನಿರ್ವಹಿಸದಿರುವುದು ಗೊತ್ತಿದೆ. ಈ ಬಗ್ಗೆ ಎಸ್‌ಬಿಐಗೆ ಮಾಹಿತಿ ನೀಡಿದ್ದೇವೆ' ಎಂದು ಬಿಎಂಆರ್‌ಸಿಎಲ್ ಕಾರ್ಯನಿರ್ವಾಹಕ ನಿರ್ದೇಶಕಿ ಕಲ್ಪನಾ ಕಟಾರಿಯಾ ತಿಳಿಸಿದರು.

'ನಮ್ಮಲ್ಲಿ ಎಸ್‌ಬಿಐಗೆ ಸಂಬಂಧಿಸಿದ ಎಟಿಎಂಗಳೇ ಬಹುತೇಕ ಕಡೆಗಳಲ್ಲಿ ಇವೆ. ಅವು ಕಾರ್ಯನಿರ್ವಹಿಸದೇ ಇರುವ ಬಗ್ಗೆ ಕೆಲವು ದಿನಗಳ ಹಿಂದೆ ಪತ್ರ ಬರೆಯಲಾಗಿದೆ. ಒಂದು ವಾರದ ಒಳಗೆ ಎಲ್ಲ ಎಟಿಎಂಗಳು ಸರಿಯಾಗಲಿವೆ' ಎಂದು ಅಧಿಕಾರಿಯೊಬ್ಬರು ವಿಶ್ವಾಸ ವ್ಯಕ್ತಪಡಿಸಿದರು.



ಮಹಾಕವಿ ಕುವೆಂಪು ಮೆಟ್ರೊ ನಿಲ್ದಾಣದಲ್ಲಿನ ಎಟಿಎಂ



ನಗರದಲ್ಲಿ ಭಾನುವಾರ 'ಅಂಕಿತ ಪುಸ್ತಕ' ಆಯೋಜಿಸಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಎಚ್. ಡುಂಡಿರಾಜ್ ಅವರ 'ಹದಿನಾಲ್ಕು ಕಿರು ಹಾಸ್ಯ ನಾಟಕಗಳು', 'ಸುಧಾ' ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಅವರ 'ಇಳಿಸಲಾಗದ ಶಿಲುಬೆ', 'ಇಲ್ಲಿಂದ ಮುಂದೆಲ್ಲ ಕಥೆ', ಪಾರ್ವತಿ ಜಿ. ಐತಾಳ್ ಅವರ 'ಅಂತರಂಗದ ಸ್ವಗತ' ಪುಸ್ತಕಗಳನ್ನು ಅಗ್ರಹಾರ ಕೃಷ್ಣಮೂರ್ತಿ ಬಿಡುಗಡೆ ಮಾಡಿದರು

ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸಿ

ಕೆಂಪೇಗೌಡ ಬಡಾವಣೆಗೆ ಶಾಸಕ ಎಸ್‌.ಟಿ.ಸೋಮಶೇಖರ್ ಭೇಟಿ

ಪ್ರಜಾವಾಣಿ ವಾರ್ತೆ


ಸೋಮಶೇಖರ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ಕಾಮಗಾರಿಯನ್ನು ಒಂದು ವರ್ಷದೊಳಗೆ ಪೂರ್ಣಗೊಳಿಸುವಂತೆ ಯಶವಂತಪುರ ಶಾಸಕ ಎಸ್‌.ಟಿ. ಸೋಮಶೇಖರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳಿಗೆ ಸೂಚಿಸಿದರು.

ಕೆಂಪೇಗೌಡ ಬಡಾವಣೆಗೆ ಭಾನುವಾರ ಭೇಟಿ ನೀಡಿದ ಸೋಮಶೇಖರ್, ರಸ್ತೆ, ಬಡಾವಣೆ ಕಾಮಗಾರಿ, ರೈಲ್ವೆ ಕೆಳಸೇತುವೆ ಹಾಗೂ ಎಸ್‌ಟಿಪಿ ಕಾರ್ಯಗಳನ್ನು ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

'ಆರು ತಿಂಗಳಿನಿಂದ ಒಂದು ವರ್ಷದೊಳಗೆ ರಸ್ತೆ ಡಾಂಬರೀಕರಣ ಕಾಮಗಾರಿ ಪೂರ್ಣಗೊಳಿಸಿದರೆ ಉತ್ತಮ. ಇದರಿಂದ ಇಲ್ಲಿನ ರೈತರಿಗೂ ಅನುಕೂಲವಾಗಲಿದೆ. ಏಪ್ರಿಲ್‌ನಲ್ಲಿ ಮತ್ತೆ ಪರಿಶೀಲಿಸಲಾಗುವುದು' ಎಂದು ಶಾಸಕರು ಹೇಳಿದರು.

'ರೈಲ್ವೆ ಇಲಾಖೆಯಿಂದ ಅನುಮೋದನೆ ಪಡೆದು ರೈಲ್ವೆ ಕೆಳಸೇತುವೆ ಕಾಮಗಾರಿ ಮಾಡಲಾಗುತ್ತಿದೆ. ಕೆಳಸೇತುವೆಯಲ್ಲಿ ಇಳಿಜಾರು ಪ್ರದೇಶ ಇರುವುದರಿಂದ ಮಳೆ ನೀರು ಸಂಗ್ರಹವಾಗುತ್ತದೆ. ಮಳೆ ನೀರು ತೆರವುಗೊಳಿಸುವ ವಿಚಾರದ ಬಗ್ಗೆ ಬಿಎಂಆರ್‌ಸಿಎಲ್‌ಗೆ ಜಾಗ ತೋರಿಸುವ ಪ್ರಕ್ರಿಯೆಗೆ ಸಮಯ ಹಿಡಿದ ಕಾರಣ ಕಾಮಗಾರಿಯು ವಿಳಂಬವಾಗಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

'ಕೆಂಪೇಗೌಡ ಬಡಾವಣೆಯ 1, 2, 3, 4, 8 ಮತ್ತು 9ನೇ ಬ್ಲಾಕ್‌ನ ರಸ್ತೆಗಳ ಡಾಂಬರೀಕರಣಕ್ಕೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿ ಪೂರ್ಣಗೊಳಿಸಲು 24 ತಿಂಗಳು ನೀಡಲಾಗಿದೆ. 6 ಮತ್ತು 7ನೇ ಬ್ಲಾಕ್ ರಸ್ತೆಗಳ ಡಾಂಬರೀಕರಣ ಶೇಕಡ 90 ಹಾಗೂ 5ನೇ ಬ್ಲಾಕ್ ರಸ್ತೆ ಡಾಂಬರೀಕರಣ ಶೇಕಡ 60 ಪೂರ್ಣಗೊಂಡಿದೆ' ಎಂದು ಹೇಳಿದರು.

ಬಳಿಕ ಕೆಂಪೇಗೌಡ ಬಡಾವಣೆಯ ಒಳಚರಂಡಿಯು ಸಂಪರ್ಕ ಪಡೆದು ಕೊಂಡಿರುವ ಎಸ್‌ಟಿಪಿಗಳನ್ನು ಶಾಸಕರು ಪರಿಶೀಲಿಸಿದರು.

ಬಡಾವಣೆ ಸಮೀಪದಲ್ಲಿರುವ ಗ್ರಾಮಗಳಿಂದಲೂ ಇದೇ ಎಸ್‌ಟಿಪಿಗೆ ಒಳಚರಂಡಿ ಸಂಪರ್ಕ ಕೊಡಲಾಗಿದೆ ಎಂಬ ಮಾಹಿತಿಗಳನ್ನು ಬಿಡಿಎ ಅಧಿಕಾರಿಗಳು ನೀಡಿದರು.

'ಬೀದಿಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ವಿತರಿಸಿ'

ಪ್ರಜಾವಾಣಿ ವಾರ್ತೆ


ತುಷಾರ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸಮೀಕ್ಷೆ ಮೂಲಕ ಗುರುತಿಸಿರುವ ಬೀದಿಬದಿ ವ್ಯಾಪಾರಿಗಳಿಗೆ ತ್ವರಿತವಾಗಿ ಗುರುತಿನ ಚೀಟಿ ವಿತರಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಅಧಿಕಾರಿಗಳ ಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, 'ಎಂಟು ವಲಯಗಳಲ್ಲಿ ಸುಮಾರು 27 ಸಾವಿರ ಬೀದಿಬದಿ ವ್ಯಾಪಾರಿಗಳನ್ನು ಗುರುತಿಸಲಾಗಿದೆ. ಗುರುತಿನ ಚೀಟಿ ಯಾವ ಮಾದರಿಯಲ್ಲಿ ಇರಬೇಕು ಎಂಬುದನ್ನು ಅಂತಿಮಗೊಳಿಸಿ, ಎಲ್ಲರಿಗೂ ವಿತರಿಸಬೇಕು. ಆ ಬಳಿಕ ಗುರುತಿಸಿರುವಂತಹ ವ್ಯಾಪಾರ ವಲಯಗಳಲ್ಲಿ, ವ್ಯಾಪಾರ ಮಾಡಲು ಅನುವು ಮಾಡಿಕೊಡಬೇಕು' ಎಂದರು.

ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಬೇಕು. ಕಲ್ಯಾಣ ವಿಭಾಗದಡಿ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ಸಲ್ಲಿಸಲಾಗಿರುವ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಸೌಲಭ್ಯವನ್ನು ಶೀಘ್ರ ಒದಗಿಸಬೇಕು ಎಂದು ಹೇಳಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಕೆ. ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹ್ಲೋಟ್, ವಲಯ ಆಯುಕ್ತರಾದ ಸತೀಶ್, ಅರ್ಚನಾ, ರಮ್ಯಾ, ಕರೀಗೌಡ, ಸ್ನೇಹಲ್, ದಿಗ್ವಿಜಯ್ ಬೋಡ್ಕೆ ಉಪಸ್ಥಿತರಿದ್ದರು.



ಓವಲ್ ಕಛೇರಿಯಲ್ಲಿ ಇಬ್ಬರು ಅಧ್ಯಕ್ಷರು ಜಗಳವಾಡಿದರು !

ರಾಜಕಾಲುವೆ: ವಿಶ್ವಬ್ಯಾಂಕ್‌ನಿಂದ ₹1,700 ಕೋಟಿ ಸಾಲ; ಬಿಬಿಎಂಪಿಯಿಂದ ₹300 ಕೋಟಿ ವೆಚ್ಚ


₹2 ಸಾವಿರ ಕೋಟಿ ವೆಚ್ಚಕ್ಕೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 179 ಕಿ.ಮೀ. ಉದ್ದದ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸುವ ₹2 ಸಾವಿರ ಕೋಟಿ ವೆಚ್ಚದ ಕ್ರಿಯಾ ಯೋಜನೆಗಳಿಗೆ ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

ವಿಶ್ವಬ್ಯಾಂಕ್ ನೆರವಿನ 'ಕರ್ನಾಟಕ ಜಲ ಭದ್ರತೆ ಮತ್ತು ವಿಪತ್ತು ನಿರೋಧಕ ಕಾರ್ಯಕ್ರಮ'ದಡಿ ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಜಕಾಲುವೆ ಅಭಿವೃದ್ಧಿಗೊಳಿಸುವ ಯೋಜನೆಯನ್ನು ರಾಜ್ಯ ಸರ್ಕಾರ 2024–25ನೇ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಿತ್ತು. 2025ರ ಫೆಬ್ರುವರಿ 20ರಂದು ನಡೆದ ಸಂಪುಟ ಸಭೆಯಲ್ಲಿ ಯೋಜನೆ ಅನುಷ್ಠಾನಕ್ಕೆ ನಿರ್ಣಯ ಕೈಗೊಳ್ಳಲಾಗಿತ್ತು. ಅದರಂತೆ, ಕ್ರಿಯಾಯೋಜನೆಗಳ ಅನುಷ್ಠಾನಕ್ಕೆ ಮಾರ್ಚ್ 1ರಂದು ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯ ಹೊರವಲಯದ ಯಲಹಂಕ, ಮಹದೇವಪುರ, ಬೊಮ್ಮನಹಳ್ಳಿ, ರಾಜ-ರಾಜೇಶ್ವರಿನಗರ ಮತ್ತು ದಾಸರಹಳ್ಳಿ ವಲಯಗಳಲ್ಲಿ 179.90 ಕಿ.ಮೀ ಉದ್ದದ ತಡೆಗೋಡೆರಹಿತ ರಾಜಕಾಲುವೆಗಳಿಗೆ ತಡೆಗೋಡೆಯನ್ನು ನಿರ್ಮಿಸುವ ಕಾಮಗಾರಿಗಳಿಗೆ ಅಂದಾಜು ಪಟ್ಟಿ ಹಾಗೂ ವಿಸ್ತೃತ ಯೋಜನಾ ವರದಿಗಳನ್ನು ಅನುಮೋದಿಸಬೇಕು ಎಂದು ಬಿಬಿಎಂಪಿ ಪ್ರಸ್ತಾವ ಸಲ್ಲಿಸಿತ್ತು.


ರಾಜಕಾಲುವೆ (ಸಂಗ್ರಹ ಚಿತ್ರ)

ಅಂಕಿ ಅಂಶ

₹2,000 ಕೋಟಿ
ರಾಜಕಾಲುವೆ ಅಭಿವೃದ್ಧಿಗೆ ವೆಚ್ಚ

₹1,600 ಕೋಟಿ; ಹೊರ ವಲಯದ ಐದು ವಲಯಗಳಲ್ಲಿ 247 ಕಾಮಗಾರಿಗಳಿಗೆ ವೆಚ್ಚ

₹400 ಕೋಟಿ; ಒಳವಲಯ, ಹೊರ ವಲಯದಲ್ಲಿ 104 ಕಾಮಗಾರಿಗಳು

ನಗರದ ಒಳಭಾಗದ ಪೂರ್ವ, ಪಶ್ಚಿಮ, ದಕ್ಷಿಣ ವಲಯಗಳು ಸೇರಿದಂತೆ ಆಯ್ದ ಹೊರಭಾಗದ ವಲಯಗಳ ಪ್ರದೇಶಗಳಲ್ಲಿ 80 ಕಿ.ಮೀ ಉದ್ದದ ರಾಜಕಾಲುವೆಗಳ ಶಿಥಿಲಗೊಂಡ ಕಲ್ಲು ಕಟ್ಟಡ ದುರಸ್ತಿ ಮತ್ತು ಮರು ವಿನ್ಯಾಸ ಗೊಳಿಸಲು ವರದಿ ಮತ್ತು ಅಂದಾಜು ಪಟ್ಟಿ ಸಲ್ಲಿಸಿತ್ತು. ಈ ಎರಡೂ ಪ್ರಸ್ತಾವಗಳಿಗೆ ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡಿದೆ.

ರಾಜಕಾಲುವೆ ವಿವರ

859.90 ಕಿ.ಮೀ	ನಗರದಲ್ಲಿರುವ ರಾಜಕಾಲುವೆಗಳ ಉದ್ದ
75 ಕಿ.ಮೀ	2005ರವರೆಗೆ ಅಭಿವೃದ್ಧಿ
102 ಕಿ.ಮೀ	2006ರಿಂದ 2015ರ ಅವಧಿಯಲ್ಲಿ ಅಭಿವೃದ್ಧಿ
212 ಕಿ.ಮೀ	2016ರಿಂದ 2018ರ ಅವಧಿಯಲ್ಲಿ ಅಭಿವೃದ್ಧಿ
102 ಕಿ.ಮೀ	2019ರಿಂದ 2021ರ ಅವಧಿಯಲ್ಲಿ ಅಭಿವೃದ್ಧಿ
195 ಕಿ.ಮೀ	2022ರಿಂದ ತೊಟ್ಟಿಗೋಡೆ ನಿರ್ಮಾಣ ಪ್ರಗತಿಯಲ್ಲಿದೆ
173.90 ಕಿ.ಮೀ	ರಾಜಕಾಲುವೆ ಅಭಿವೃದ್ಧಿ ಬಾಕಿ

ವಿಶ್ವಬ್ಯಾಂಕ್‌ನಿಂದ ಸಾಲದ ನೆರವು ಪಡೆದುಕೊಂಡ ನಂತರ, ರಾಜ್ಯ ಸರ್ಕಾರದ ಪಾಲು ₹400 ಕೋಟಿಯನ್ನು ಬಿಬಿಎಂಪಿ ತನ್ನ ಸ್ವಂತ ಸಂಪನ್ಮೂಲದಿಂದ ಭರಿಸಬೇಕು ಎಂದು ಸೂಚಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯಂತೆ ಟೆಂಡರ್‌ಗಳನ್ನು ಆಹ್ವಾನಿಸಿ, ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ತುರ್ತಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕು ಎಂದು ಹೇಳಿದೆ.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರ ಅಧ್ಯಕ್ಷತೆಯ ಸಮಿತಿಯಿಂದ ಟೆಂಡರ್ ಅನುಮೋದನೆ ಆಗಬೇಕು. ಅನುಮೋದನೆಯಾಗಿರುವ ಕ್ರಿಯಾ ಯೋಜನೆಯಲ್ಲಿ ಬದಲಾವಣೆ ಮಾಡಬೇಕೆಂದರೆ ಇಲಾಖೆಯ ಸಚಿವರ ಸಮ್ಮತಿ ಪಡೆಯಬೇಕು ಎಂದು ಸೂಚಿಸಲಾಗಿದೆ.

ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಹಾಗೂ ಸಂಬಂಧಪಟ್ಟ ಮುಖ್ಯ ಎಂಜಿನಿಯರ್‌ಗಳು ಕಾಮಗಾರಿಗಳ ಗುಣಮಟ್ಟದ ಮೇಲೆ ನಿಗಾವಹಿಸಬೇಕು ಎಂದು ಷರತ್ತು ವಿಧಿಸಲಾಗಿದೆ.

ಯಾವ ವಲಯಕ್ಕೆ ಎಷ್ಟು ವೆಚ್ಚ?

ರಾಜಕಾಲುವೆಗಳಿಗೆ ತಡೆಗೋಡೆ ನಿರ್ಮಾಣ ಕಾಮಗಾರಿ	
ಬೊಮ್ಮನಹಳ್ಳಿ	₹205.25 ಕೋಟಿ
ಮಹದೇವಪುರ	₹630.30 ಕೋಟಿ
ಯಲಹಂಕ	₹193.30 ಕೋಟಿ
ಆರ್‌.ಆರ್‌. ನಗರ	₹398.39 ಕೋಟಿ
ದಾಸರಹಳ್ಳಿ	₹173.61 ಕೋಟಿ
ರಾಜಕಾಲುವೆಗಳ ಮರು ವಿನ್ಯಾಸ ಕಾಮಗಾರಿ	
ಪೂರ್ವ	₹85 ಕೋಟಿ
ಪಶ್ಚಿಮ	₹45 ಕೋಟಿ
ದಕ್ಷಿಣ	₹65 ಕೋಟಿ
ಕೋರಮಂಗಲ ವ್ಯಾಲಿ	₹20 ಕೋಟಿ
ದಾಸರಹಳ್ಳಿ	₹35 ಕೋಟಿ
ಯಲಹಂಕ	₹90 ಕೋಟಿ
ಆರ್‌.ಆರ್‌. ನಗರ	₹60 ಕೋಟಿ

ಎಂಎಸ್‌ಪಿ ಖಾತರಿ ಕಾನೂನಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಪಡಿಸುವ ಕಾನೂನು ರೂಪಿಸಿ ಜಾರಿಗೊಳಿಸಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ), ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೋರ್ಚಾದ ಮುಖಂಡ ರಾಮನ್ ಗೌಂಡರ್, 'ಎಂಎಸ್‌ಪಿಗೆ ಗ್ಯಾರಂಟಿ ಕಾನೂನು ಜಾರಿಗೊಳಿಸಬೇಕು. ರೈತರ ಸಾಲ ಮನ್ನಾ ಮಾಡಬೇಕು. ಎಂ.ಎಸ್. ಸ್ವಾಮಿನಾಥನ್ ವರದಿ ಜಾರಿಗೊಳಿಸಬೇಕು. 60 ವರ್ಷ ಪೂರೈಸಿದ ರೈತರಿಗೆ ಪಿಂಚಣಿ ಯೋಜನೆ ರೂಪಿಸಬೇಕು' ಎಂದು ಒತ್ತಾಯಿಸಿದರು.

'ಎಂಎಸ್‌ಪಿಗೆ ಸಂಬಂಧಿಸಿದಂತೆ ಮಾರ್ಚ್ 19ರಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಹಾಗೂ ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರ ನೇತೃತ್ವದಲ್ಲಿ ಸಭೆ ಆಯೋಜಿಸಲಾಗಿದೆ. ಎಂಎಸ್‌ಪಿಗೆ ಸಂಬಂಧಿಸಿದಂತೆ ಅಂತಿಮ ತೀರ್ಮಾನ ಕೈಗೊಳ್ಳಬೇಕು. ಇಲ್ಲದಿದ್ದರೆ ದಕ್ಷಿಣ ಭಾರತದ ಎಲ್ಲ ರೈತರು ದೆಹಲಿಗೆ ಮುತ್ತಿಗೆ ಹಾಕುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ಒಕ್ಕೂಟದ ಸಂಘಟನಾ ಕಾರ್ಯದರ್ಶಿ ಅತ್ತಿಹಳ್ಳಿ ದೇವರಾಜ್ ಮಾತನಾಡಿದರು.

ಮೆಟ್ರೊ ನಿಲ್ದಾಣಕ್ಕೆ ಎಂಬೆಸಿಯಿಂದ ₹ 100 ಕೋಟಿ: ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ನೀಲಿ ಮಾರ್ಗದಲ್ಲಿ ಕಾಡುಬೀಸನಹಳ್ಳಿ ನಿಲ್ದಾಣಕ್ಕೆ ಸಂಬಂಧಿಸಿದಂತೆ ಬಿಎಂಆರ್‌ಸಿಎಲ್ ಮತ್ತು ಎಂಬೆಸಿ ಆರ್‌ಇಐಟಿ ನಡುವೆ ಒಡಂಬಡಿಕೆ ನಡೆದಿದೆ. ಅದರಂತೆ ನಿಲ್ದಾಣವು 'ಎಂಬೆಸಿ ಟೆಕ್ ವಿಲೇಜ್ ಕಾಡುಬೀಸನಹಳ್ಳಿ ಮೆಟ್ರೊ ನಿಲ್ದಾಣ' ಎಂದು ನಾಮಕರಣಗೊಳ್ಳಲಿದೆ.

ಎಂಬೆಸಿ ಆರ್‌ಇಐಟಿಯ ಭಾಗವಾಗಿರುವ ವಿಕಾಸ್ ಟೆಲಿಕಾಂ ಪ್ರೈವೇಟ್ ಲಿಮಿಟೆಡ್ (ವಿಟಿಪಿಎಲ್), ಕಾಡುಬೀಸನಹಳ್ಳಿಯಲ್ಲಿ ಹೊಸ ಮೆಟ್ರೊ ನಿಲ್ದಾಣದ ನಿರ್ಮಾಣಕ್ಕೆ ಒಪಂದದಂತೆ ₹100 ಕೋಟಿ ನೀಡಲಿದೆ. ಮೆಟ್ರೊ ನಿಗಮವು 30 ವರ್ಷಗಳ ಅವಧಿಗೆ ಜಾಹೀರಾತು, ವಾಣಿಜ್ಯ ಸ್ಥಳ ಮತ್ತು ನೇರ ಸಂಪರ್ಕದ ಜೊತೆಗೆ ಕಾಡುಬೀಸನಹಳ್ಳಿ ಮೆಟ್ರೋ ನಿಲ್ದಾಣದ ನಾಮಕರಣದ ಹಕ್ಕುಗಳನ್ನು ನೀಡಲಿದೆ.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಮಾತನಾಡಿ, 'ಒಆರ್‌ಆರ್ ಕಾರಿಡಾರ್ ಚಲನಶೀಲ ಮಾರ್ಗವಾಗಿದೆ. ಪ್ರಮುಖ ವಾಣಿಜ್ಯ ಕೇಂದ್ರಗಳು, ಕಚೇರಿ ಉದ್ಯಾನಗಳು ಮತ್ತು ವಸತಿ ಪ್ರದೇಶಗಳನ್ನು ಇದು ಸಂಪರ್ಕಿಸುತ್ತದೆ. ಈ ಸಹಭಾಗಿತ್ವವು ಮೂಲಸೌಕರ್ಯ ಬೆಳವಣಿಗೆಯನ್ನು ವೇಗಗೊಳಿಸಲು ಸಹಕಾರಿಯಾಗಿದೆ' ಎಂದು ಶ್ಲಾಘಿಸಿದರು.

ಎಂಬೆಸಿ ಆರ್‌ಇಐಟಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರುತ್ವಿಕ್ ಭಟ್ಟಾಚಾರ್ ಮಾತನಾಡಿ, 'ಸಾರ್ವಜನಿಕ ಚಲನಶೀಲತೆ ಪ್ರೋತ್ಸಾಹಿಸಲು, ದೀರ್ಘಾವಧಿಯ ಹೂಡಿಕೆಗಳ ಮೂಲಕ ನಗರದ ಮೂಲಸೌಕರ್ಯ ಹೆಚ್ಚಿಸಲು ಬದ್ಧರಾಗಿದ್ದೇವೆ. ಈ ಮೆಟ್ರೊ ಯೋಜನೆಯು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಸಾರ್ವಜನಿಕ ಸಾರಿಗೆಯ ಹೆಚ್ಚಿನ ಬಳಕೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ' ಎಂದು ತಿಳಿಸಿದರು.



'ನಮ್ಮ ಮೆಟ್ರೊ' ನೀಲಿ ಮಾರ್ಗದಲ್ಲಿ ಕಾಡುಬೀಸನಹಳ್ಳಿ ನಿಲ್ದಾಣಕ್ಕೆ ಸಂಬಂಧಿಸಿದಂತೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರ ರಾವ್ ಮತ್ತು ಎಂಬೆಸಿ ಆರ್‌ಇಐಟಿಯ ಸಿಇಒ ರುತ್ವಿಕ್ ಭಟ್ಟಾಚಾರ್ ಒಡಂಬಡಿಕೆ ಮಾಡಿಕೊಂಡರು

ಅಂಬೇಡ್ಕರ್ ವಿಡಂಬನೆ ನಾಟಕ: ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಆರ್.ಅಂಬೇಡ್ಕರ್ ಮತ್ತು ದಲಿತರ ವಿರುದ್ಧ ಆಕ್ಷೇಪಾರ್ಹ ಕಿರು ನಾಟಕ (ಸ್ಕಿಟ್) ಪ್ರದರ್ಶಿಸಿದ ಆರೋಪದಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್ಸಿ-ಎಸ್ಟಿ) ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅನುಸಾರ ಬೆಂಗಳೂರು ಜೈನ್ ಯೂನಿವರ್ಸಿಟಿ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ವಿದ್ಯಾರ್ಥಿಗಳೂ ಸೇರಿದಂತೆ ಏಳು ಜನರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ವಿಭಾಗದ ನಿರ್ದೇಶಕ ದಿನೇಶ್ ನೀಲಕಂಠ ಬೋರ್ಕರ್ ಸೇರಿದಂತೆ ಇತರರು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಅರ್ಜಿದಾರರ ವಿರುದ್ಧ ಆರೋಪಿಸಲಾಗಿರುವ ಅಪರಾಧಗಳ ಮೂಲ ಅಂಶಗಳನ್ನು ಎಫ್‌ಐಆರ್ ಸ್ಪಷ್ಟವಾಗಿ ಬಿಂಬಿಸುವುದಿಲ್ಲ' ಎಂದು ಹೇಳಿರುವ ನ್ಯಾಯಪೀಠ, 'ಅರ್ಜಿದಾರರು ಪ್ರದರ್ಶಿಸಿದ ಕಿರು ನಾಟಕ ವಿಡಂಬನೆ ಮತ್ತು ಮನರಂಜನೆಯ ಸ್ವರೂಪದ್ದಾಗಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಖಾತರಿಪಡಿಸುತ್ತದೆ ಮತ್ತು ಇದಕ್ಕೆ ಸಂವಿಧಾನದ 19ನೇ ವಿಧಿಯಡಿ ರಕ್ಷಣೆ ಇದೆ' ಎಂದು ಸ್ಪಷ್ಟಪಡಿಸಿದೆ.

'ಎಸ್‌ಸಿ-ಎಸ್‌ಟಿ ಸಮುದಾಯದ ಸದಸ್ಯರನ್ನು ಅವಮಾನಿಸುವ ಉದ್ದೇಶದಿಂದ ಅರ್ಜಿದಾರರು ಸಾರ್ವಜನಿಕವಾಗಿ ಯಾವುದೇ ಸ್ಥಳದಲ್ಲಿ ನಾಟಕ ಪ್ರದರ್ಶಿಸಿಲ್ಲ. ಸಮುದಾಯವನ್ನು ಉದ್ದೇಶಪೂರ್ವಕವಾಗಿ ಅವಹೇಳನ ಮಾಡಲಾಗಿದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ಆದಾಗ್ಯೂ, ಎಸ್‌ಸಿ-ಎಸ್‌ಟಿ ಸಮುದಾಯದ ಯಾವೊಬ್ಬ ವ್ಯಕ್ತಿಯೂ ದೂರು ದಾಖಲಿಸಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಕಾಲೇಜು ವತಿಯಿಂದ ನಗರದ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ 2023ರ ಫೆಬ್ರುವರಿ 8ರಂದು ಯುವಜನೋತ್ಸವ ನಡೆಸಲಾಗಿತ್ತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮೀಸಲು ವ್ಯವಸ್ಥೆ ಕುರಿತು ವಿಡಂಬನಾತ್ಮಕ ಕಿರು ನಾಟಕ (ಮ್ಯಾಡ್- ಆ್ಯಡ್ ಸ್ಕಿಟ್) ಪ್ರದರ್ಶಿಸಿದ್ದರು. 'ನಾಟಕದಲ್ಲಿ ಬಿ.ಆರ್. ಅಂಬೇಡ್ಕರ್ ಮತ್ತು ದಲಿತರ ಬಗ್ಗೆ ಆಕ್ಷೇಪಾರ್ಹ ಸಂಭಾಷಣೆ ಬಳಸಲಾಗಿದೆ' ಎಂದು ಆರೋಪಿಸಲಾಗಿತ್ತು.

ಷರತ್ತು ಸಡಿಲಿಕೆಗೆ ಭವಾನಿ ರೇವಣ್ಣ ಮನವಿ

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿ; ಸಂತ್ರಸ್ತೆಯೊಬ್ಬರ ಅಪಹರಣದ ಆರೋಪಿಯಾಗಿರುವ ಪ್ರಜ್ವಲ್ ತಾಯಿ ಭವಾನಿ ರೇವಣ್ಣ ಅವರ ನಿರೀಕ್ಷಣಾ ಜಾಮೀನು ಷರತ್ತು ಸಡಿಲಿಕೆ ಕುರಿತಾದ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿದೆ.

ಈ ಸಂಬಂಧ ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಸೋಮವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಭವಾನಿ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ನಿರೀಕ್ಷಣಾ ಜಾಮೀನು ಮಂಜೂರು ಮಾಡುವಾಗ ನ್ಯಾಯಪೀಠ ವಿಧಿಸಿರುವ ಷರತ್ತಿನಿಂದಾಗಿ ಭವಾನಿ ಅವರು ಮಂಡ್ಯ ಮತ್ತು ಮೈಸೂರಿಗೆ ಪ್ರಯಾಣಿಸಲು ಆಗುತ್ತಿಲ್ಲ. ಹೀಗಾಗಿ, ಅವರು ಕೆಲವೊಂದು ತೊಂದರೆ ಎದುರಿಸುತ್ತಿದ್ದು ತ್ವರಿತಗತಿಯಲ್ಲಿ ಅರ್ಜಿ ವಿಚಾರಣೆ ನಡೆಸಬೇಕು' ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಪ್ರಕರಣಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 10ಕ್ಕೆ ಮುಂದೂಡಿತು. ಭವಾನಿ ಅವರಿಗೆ ಹೈಕೋರ್ಟ್, 2024ರ ಜೂನ್ 7ರಂದು ಆರು ಷರತ್ತುಗಳನ್ನು ವಿಧಿಸಿ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.



'ವಜಾಗೊಂಡರೂ ರಜೆ ನಗದೀಕರಣಕ್ಕೆ ಅರ್ಹ'

ಬೆಂಗಳೂರು: 'ಸೇವೆಯಿಂದ ವಜಾಗೊಂಡ ಉದ್ಯೋಗಿ ಕೂಡಾ ವಿಶೇಷ ರಜೆಗಳ ನಗದೀಕರಣಕ್ಕೆ ಅರ್ಹರಾಗಿರುತ್ತಾರೆ' ಎಂದು ಹೈಕೋರ್ಟ್ ಆದೇಶಿಸಿದೆ.

ವಿಶೇಷ ರಜೆ ನಗದೀಕರಣ ನಿರಾಕರಿಸಿದ್ದ ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕು ಕಂಪ್ಲಿಯ, 'ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್" ಕ್ರಮವನ್ನು ಪ್ರಶ್ನಿಸಿ ಬ್ಯಾಂಕಿನ ಮಾಜಿ ಸಹಾಯಕ ವ್ಯವಸ್ಥಾಪಕ ಜಿ.ಲಿಂಗನಗೌಡ ಸಲ್ಲಿಸಿದ್ದ ಅರ್ಜಿ ಮಾನ್ಯ ಮಾಡಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರು ತಮ್ಮ ಸೇವಾವಧಿಯಲ್ಲಿ ಸಂಗ್ರಸಿರುವ 220 ದಿನಗಳ ವಿಶೇಷ ರಜೆಗೆ ಅರ್ಹರು' ಎಂದು ಘೋಷಿಸಿರುವ ನ್ಯಾಯಪೀಠ, 'ರಜೆಯ ನಗದೀಕರಣ ಕಾನೂನಿನಡಿ ಮಾತ್ರವಲ್ಲದೆ ಸಂವಿಧಾನದ ಅಡಿಯಲ್ಲಿಯೂ ಉದ್ಯೋಗಿಯೊಬ್ಬನ ಹಕ್ಕು' ಎಂದು ಸ್ಪಷ್ಟಪಡಿಸಿದೆ.

ದಾಖಲೆ ನಾಶ: ಕೇಂದ್ರ–ರಾಜ್ಯಕ್ಕೆ ನೋಟಿಸ್

ಬೆಂಗಳೂರು: ಐದು ವರ್ಷಗಳಷ್ಟು ಹಳೆಯದಾದ ದಾಖಲೆಗಳನ್ನು ನಾಶಪಡಿಸಲು ಅವಕಾಶ ಕಲ್ಪಿಸಿರುವ ಹೈಕೋರ್ಟ್ ನಿಯಮಗಳ ತಿದ್ದುಪಡಿ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ವಕೀಲ ಎನ್.ಪಿ.ಅಮೃತೇಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ವಿಲಾಸ್ ರಂಗನಾಥ್ ದಾತಾರ್ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್, ರಾಜ್ಯ ಮತ್ತು ಕೇಂದ್ರ ಕಾನೂನು ಸಚಿವಾಲಯಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿತು.

ಕೆಟ್ಟು ನಿಂತ ಮೆಟ್ರೊ: ಸಂಚಾರ ವ್ಯತ್ಯಯ

ನಮ್ಮ ಮೆಟ್ರೊ ನೇರಳೆ ಮಾರ್ಗದ ಅತ್ತಿಗುಪ್ಪೆ ನಿಲ್ದಾಣದಲ್ಲಿ ಮೆಟ್ರೊ ರೈಲು ಕೆಟ್ಟು ನಿಂತಿದ್ದರಿಂದ ರೈಲು ಸಂಚಾರಕ್ಕೆ 10 ನಿಮಿಷ ತೊಡಕುಂಟಾಯಿತು.

ಮೆಜೆಸ್ಟಿಕ್ ಕಡೆಯಿಂದ ಚಲ್ಲಘಟ್ಟ ಕಡೆಗೆ ಹೋಗುತ್ತಿದ್ದ ರೈಲು ಮಧ್ಯಾಹ್ನ ಸುಮಾರು 12 ಗಂಟೆಯ ಹೊತ್ತಿಗೆ ಅತ್ತಿಗುಪ್ಪೆಯಲ್ಲಿ ಸ್ತಬ್ಧಗೊಂಡಿತು. ಬಿಎಂಆರ್‌ಸಿಎಲ್ ಎಂಜಿನಿಯರ್‌ಗಳು ಬಂದು ಪರಿಶೀಲಿಸಿದಾಗ ವಿದ್ಯುತ್ ಪೂರೈಕೆ ಸಂಪರ್ಕ ತಪ್ಪಿ ಹೋಗಿತ್ತು. ಇದರಿಂದ ಈ ಮಾರ್ಗದಲ್ಲಿ ಸಂಚರಿಸುವ ಇತರ ರೈಲುಗಳಿಗೂ ತೊಡಕಾಯಿತು. ಸಮಸ್ಯೆ ಸರಿಪಡಿಸಿ 10 ನಿಮಿಷಗಳ ನಂತರ ಸಂಚಾರ ಪುನರಾರಂಭಗೊಳಿಸಲಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ಮಿಟ್ಟಲಕೋಡ್ ಕೆಎಸ್‌ಬಿಸಿ ಅಧ್ಯಕ್ಷ



ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ನೂತನ ಅಧ್ಯಕ್ಷರನ್ನಾಗಿ ಶಿದ್ಲಿಂಗಪ್ಪ ಶೇಖರಪ್ಪ ಮಿಟ್ಟಲಕೋಡ್ ಅವರನ್ನು ತಕ್ಷಣಕ್ಕೆ ಅನ್ವಯಿಸುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ನಿರ್ಗಮಿತ ಅಧ್ಯಕ್ಷ ಎಚ್.ಎಲ್. ವಿಶಾಲ್ ರಘು ಅವರ ಸ್ಥಾನಕ್ಕೆ ಎಸ್.ಎಸ್. ಮಿಟ್ಟಲಕೋಡ್ ಅವರನ್ನು ನಾಮನಿರ್ದೇಶನ ಮಾಡಿ ಭಾರತೀಯ ವಕೀಲರ ಪರಿಷತ್ (ಬಿಸಿಐ) ಪ್ರಧಾನ ಕಾರ್ಯದರ್ಶಿ ಶ್ರೀಮಂತೋ ಸೇನ್ 2025ರ ಫೆಬ್ರುವರಿ 20ರಂದು ಆದೇಶಿಸಿದ್ದಾರೆ.

ನಗರದಲ್ಲಿ ಇಂದು

ದಕ್ಷಿಣ ಭಾರತ ಸಿಎಸ್‌ಆರ್ ಮತ್ತು ಸಿಎಸ್‌ಒ ಸಮ್ಮೇಳನ–2025: ಉದ್ಘಾಟನೆ: ಯು.ಟಿ. ಖಾದರ್, ಅತಿಥಿಗಳು: ನೀರಜ್ ಕುಮಾರ್ ಲಾಲ್, ಉದಯ್ ಶಂಕರ್ ಸಿಂಗ್, ಮಿತೇಶ್ ಖಂಡೇಲ್‌ವಾಲ್, ಅಧ್ಯಕ್ಷತೆ: ಮಹೇಶಚಂದ್ರ ಗುರು, ಆಯೋಜನೆ: ಕರ್ನಾಟಕ ನಗರ ಮತ್ತು ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಸ್ಥಳ: ಗೋಲ್ಡನ್ ಮೆಟ್ರೊ ಹೋಟೆಲ್, ಶೇಷಾದ್ರಿಪುರ, ಬೆಳಿಗ್ಗೆ 10

ಶೈಕ್ಷಣಿಕ ಮತ್ತು ಸಂಶೋಧನಾ ಕಟ್ಟಡಗಳ ನಿರ್ಮಾಣ ಶಂಕುಸ್ಥಾಪನೆ: ಡಿ.ಕೆ. ಶಿವಕುಮಾರ್, ಡಾ.ಎಂ.ಸಿ. ಸುಧಾಕರ್, ಮುನಿರತ್ನ, ಡಾ.ಸಿ.ಎನ್. ಮಂಜುನಾಥ್, ಸ್ಥಳ: ಪರೀಕ್ಷಾ ಭವನದ ಎದುರು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

ಮಹಿಳೆಯರೇ ಅಭಿನಯಿಸುವ ಎರಡು ದಿನಗಳ 'ಡಾ. ಗಿರೀಶ್ ಕಾರ್ನಾಡ್'ರವರ ನಾಟಕೋತ್ಸವದ ಉದ್ಘಾಟನೆ: ಚಂದ್ರಶೇಖರ್, ಅತಿಥಿಗಳು: ಸುರೇಶ್ ಹೆಗಡೆ, ಪ್ರತಿಭಾ ನಾರಾಯಣ್, ಪ್ರಕಾಶ್ ಬಿ., ಸಂಪಂಗಿ ರಾಮು, ನಾಗರಾಜ್, ರಾಜಶೇಖರ್ ಮೂರ್ತಿ, 'ಯಯಾತಿ' ನಾಟಕ ಪ್ರದರ್ಶನ: ರಚನೆ: ಗಿರೀಶ್ ಕಾರ್ನಾಡ್, ನಿರ್ದೇಶನ: ಶೀಬಾ ಮೂರ್ತಿ, ತಂಡ: ಭಾವಸಾಗರ, ಆಯೋಜನೆ: ದೃಶ್ಯ ರಂಗ ಕಲಾ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5ರಿಂದ


ಗಿರೀಶ್ ಕಾರ್ನಾಡ್

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

10ಕ್ಕೂ ಹೆಚ್ಚು ವರ್ಷಗಳಿಂದ 1,000ಕ್ಕೂ ಅಧಿಕ ಆಸ್ತಿಗಳ ತೆರಿಗೆ ಪಾವತಿಯಾಗಿಲ್ಲ: ಬಿಬಿಎಂಪಿ

ವಿಧಾನಸೌಧದ ತೆರಿಗೆಯೂ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಭವನ, ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡ ಸೇರಿದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಒಡೆತನ-ದಲ್ಲಿರುವ ಒಂದು ಸಾವಿರಕ್ಕೂ ಹೆಚ್ಚು ಕಟ್ಟಡಗಳ ಆಸ್ತಿ ತೆರಿಗೆಯನ್ನು ಹತ್ತಾರು ವರ್ಷಗಳಿಂದ ಪಾವತಿಸಿಲ್ಲ.

ಒಂದು ಬಾರಿ ಪರಿಹಾರ ಯೋಜನೆ (ಒಟಿಎಸ್) ಜಾರಿಯಲ್ಲಿದ್ದ ಅವಧಿಯಲ್ಲೇ ಎಲ್ಲ ಕಟ್ಟಡಗಳ ತೆರಿಗೆ ವಸೂಲಿಗೂ ನೋಟಿಸ್ ನೀಡಲಾಗಿತ್ತು. ಅಲ್ಲದೆ, ಎಷ್ಟು ಆಸ್ತಿ ತೆರಿಗೆ ಪಾವತಿ ಮಾಡಬೇಕೆಂಬ ಬೇಡಿಕೆ ನೋಟಿಸ್ ಅನ್ನೂ ಬಿಬಿಎಂಪಿಯ ಆಯಾ ವಲಯಗಳ ಅಧಿಕಾರಿಗಳು ಜಾರಿ ಮಾಡಿದ್ದರು. ಒಟಿಎಸ್ 2024ರ ನವೆಂಬರ್‌ಗೆ ಅಂತ್ಯಗೊಂಡಿತ್ತು. ಆದರೆ, ಈ ಯಾವ ಕಟ್ಟಡಗಳ ಆಸ್ತಿ ತೆರಿಗೆಯನ್ನು ಈವರೆಗೂ ಪಾವತಿ ಮಾಡಿಲ್ಲ.

ನಗರದಲ್ಲಿರುವ ಒಂದು ಸಾವಿರಕ್ಕೂ ಹೆಚ್ಚು ಸರ್ಕಾರಿ ಕಟ್ಟಡಗಳಿಂದ ₹150 ಕೋಟಿಗೂ ಅಧಿಕ ಮೊತ್ತದ ಆಸ್ತಿ ತೆರಿಗೆ ಬಾಬ್ತಿನಲ್ಲಿ ಬಾಕಿ ಉಳಿದಿದೆ. ಆದರೆ, ಕಟ್ಟಡಗಳಿಗೆ ಬೀಗ ಮುದ್ರೆ ಹಾಕಿ ಆಸ್ತಿ ತೆರಿಗೆ ಪಾವತಿಸಿಕೊಳ್ಳಲು ಪಾಲಿಕೆ ಮುಂದಾಗಿಲ್ಲ. ಪ್ರಸಕ್ತ ಆರ್ಥಿಕ ವರ್ಷದಲ್ಲಿ 83 ಸಾವಿರಕ್ಕೂ ಹೆಚ್ಚು ಖಾಸಗಿ ಕಟ್ಟಡಗಳಿಗೆ ಬೀಗ ಹಾಕಿ, ತೆರಿಗೆ ಪಾವತಿಸಿಕೊಳ್ಳಲಾಗಿದೆ. ಅಂಚೆ ಕಚೇರಿಗಳು ತೆರಿಗೆ ಪಾವತಿಸದಾಗಲೂ ಅವುಗಳಿಗೆ ಬೀಗ ಹಾಕಲಾಗಿತ್ತು.

ನೋಟಿಸ್ ಹಳೆಯದ್ದು: ‘ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಟ್ಟಡಗಳಿಗೆ ಆಸ್ತಿ ತೆರಿಗೆ ಪಾವತಿಸಲು ಒಟಿಎಸ್ ಜಾರಿಯಲ್ಲಿದ್ದ ಸಮಯದಲ್ಲೇ ನೋಟಿಸ್ ನೀಡಲಾಗಿತ್ತು. ಬಡ್ಡಿ ಹಾಗೂ ದಂಡ ಇಲ್ಲದ ಕಾರಣ, ಹಲವು ಕೋಟಿ ಉಳಿಯುತ್ತದೆ ಎಂದೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ತಿಳಿಸಲಾಗಿತ್ತು. ಆದರೆ, ಅವರು ತೆರಿಗೆ ಪಾವತಿಸಿಲ್ಲ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.


ತೆರಿಗೆ ಪಾವತಿಸದ ಖಾಸಗಿ ಕಟ್ಟಡಗಳಿಗೆ ಬೀಗ ಮುದ್ರೆ ಹಾಕುವಂತೆ ಸರ್ಕಾರದ ಕಟ್ಟಡಗಳಿಗೂ ಬೀಗ ಹಾಕ-ಲಾಗುತ್ತದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ‘ಇಲ್ಲ, ಅದು ಹೇಗೆ ಮಾಡೋಕೆ ಆಗುತ್ತೆ? ಸಾರ್ವಜನಿಕ ಕಟ್ಟಡಗಳಿಗೆ ಬೀಗ ಹಾಕಲು ಆಗುವುದಿಲ್ಲ’ ಎಂದರು.

ಗುರಿ ಮುಟ್ಟದಿದ್ದರೂ ದಾಖಲೆ: ಬಿಬಿಎಂಪಿ ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇಕಡ 17ರಷ್ಟು ಹೆಚ್ಚು ಆಸ್ತಿ ತೆರಿಗೆಯನ್ನು ಸಂಗ್ರಹಿಸಿ, ದಾಖಲೆ ಸೃಷ್ಟಿಸಿದೆ. ಆದರೆ, ವರ್ಷದ ಗುರಿ ತಲುಪಲು ತಿಂಗಳಷ್ಟೇ ಬಾಕಿ ಉಳಿದಿದ್ದು, ಇನ್ನೂ ₹668 ಕೋಟಿ ಸಂಗ್ರಹಿಸಬೇಕಿದೆ.

ಯಲಹಂಕ ವಲಯ ಆಸ್ತಿ ತೆರಿಗೆಯಲ್ಲಿ ಮುಂಚೂಣಿಯಲ್ಲಿದ್ದು, ಶೇ98 ರಷ್ಟು ಸಾಧನೆ ಮಾಡಿದೆ. ಬೊಮ್ಮನಹಳ್ಳಿ ವಲಯ ಕೊನೆಯ ಸ್ಥಾನದಲ್ಲಿದ್ದು, ಶೇ 78.39ರಷ್ಟು ಸಂಗ್ರಹಿಸಿದೆ. ಉಳಿದ ಆರೂ ವಲಯಗಳು ಶೇ 83ಕ್ಕಿಂತ ಹೆಚ್ಚು ಸಂಗ್ರಹ ದಾಖಲಿಸಿವೆ.

ಕಳೆದ ವರ್ಷಕ್ಕೆ ಹೋಲಿಸಿದರೆ, ರಾಜರಾಜೇಶ್ವರಿನಗರ ವಲಯ ಈ ವರ್ಷದ ಫೆಬ್ರುವರಿ ಅಂತ್ಯದ ವೇಳೆಗೆ ಶೇ 37.97ರಷ್ಟು ಹೆಚ್ಚು ತೆರಿಗೆ ಸಂಗ್ರಹಿಸಿದೆ. ದಾಸರಹಳ್ಳಿ ವಲಯ (ಶೇ 25.65), ಯಲಹಂಕ (ಶೇ 24.50) ಹಾಗೂ ಪಶ್ಚಿಮ ವಲಯ (ಶೇ23.95) ನಂತರದ ಸ್ಥಾನದಲ್ಲಿವೆ. ಬೊಮ್ಮನಹಳ್ಳಿ ವಲಯದಲ್ಲಿ ಶೇ 2.12 ರಷ್ಟು ಮಾತ್ರ ಸಂಗ್ರಹ ಹೆಚ್ಚಾಗಿದೆ.

ಆಸ್ತಿ ತೆರಿಗೆ ಸಂಗ್ರಹ (ಫೆಬ್ರುವರಿ ಅಂತ್ಯಕ್ಕೆ) (₹ಕೋಟಿಗಳಲ್ಲಿ)



ವಲಯ	ಆಸ್ತಿ	ತೆರಿಗೆ ಬಾಕಿ (₹ಕೋಟಿಗಳಲ್ಲಿ)
ಬೊಮ್ಮನಹಳ್ಳಿ	63,014	₹54.99
ಮಹದೇವಪುರ	89,509	₹49.77
ಪೂರ್ವ	50,364	₹35.82
ದಕ್ಷಿಣ	35,659	₹30.04
ಪಶ್ಚಿಮ	40,237	₹30.04
ರಾಜರಾಜೇಶ್ವರಿ ನಗರ	51,994	₹21.77
ದಾಸರಹಳ್ಳಿ	15,833	₹13.19
ಒಟ್ಟು	3,81,948	₹231.42

ಮುಖ್ಯಾಂಶಗಳು

- ಒಟಿಎಸ್‌ನಿಂದ ಮೂರನೇ ಒಂದರಷ್ಟು ಮಾತ್ರ ಪಾವತಿಗೆ ಅವಕಾಶವಿತ್ತು
- ಇಲಾಖೆಗಳ ಅಧಿಕಾರಿಗಳಿಗೆ ಪತ್ರ ಬರೆದಿದ್ದ ಬಿಬಿಎಂಪಿ
- ತೆರಿಗೆ ಸಂಗ್ರಹಕ್ಕೆ ಬೀಗಮುದ್ರೆಯಂತಹ ಕ್ರಮ ಇಲ್ಲ



ತೆರಿಗೆ ಪಾವತಿಸದ ಆಸ್ತಿಗಳ ಗುರುತು

ಬಿಬಿಎಂಪಿಯ ಎಂಟೂ ವಲಯಗಳಲ್ಲಿ ಸುಮಾರು ಏಳು ಲಕ್ಷ ಆಸ್ತಿಗಳ ತೆರಿಗೆ ಪಾವತಿಸುತ್ತಿಲ್ಲ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಎಂಟೂ ವಲಯಗಳಲ್ಲಿ ಅಂತಹ 87,816 ಆಸ್ತಿಗಳನ್ನು ಗುರುತಿಸಲಾಗಿದ್ದು, ₹285.12 ಕೋಟಿ ತೆರಿಗೆಯನ್ನು ಸಂಗ್ರಹಿಸಲಾಗಿದೆ.

ಆಸ್ತಿ ತೆರಿಗೆ ಪರಿಷ್ಕರಣೆ (2024ರ ಏಪ್ರಿಲ್ 1ರಂತೆ) ಮಾಡಿದ 15,731 ಆಸ್ತಿಗಳಿಂದ ₹398.49 ಕೋಟಿ ತೆರಿಗೆಗೆ ಬೇಡಿಕೆ ನೋಟಿಸ್ ಜಾರಿ ಮಾಡಲಾಗಿತ್ತು. ಇದರಲ್ಲಿ 10,798 ಆಸ್ತಿಗಳಿಂದ ₹122.04 ಕೋಟಿ ತೆರಿಗೆಯನ್ನು ಸಂಗ್ರಹಿಸಲಾಗಿದೆ.

ಆಸ್ತಿ ತೆರಿಗೆ ಪರಿಷ್ಕರಣೆಯನ್ನು ಮುಂದುವರಿಸಿದ್ದು, 2025ರ ಮಾರ್ಚ್ 1ರಂತೆ 10,006 ಆಸ್ತಿಗಳಿಂದ ₹152.26 ಕೋಟಿ ತೆರಿಗೆ ಬಾಕಿ ಇದೆ.

ರಾಮಮೂರ್ತಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಯನಗರ ವಿಧಾನಸಭಾ ಕ್ಷೇತ್ರದ ಚುನಾವಣಾ ತಕರಾರು ಅರ್ಜಿ ಸಂಬಂಧ ಹೈಕೋರ್ಟ್ ಆದೇಶ ಪ್ರಶ್ನಿಸಿ ಶಾಸಕ ಸಿ.ಕೆ.ರಾಮಮೂರ್ತಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ರಾಮಮೂರ್ತಿ ಆಯ್ಕೆ ಪ್ರಶ್ನಿಸಿ ಪರಾಜಿತ ಅಭ್ಯರ್ಥಿ ಸೌಮ್ಯಾ ರೆಡ್ಡಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಡಿವಿಡಿ ಸೇರಿ 10 ದಾಖಲೆ ಹಾಜರುಪಡಿಸಲು ಹೈಕೋರ್ಟ್ ಅನುಮತಿ ನೀಡಿತ್ತು.

ಹೈಕೋರ್ಟ್ ಆದೇಶದಲ್ಲಿ ಮಧ್ಯ ಪ್ರವೇಶಕ್ಕೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಸೌಮ್ಯಾ ರೆಡ್ಡಿ ಸಲ್ಲಿಸಿರುವ ದಾಖಲೆಗಳಿಗೆ 3 ವಾರಗಳಲ್ಲಿ ಲಿಖಿತ ಹೇಳಿಕೆ ಸಲ್ಲಿಸಬಹುದು ಎಂದಿದೆ.

ಬಸ್ ಡಿಕ್ಕಿ: ಪ್ರಯಾಣಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್‌ವೊಂದು ಪ್ರಯಾಣಿ-ಕರೊಬ್ಬರಿಗೆ ಡಿಕ್ಕಿ ಹೊಡೆದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಪಶ್ಚಿಮ ಬಂಗಾಳದ ಭಿಷ್ವಾದೇಬ್ ದಾಸ್ (36) ಮೃತ ಪ್ರಯಾಣಿಕ.

ಸೋಮವಾರ ಬೆಳಿಗ್ಗೆ 4 ಗಂಟೆಯ ಸುಮಾರಿಗೆ ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 2 ‘ಎ’ನ ಅಂಕಣ ನಾಲ್ಕರಲ್ಲಿ ಘಟನೆ ಸಂಭವಿಸಿದೆ. ಬಸ್ ಅನ್ನು ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಡಿಕ್ಕಿ ಹೊಡೆದ ಪರಿಣಾಮ, ದಾಸ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಬಸ್ ಚಾಲಕನ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಉಪ್ಪಾರಪೇಟೆ ಸಂಚಾರ ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಕ್ರಿಪ್ಟೊ ಕರೆನ್ಸಿ, ಷೇರು ಹೂಡಿಕೆ ಹೆಸರಿನಲ್ಲಿ ₹25 ಲಕ್ಷ ವಂಚನೆ

ಬೆಂಗಳೂರು: ಕ್ರಿಪ್ಟೊ ಕರೆನ್ಸಿ ಹಾಗೂ ಷೇರುಗಳಲ್ಲಿ ಹೂಡಿಕೆ ಮಾಡಿದರೆ ಅಧಿಕ ಲಾಭ ಕೊಡಿಸುವ ಆಮಿಷವೊಡ್ಡಿ ₹ 25 ಲಕ್ಷ ವಂಚಿಸಿದ ಆರೋಪದಡಿ ಕೇಂದ್ರ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರ್ತಪೇಟೆ ನಿವಾಸಿ ಆರ್. ಚೇತನ್ ಕುಮಾರ್ ಅವರು ನೀಡಿದ ದೂರಿನ ಮೇರೆಗೆ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

‘ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಚೇತನ್ ಅವರಿಗೆ ಡಿಸೆಂಬರ್‌ನಲ್ಲಿ ಇನ್‌ಸ್ಟಾಗ್ರಾಂನಲ್ಲಿ ‘ಪ್ರಾಫಿಟಬಲ್ ಟ್ರೇಡರ್’ ಹೆಸರಿನ ಐಡಿ ಮೂಲಕ ಅಪರಿಚಿತ ವ್ಯಕ್ತಿ ಸಂಪರ್ಕಿಸಿದ್ದಾನೆ. ಕ್ರಿಪ್ಟೊ ಕರೆನ್ಸಿ ಮತ್ತು ಷೇರುಗಳಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಕೊಡಿಸುವುದಾಗಿ ಆಮಿಷ ವೊಡ್ಡಿದ್ದಾನೆ. ಆತನ ಮಾತು ನಂಬಿದ ಚೇತನ್, ಆತ ಸೂಚಿಸಿದ ವಿವಿಧ ಬ್ಯಾಂಕ್ ಖಾತೆಗಳಿಗೆ ₹49.96 ಲಕ್ಷ ವರ್ಗಾಯಿಸಿದ್ದಾರೆ. ಕೆಲ ದಿನಗಳ ಬಳಿಕ ಲಾಭದ ರೂಪದಲ್ಲಿ ಚೇತನ್‌ಗೆ ₹24.83 ಲಕ್ಷ ವಾಪಸ್ ನೀಡಿ, ನಾಪತ್ತೆ ಆಗಿದ್ದಾನೆ’ ಎಂದು ಪೊಲೀಸರು ತಿಳಿಸಿದರು.



ಹೈದರ್ ಕೊಲೆ: ಕದ್ದ ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು

ಬೆಂಗಳೂರು: ಅಶೋಕ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿ ಹೈದರ್ ಅಲಿ (38) ಕೊಲೆಗೆ ಆರೋಪಿಗಳು ಕಳವು ಮಾಡಿರುವ ದ್ವಿಚಕ್ರ ವಾಹನಗಳನ್ನು ಬಳಸಿರುವುದು ತನಿಖೆ ವೇಳೆ ಗೊತ್ತಾಗಿದೆ.

ಗರುಡಾ ಮಾಲ್ ಬಳಿ ಶುಕ್ರವಾರ ಮಧ್ಯರಾತ್ರಿ ಹತ್ತಕ್ಕೂ ಹೆಚ್ಚು ಮಂದಿ ಆರೋಪಿಗಳು ಹೈದರ್ ಅಲಿ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಜನರನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ.

‘ಹಳೇ ದ್ವೇಷದಿಂದ ಮತ್ತೊಂದು ಗುಂಪಿನವರು ಕೊಲೆ ಮಾಡಿದ್ದಾರೆ ಎಂಬುದು ಇದುವರೆಗೂ ನಡೆದ ತನಿಖೆಯಿಂದ ಗೊತ್ತಾಗಿದೆ. ಆರೋಪಿಗಳು ಕೃತ್ಯಕ್ಕೆ ಕಳವು ಮಾಡಿದ ದ್ವಿಚಕ್ರ ವಾಹನಗಳನ್ನು ಬಳಸಿರುವುದು ಗೊತ್ತಾಗಿದೆ. ಈ ಬಗ್ಗೆಯೂ ತನಿಖೆ ನಡೆಯುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ನೇಹಿತನ ಜತೆಗೆ ಅಂದು ಮಧ್ಯರಾತ್ರಿವರೆಗೂ ಠಾಣಾ ವ್ಯಾಪ್ತಿಯ ಪಬ್‌ವೊಂದರಲ್ಲಿ ಪಾರ್ಟಿ ನಡೆಸಿದ್ದ ಹೈದರ್ ಅಲಿ, ಬೈಕ್‌ನಲ್ಲಿ ಆನೆಪಾಳ್ಯದ ಮನೆಗೆ ತೆರಳುತ್ತಿದ್ದ. ಫುಟ್‌ಬಾಲ್ ಮೈದಾನದ ಬಳಿಯ ತಿರುವಿನಲ್ಲಿ ಬೈಕ್ ಅನ್ನು ಅಡ್ಡಗಟ್ಟಿದ ಆರೋಪಿಗಳು, ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಕೊಲೆ ಮಾಡಿದ್ದರು.



ಜೆಡಿಎಸ್ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

ಸರ್ಕಾರದ ವಿರುದ್ಧ ಜೆಡಿಎಸ್ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲೆ ಏರಿಕೆ ಖಂಡಿಸಿ, ಗೃಹಲಕ್ಷ್ಮಿ ಯೋಜನೆಯ ಹಣವನ್ನು ನಿಗದಿತ ಅವಧಿಯ ಒಳಗೆ ಫಲಾನುಭವಿಗಳ ಖಾತೆಗೆ ಜಮೆ ಮಾಡಲು ಒತ್ತಾಯಿಸಿ ಜೆಡಿಎಸ್ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಗೃಹಲಕ್ಷ್ಮಿ ಸೇರಿದಂತೆ ಗ್ಯಾರಂಟಿ ಯೋಜನೆಗಳ ಹಣವನ್ನು ಸರ್ಕಾರ ಮನಸ್ಸಿಗೆ ಬಂದಂತೆ ನೀಡುತ್ತಿದೆ. ಫಲಾನುಭವಿಗಳ ಖಾತೆಗೆ ಪ್ರತಿ ತಿಂಗಳು ಜಮೆ ಮಾಡಬೇಕು ಎಂದರು.

ರಾಜ್ಯದ ಜನರು ಕೇಳದಿದ್ದರೂ, ಐದು ಗ್ಯಾರಂಟಿ ಯೋಜನೆ ಜಾರಿಗೊಳಿಸುವುದಾಗಿ ಚುನಾವಣೆಯ ವೇಳೆ ಕಾಂಗ್ರೆಸ್ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದ ನಂತರ ಈ ಯೋಜನೆಗಳಿಗೆ ಎಷ್ಟು ಹಣ ಬೇಕಾಗುತ್ತದೆ ಎಂಬ ಜ್ಞಾನವೇ ಇರಲಿಲ್ಲ. ಗ್ಯಾರಂಟಿಗಳ ಭಾರಕ್ಕೆ ನಲುಗಿರುವ ಕರ್ನಾಟಕ, ಹಿಮಾಚಲ ಪ್ರದೇಶದಂತೆ ಆರ್ಥಿಕ ದಿವಾಳಿಯತ್ತ ಸಾಗಿದೆ ಎಂದು ದೂರಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ದಲಿತ ಸಂಘಟನೆಗಳ ಒಕ್ಕೂಟದಿಂದ ಧರಣಿ

‘ಅನ್ಯ ಉದ್ದೇಶಕ್ಕೆ ಅನುದಾನ ಬಳಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ-(ಎಸ್‌ಸಿಎಸ್‌ಪಿ) ಹಾಗೂ ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ (ಟಿಎಸ್‌ಪಿ) ಮೀಸಲಿಟ್ಟ ಅನುದಾನವನ್ನು ರಾಜ್ಯ ಸರ್ಕಾರವು ಅನ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ದಲಿತ ಸಂಘಟನೆಗಳ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಅನುದಾನವನ್ನು ನಿಗದಿತ ಉದ್ದೇಶಕ್ಕೆ ಮಾತ್ರವೇ ಬಳಕೆ ಮಾಡಿಕೊಳ್ಳಬೇಕು ಎಂದೂ ಪ್ರತಿಭಟನಕಾರರು ಆಗ್ರಹಿಸಿದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಸಮುದಾಯದವರ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಎಸ್‌ಸಿಎಸ್‌ಪಿ– ಟಿಎಸ್‌ಪಿ ಹಣವನ್ನು ಗ್ಯಾರಂಟಿಯಂತಹ ಯೋಜನೆಗಳಿಗೆ ರಾಜ್ಯ ಸರ್ಕಾರ ಬಳಕೆ ಮಾಡುತ್ತಿದೆ. ಆ ಮೂಲಕ ರಾಜ್ಯ ಸರ್ಕಾರವು ದಲಿತ ವಿರೋಧಿ ನೀತಿ ಅನು-ಸರಿಸುತ್ತಿದೆ ಎಂದು ವಿವಿಧ ಜಿಲ್ಲೆಗಳಿಂದ ಬಂದಿದ್ದ ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಬೇರೆ ಬೇರೆ ಯೋಜನೆಗಳಿಗೆ ಬಳಕೆ ಮಾಡಿರುವ ಅನುದಾನವನ್ನು ತಕ್ಷಣವೇ ವಾಪಸ್ ಪಡೆದುಕೊಳ್ಳಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಮುಂದಿನ ವರ್ಷದಿಂದ ಅನ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುವುದಿಲ್ಲ ಎಂಬುದಾಗಿ ಈ ಬಾರಿಯ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಎಸ್‌ಸಿಎಸ್‌ಪಿ– ಟಿಎಸ್‌ಪಿ ಕಾಯ್ದೆಯ ಸೆಕ್ಷನ್ 7 ‘ಡಿ’ ಅನ್ನು ರದ್ದುಪಡಿಸಿದ ಹಾಗೆಯೇ ಸೆಕ್ಷನ್ 7‘ಸಿ’ ಅನ್ನೂ ರದ್ದು ಪಡಿಸಬೇಕು ಎಂದು ಒತ್ತಾಯಿಸಿದರು. ಎಂ.ವೆಂಕಟಸ್ವಾಮಿ ಸೇರಿದಂತೆ ಹಲವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ದಲಿತ ಸಂಘಟನೆಗಳ ಒಕ್ಕೂಟದಿಂದ ಸೋಮವಾರ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಬ್ಯಾಂಕ್‌ನ ಲಾಕರ್‌ನಲ್ಲಿದ್ದ ಚಿನ್ನಾಭರಣ ನಾಪತ್ತೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಮುಖ್ಯಾಂಶಗಳು

- ಬ್ಯಾಂಕ್ ಸಹಾಯಕ ವ್ಯವಸ್ಥಾಪಕ, ಸಿಬ್ಬಂದಿ ವಿರುದ್ಧ ಪ್ರಕರಣ
- ಕಳೆದ ಅಕ್ಟೋಬರ್‌ನಲ್ಲಿ ಪರಿಶೀಲಿಸಿದಾಗ ಚಿನ್ನಾಭರಣ ಇದ್ದವು

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾದ ಜಯನಗರ ಶಾಖೆಯ ಲಾಕರ್‌ನಲ್ಲಿ ಇರಿಸಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣಗಳು ನಾಪತ್ತೆಯಾಗಿದ್ದು, ಬ್ಯಾಂಕ್ ಸಹಾಯಕ ವ್ಯವಸ್ಥಾಪಕ ಮತ್ತು ಸಿಬ್ಬಂದಿ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಹಕ ರಾಜೇಂದ್ರ ಸಿ. ಪಾಟೀಲ್ ಅವರ ದೂರಿನ ಮೇರೆಗೆ ಸಹಾಯಕ ವ್ಯವಸ್ಥಾಪಕ ರಾಜು ಮತ್ತು ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ರಾಜು ಮತ್ತು ರಾಜೇಂದ್ರ ಬಳಿ ಲಾಕರ್‌ನ ಕೀ ಇತ್ತು. ಬ್ಯಾಂಕ್‌ನ ಸಿಸಿಟಿವಿ ಕ್ಯಾಮೆರಾಗಳ ಪರಿಶೀಲನೆ ನಡೆಯುತ್ತಿದೆ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ತಿಳಿಸಿದ್ದಾರೆ.

‘ಜಯನಗರ 8ನೇ ಬ್ಲಾಕ್‌ನಲ್ಲಿರುವ ಬ್ಯಾಂಕ್‌ನಲ್ಲಿ ನಾಲ್ಕು ವರ್ಷಗಳಿಂದ ಲಾಕರ್ ಹೊಂದಿದ್ದು, ಚಿನ್ನಾಭರಣ ಹಾಗೂ ದಾಖಲಾತಿಗಳನ್ನು ಇರಿಸಿದ್ದೆ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಲಾಕರ್ ಪರಿಶೀಲನೆ ವೇಳೆ ಚಿನ್ನಾಭರಣ ಹಾಗೂ ದಾಖಲೆಗಳಿದ್ದವು. ಆದರೆ, ಫೆಬ್ರವರಿ 25ರಂದು ಲಾಕರ್ ತೆರೆದಾಗ ಚಿನ್ನಾಭರಣ ಕಳ್ಳತನವಾಗಿರುವುದು ಹಾಗೂ ಅಲ್ಲಿ ನಕಲಿ ಬಳೆಗಳನ್ನು ಇರಿಸಿರುವುದು ಕಂಡುಬಂದಿದೆ’ ಎಂದು ರಾಜೇಂದ್ರ ಪಾಟೀಲ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಲಾಕರ್‌ನ ಒಂದು ಕೀ ನನ್ನ ಬಳಿ, ಮತ್ತೊಂದು ಮಾಸ್ಟರ್ ಕೀ ಬ್ಯಾಂಕ್‌ನ ರಾಜು ಬಳಿ ಇರುತ್ತಿತ್ತು. ಲಾಕರ್‌ನಲ್ಲಿದ್ದ ನಕಲಿ ಬಳೆ ಕುರಿತು ರಾಜು ಅವರನ್ನು ಪ್ರಶ್ನಿಸಿದಾಗ, ‘ನಮಗೆ ಗೊತ್ತಿಲ್ಲ. ಆರ್‌ಬಿಐನಿಂದ ಮಾರ್ಗಸೂಚಿ ಇದ್ದು, ನಮಗೆ ಇದರ ಬಗ್ಗೆ ಸಂಬಂಧವಿಲ್ಲ’ ಎಂದು ಹೇಳಿಕೆ ನೀಡಿದ್ದಾರೆ. ಲಾಕರ್‌ನಲ್ಲಿದ್ದ ಚಿನ್ನದ ಆಭರಣ ಕಳ್ಳತನ ಆಗಿರುವ ಕುರಿತು ರಾಜು ಮತ್ತು ಸಿಬ್ಬಂದಿ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿ ರಾಜೇಂದ್ರ ದೂರು ನೀಡಿದ್ದಾರೆ.



ಸಚಿವ ಎಚ್‌.ಸಿ. ಮಹದೇವಪ್ಪ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಅಶ್ವಿನಿ ಕೆ.ಪಿ., ನಯನಾ ಮೋಟಮ್ಮ ಮತ್ತು ರುತ್ ಮನೋರಮಾ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

‘ಬಯೋಡೀಸೆಲ್ ಮಾರಾಟಕ್ಕೆ ಪರವಾನಗಿ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಯೋಡೀಸೆಲ್ (ಬಿ–100) ಮಾರಾಟವನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರ ಪರವಾನಗಿ ನೀಡಬೇಕು ಎಂದು ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಇ. ಸುಧೀಂದ್ರ ಆಗ್ರಹಿಸಿದರು.

ಆಹಾರ, ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಅವರು ಈ ಕುರಿತು ಚರ್ಚಿಸಿದರು.



‘ರೀಟೆಲ್ ಔಟ್‌ಲೆಟ್‌ಗಳನ್ನು ಆರಂಭಿಸಿ ಬಯೋಡೀಸೆಲ್ ಮಾರಾಟ ಮಾಡಬೇಕು. ಅದಕ್ಕೆ ಪರವಾನಗಿ ಅಗತ್ಯ. ಬಯೋಡೀಸೆಲ್ ಅನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಕೇಂದ್ರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು 2019ರಲ್ಲಿಯೇ ಅನುಮತಿ ನೀಡಿದೆ. ಅದಕ್ಕೆ ಪೂರಕವಾಗಿ ರಾಜ್ಯದಲ್ಲೂ ಅನುಮತಿ ನೀಡಬೇಕು’ ಎಂದು ಸಚಿವರ ಗಮನಕ್ಕೆ ತಂದರು.

ಎಲ್ಲ ಜೈವಿಕ ಇಂಧನಗಳ ಉಸ್ತುವಾರಿಗಾಗಿ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯನ್ನು ನೋಡಲ್ ಏಜೆನ್ಸಿಯಾಗಿ ನೇಮಿಸದೇ ಹೋದರೆ ಎಲ್ಲ ಪ್ರಯತ್ನಗಳು ವ್ಯರ್ಥವಾಗಲಿದೆ ಎಂದರು.

ಈ ಬಗ್ಗೆ ಪರಿಶೀಲಿಸಿ ಆದೇಶ ಹೊರಡಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮನೋಜ್ ಜೈನ್, ಆಯುಕ್ತೆ ವಾಸಿರೆಡ್ಡಿ ವಿಜಯ ಜ್ಯೋತ್ಸ್ನಾ, ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್ ಎಲ್., ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಆರ್. ಲೋಹಿತ್, ಯೋಜನಾ ಸಲಹೆಗಾರ ದಯಾನಂದ ಜಿ.ಎನ್. ಭಾಗವಹಿಸಿದ್ದರು.

‘ಮಹಿಳಾ ಮೀಸಲಾತಿ ಕಾನೂನು ರೂಪ ಪಡೆಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ಪ್ರಾತಿನಿಧ್ಯದಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯು ಕಾನೂನು ರೂಪ ಪಡೆದುಕೊಂಡರೆ ಮಾತ್ರ ರಾಜಕೀಯದಲ್ಲಿ ಮಹಿಳೆಯರ ಪ್ರಮಾಣ ಹೆಚ್ಚಲು ಸಾಧ್ಯ’ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ರಾಷ್ಟ್ರೀಯ ದಲಿತ ಮಹಿಳಾ ಫೆಡರೇಷನ್ (ಎನ್‌ಎಫ್‌ಡಿಡಬ್ಲ್ಯು) ಮತ್ತು ಮಹಿಳಾ ಧ್ವನಿ ಸೋಮವಾರ ಹಮ್ಮಿಕೊಂಡಿದ್ದ ‘ಅಂಚಿನಲ್ಲಿರುವ ಸಮುದಾಯದ ಮಹಿಳೆಯರ ಮುಂದಿನ ಹಾದಿ’, ‘ಬೀಜಿಂಗ್ + 30 ಪ್ರತಿಬಿಂಬ’ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಯಾವ ಹೋರಾಟವೂ ಇಲ್ಲದೇ ಮಹಿಳೆಯರಿಗೆ ಮತದಾನದ ಹಕ್ಕು ಡಾ. ಬಿ.ಆರ್. ಅಂಬೇಡ್ಕರ್ ಅವರಿಂದಾಗಿ ಸಿಕ್ಕಿತು. ಸಂವಿಧಾನದವು ಎಲ್ಲ ನಾಗರಿಕರಿಗೆ ಸಮಾನ ಹಕ್ಕುಗಳನ್ನು ಒದಗಿಸಿತು. ಆದರೆ, ಇದು ಮಹಿಳೆಯರಿಗೆ ತಲುಪುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಮಾವೇಶದಲ್ಲಿ ದೇಶದ ಹಲವು ಭಾಗಗಳಿಂದ ದಲಿತ ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರು, ಪೌರಕಾರ್ಮಿಕರು ಹಾಗೂ ಮಹಿಳಾ ಸಂಘಟನೆಗಳಿಂದ ಒಟ್ಟು 250ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಶೀಘ್ರವೇ ಈಡೇರಿಸಬೇಕಾದ ಬೇಡಿಕೆಗಳ ಬಗ್ಗೆ ಪ್ರಸ್ತಾಪಿಸಿ ಚರ್ಚಿಸಲಾಯಿತು.

ವಿಶ್ವಸಂಸ್ಥೆ ವಿಶೇಷ ಪ್ರತಿನಿಧಿ ಕೆ.ಪಿ. ಅಶ್ವಿನಿ, ವುಮೆನ್ಸ್ ವಾಯ್ಸ್ ಪ್ರಧಾನ ಕಾರ್ಯದರ್ಶಿ ರುತ್ ಮನೋರಮಾ, ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಕಾರ್ಯಕರ್ತೆ ಅಕ್ಕೈ ಪದ್ಮಸಾಲಿ, ಪ್ರಮುಖರಾದ ಎಸ್. ಲೀಲಾವತಿ, ಅರ್ಚನಾ ಕ್ಯಾಶ್ಮೀರ್ ಪಾಲ್ಗೊಂಡಿದ್ದರು.

‘ರಾಜಕೀಯ ಪ್ರವೇಶ: ನನ್ನದೇ ಪರಿಶ್ರಮ’

ಶಾಸಕಿ ನಯನಾ ಮೋಟಮ್ಮ ಮಾತನಾಡಿ, ‘ನನ್ನ ತಾಯಿ ಒಬ್ಬ ಅನುಭವಿ ರಾಜಕಾರಣಿಯಾಗಿದ್ದರೂ ನಾನು ವಿಧಾನಸಭೆಗೆ ಬರಲು ಸ್ವಂತ ಪರಿಶ್ರಮವೇ ಕಾರಣ. ನನ್ನನ್ನು ರಾಜಕೀಯಕ್ಕೆ ನನ್ನ ತಾಯಿ ಕರೆದಿಲ್ಲ. ಹಲವು ಸವಾಲುಗಳನ್ನು ಮೆಟ್ಟಿ ನನ್ನದೇ ದಾರಿಯ ಮೂಲಕ ರಾಜಕೀಯ ಬದುಕು ಕಂಡುಕೊಂಡೆ. ಹೆಣ್ಣು ಯಾವುದಕ್ಕೂ ಅಂಜದೆ ಸಮಸ್ಯೆಗಳನ್ನು ಮೆಟ್ಟಿ ನಿಂತು ಮಾದರಿಯಾಗಬೇಕಾದ ಅವಶ್ಯಕತೆ ಇದೆ’ ಎಂದು ಪ್ರತಿಪಾದಿಸಿದರು.

ಬೆಂಗಳೂರು ಚಿತ್ರೋತ್ಸವದಲ್ಲಿ ನಟ ಸೃಜನ್ ಲೋಕೇಶ್ ಆಗ್ರಹ

‘ಸುಬ್ಬಯ್ಯ ನಾಯ್ಡು ಸಾಧನೆ ಶಾಶ್ವತವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡದ ಮೊದಲ ವಾಕ್ಚಿತ್ರ ‘ಸತಿ ಸುಲೋಚನ’ ಕೇವಲ ಮಾರ್ಚ್ 3ಕ್ಕಷ್ಟೇ ಸೀಮಿತವಾಗಿದೆ. ಇದು ದುರಂತ. ಈ ಸಿನಿಮಾದ ನಾಯಕ ನಟ ಎಂ.ವಿ.ಸುಬ್ಬಯ್ಯ ನಾಯ್ಡು ಅವರ ಸಾಧನೆ ಶಾಶ್ವತವಾಗಿ ಉಳಿಯಬೇಕು’ ಎಂದು ನಟ, ಸುಬ್ಬಯ್ಯ ನಾಯ್ಡು ಮೊಮ್ಮಗ ಸೃಜನ್ ಲೋಕೇಶ್ ಆಗ್ರಹಿಸಿದ್ದಾರೆ.

ಸೋಮವಾರ (ಮಾರ್ಚ್ 3) ಕನ್ನಡದ ಮೊದಲ ವಾಕ್ಚಿತ್ರ ‘ಸತಿ ಸುಲೋಚನ’ ಬಿಡುಗಡೆಯಾಗಿ 91 ವರ್ಷ ತುಂಬಿದ ದಿನ. ಈ ಹಿನ್ನೆಲೆಯಲ್ಲಿ 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ‘ವಿಶ್ವ ಕನ್ನಡ ಸಿನಿಮಾ ದಿನ ಸಂಭ್ರಮ’ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಸೃಜನ್, ‘‘ಸತಿ ಸುಲೋಚನ’ ಕನ್ನಡದ ಮೊದಲ ವಾಕ್ಚಿತ್ರ ಎನ್ನುವ ಮಾತಷ್ಟೇ ಪುನರುಚ್ಚಾರವಾಗುತ್ತಿದೆ. ಸುಬ್ಬಯ್ಯ ನಾಯ್ಡು ಅವರ ಕೊಡುಗೆಗಳಿಗೆ ಪ್ರತಿಯಾಗಿ ನಾವೇನು ಕೊಟ್ಟಿದ್ದೇವೆ. ಒಂದು ಸ್ಮಾರಕ ಕಟ್ಟಿ-ಸಿದ್ದೇವೆಯೇ? ಒಂದು ರಸ್ತೆಗೆ ಹೆಸ-ರಿಟ್ಟಿದ್ದೇವೆಯೇ? ಸುಬ್ಬಯ್ಯ ನಾಯ್ಡು ಯಾರು ಎಂದರೆ ಹೆಚ್ಚಿನವರಿಗೆ ಇಂದು ತಿಳಿದಿಲ್ಲ. ‘ಸತಿ ಸುಲೋಚನಾ’ ಸಿನಿಮಾದಲ್ಲಿ ದುಡಿದವರಿಗೆ ಪ್ರತಿಯಾಗಿ ಏನು ಮಾಡಿದ್ದೇವೆ. ಒಂದು ದಿನ ಜ್ಞಾಪಿಸಿಕೊಂಡರೆ ಸಾಲುವುದಿಲ್ಲ. ಎಲ್ಲಾ ಮಹಾನ್ ಕಲಾವಿದರು, ತಂತ್ರಜ್ಞರನ್ನು ಶಾಶ್ವತವಾಗಿ ನೆನಪಿಸಿಕೊಳ್ಳಬೇಕು’ ಎಂದರು.

ನಟ ಕಿಶೋರ್ ಮಾತನಾಡಿ, ‘ಸತಿ ಸುಲೋಚನದಂಥ ಭದ್ರ ಬುನಾದಿ ಮೇಲೆ ಕನ್ನಡ ಚಿತ್ರರಂಗ ನಿಂತಿದೆ. ಜನಪರ ಸಿನಿಮಾಗಳನ್ನುಮಾಡುವುದಕ್ಕೆ, ಮಾಡುತ್ತಿರುವುದಕ್ಕೆ ಬುನಾದಿ ಹಾಕಿದ್ದು ಇಂತಹ ಸಿನಿಮಾಗಳು. ‘ಸರ್ವಜನಾಂಗದ ಶಾಂತಿಯ ತೋಟ’ ಎಂಬ ವಿಷಯದಡಿ ಚಿತ್ರೋತ್ಸವ ನಡೆಯುತ್ತಿದೆ. ಈ ಸಿನಿಮಾದಲ್ಲಿ ಕೆಲಸ ಮಾಡಿದವರ ಹಿನ್ನೆಲೆ ನೋಡಿದರೆ ಯಾರೂ ಕನ್ನಡ ಮೂಲದವರಲ್ಲ. ಬೇರೆ ಭಾಷೆಯವರು ಸೇರಿ ಕನ್ನಡ ಸಿನಿಮಾ ಮಾಡಿದ್ದರು. ಆ ಕಾಲದಲ್ಲಿ ರಾಮನನ್ನು ಇಟ್ಟುಕೊಂಡು ಕಥೆ ಮಾಡಬಹುದಿತ್ತು. ಆದರೆ ‘ಸತಿ ಸುಲೋಚನಾ’ದಲ್ಲಿ ಹೆಣ್ಣನ್ನು ಮುಖ್ಯ ಪಾತ್ರವಾಗಿಟ್ಟುಕೊಂಡು ಹೆಣ್ಣಿನ ದನಿಯಲ್ಲಿ ಯುದ್ಧವನ್ನು ಖಂಡಿಸಿರುವುದು ಹೆಮ್ಮೆ ಎನಿಸಿತು. ಈ ರೀತಿ ಕ್ರಾಂತಿಕಾರಿ ಆಲೋಚನೆ ಆ ಕಾಲದಲ್ಲಿ ಇತ್ತು ಎನ್ನುವುದು ಕಣ್ತೆರೆಸಬೇಕು. ಇವತ್ತು ಏನು ಮಾಡುತ್ತಿದ್ದೇವೆ ಎನ್ನುವುದನ್ನು ಪ್ರಶ್ನಿಸಿಕೊಳ್ಳಬೇಕು’ ಎಂದರು.

ಚಿತ್ರದ ನಿರ್ದೇಶಕ ವೈ.ವಿ.ರಾವ್ ಅವರ ಮೊಮ್ಮಕ್ಕಳು, ಸಾಹಿತ್ಯ ಬರೆದ ಬೆಳ್ಳಾವೆ ನರಹರಿ ಶಾಸ್ತ್ರಿ ಅವರ ಮೊಮ್ಮಕ್ಕಳು ಉಪಸ್ಥಿತರಿದ್ದರು. ರಂಗಗಾಯಕ ಲಕ್ಷ್ಮಣದಾಸ್ ಅವರು ‘ಸತಿ ಸುಲೋಚನಾ’ದ ಹಾಡುಗಳಿಗೆ ಧ್ವನಿಯಾದರು.



ನಟ ಸೃಜನ್ ಲೋಕೇಶ್ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ, ನಟ ಸಾಧು ಕೋಕಿಲಾ ಅವರು ಚರ್ಚೆಯಲ್ಲಿ ತೊಡಗಿದ್ದರು – ಪ್ರಜಾವಾಣಿ ಚಿತ್ರ

ಸಿನಿಮಾ ಕುರಿತ ಐದು ಕೃತಿ ಬಿಡುಗಡೆ

ಎನ್.ಎಸ್.ಶ್ರೀಧರಮೂರ್ತಿ ಅವರು ಬರೆದ ‘ಕನ್ನಡ ಸಿನಿಮಾ ಸಂಗೀತ ನಾದ ವಿನ್ಯಾಸ’, ಅ.ನಾ.ಪ್ರಹ್ಲಾದ ರಾವ್ ಅವರು ಬರೆದ ‘ಕನ್ನಡ ಸಿನಿಮಾ ಜನಪದ ಹಾದಿ’, ಡಿ.ಪಿ.ಸತೀಶ್‌ಚಂದ್ರ ಅವರು ಬರೆದ ‘ಕನ್ನಡ ಸಿನಿಮಾ ಪೌರಾಣಿಕ ವೈಭವ’, ಜೆ.ಎಂ.ಪ್ರಹ್ಲಾದ್ ಅವರು ಬರೆದ ‘ಕನ್ನಡ ಸಿನಿಮಾ ಐತಿಹಾಸಿಕ ನೆಲೆಗಟ್ಟು’ ಹಾಗೂ ಮುರಳೀಧರ ಖಜಾನೆ ಅವರು ಬರೆದ ‘ಕಾರ್ನಾಡ್ ಕೆಲಿಡೊಸ್ಕೋಪ್’ ಕೃತಿಗಳನ್ನು ‘ವಿಶ್ವ ಕನ್ನಡ ಸಿನಿಮಾ ದಿನ ಸಂಭ್ರಮ’ದಲ್ಲಿ ಬಿಡುಗಡೆಗೊಳಿಸಲಾಯಿತು.

ಡಿಕೆಶಿ ವಜಾಕ್ಕೆ ಆಗ್ರಹ

ಕರ್ನಾಟಕ ಚಿತ್ರರಂಗದ ಬಗ್ಗೆ ಹಗುರವಾಗಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸಂಪುಟದಿಂದ ಕೂಡಲೇ ವಜಾ ಮಾಡಬೇಕು ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಆಗ್ರಹಿಸಿದ್ದಾರೆ.

‘ಚಿತ್ರರಂಗದಲ್ಲಿ ಕೆಲಸ ಮಾಡುವ ಎಲ್ಲರಿಗೂ ನಟ್–ಬೋಲ್ಟ್ ಟೈಟ್ ಮಾಡುವುದಾಗಿ ಹೇಳಿರುವುದು ಗೂಂಡಾವರ್ತನೆ. ಈ ಮೂಲಕ ನಟ, ನಟಿಯರಿಗೆ ಬೆದರಿಕೆ ಹಾಕಿದ್ದಾರೆ. ಇದು ಅವರ ಸಂಸ್ಕೃತಿಯನ್ನು ತೋರಿಸುತ್ತದೆ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ದಲಿತರ, ಹಿಂದುಳಿದವರ ಮೇಲೆ ದೌರ್ಜನ್ಯ ಎಸಗಿರುವ ಇಂಥ ವ್ಯಕ್ತಿಗೆ ಸಚಿವ ಸಂಪುಟದಲ್ಲಿ ಪ್ರಮುಖ ಸಚಿವ ಸ್ಥಾನಗಳನ್ನು ನೀಡಿ ಉಪ ಮುಖ್ಯಮಂತ್ರಿಯನ್ನಾಗಿ ಮಾಡಿರುವುದು ದುರಂತ ನೂರಾರು ವರ್ಷಗಳ ಇತಿಹಾಸ ಇರುವ ಕಾಂಗ್ರೆಸ್ ಪಕ್ಷ ಕೂಡಲೇ ಶಿವಕುಮಾರ್ ಅವರನ್ನು ವಜಾಗೊಳಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಶಾಲೆ: ಹೆಚ್ಚುವರಿ ಕೊಠಡಿಗಳಿಗೆ ಭೂಮಿ ಪೂಜೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಲ್ಕೆರೆ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದ್ದು, ಅದಕ್ಕೆ ಅನುಗುಣವಾಗಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ’ ಎಂದು ಶಾಸಕ ಬೈರತಿ ಬಸವರಾಜ ಹೇಳಿದರು.


ಕೆ.ಆರ್.ಪುರ ಸಮೀಪದ ಕಲ್ಕೆರೆ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯ ಹೆಚ್ಚುವರಿ ಐದು ನೂತನ ಕೊಠಡಿಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕಲ್ಕೆರೆ ಸುತ್ತಮುತ್ತಲಿನ ಗ್ರಾಮಗಳಿಂದ ಸರ್ಕಾರಿ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ. ಇದಕ್ಕೆ ಅನುಗುಣವಾಗಿ ಕೊಠಡಿಗಳನ್ನು ನಿರ್ಮಿಸಬೇಕಿತ್ತು. ಈಗ ₹65 ಲಕ್ಷ ವೆಚ್ಚದಲ್ಲಿ ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತದೆ ಎಂದು ಹೇಳಿದರು.

ದಕ್ಷಿಣ ವಲಯದ ಶಿಕ್ಷಣಾಧಿಕಾರಿ ಸಿ.ಎನ್.ಗೋವಿಂದಪ್ಪ ಮಾತನಾಡಿ, ಶಾಸಕರ ಸಹಕಾರದಿಂದ ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವಂತೆ ಶಿಕ್ಷಕರಿಗೆ ಮಾರ್ಗದರ್ಶನ ಮಾಡಲಾಗಿದೆ ಎಂದರು.

ಕಲ್ಕೆರೆ ಗ್ರಾಮದ ಮುಖಂಡ ಮಾಜಿ ಪಾಲಿಕೆ ಸದಸ್ಯ ಕಲ್ಕೆರೆ ರೇವಣ್ಣ, ಮಾದೇಶಪ್ಪ, ರವಿಕುಮಾರ್ ಇದ್ದರು.





ವಸ್ತು ಸಂಗ್ರಹಾಲಯದಲ್ಲಿ ಮನ ಸೆಳೆಯುತ್ತಿವೆ ಛಾಯಾಚಿತ್ರಗಳು, ಹಳೇ ಉಪಕರಣಗಳು

ಸಂಚಾರ ಪೊಲೀಸರ ಸಾಹಸಗಾಥೆ ಅನಾವರಣ

● ಆದಿತ್ಯ ಕೆ.ಎ.

ಬೆಂಗಳೂರು: ಸಂಚಾರ ಪೊಲೀಸ್ ವ್ಯವಸ್ಥೆ ರೂಪುಗೊಂಡಿದ್ದು ಹೇಗೆ? ಆರಂಭಿಕ ದಿನಗಳಲ್ಲಿ ಸಂಚಾರ ಪೊಲೀಸರು ಹೇಗೆ ಕಾರ್ಯ ನಿರ್ವಹಿಸುತ್ತಿದ್ದರು? ಹಿಂದೆ ಪೊಲೀಸ್ ಸಮವಸ್ತ್ರಗಳು ಹೇಗಿದ್ದವು? ಹಿಂದೆ ಜಂಕ್ಷನ್‌ಗಳು, ಟ್ರಾಫಿಕ್ ಸಿಗ್ನಲ್‌ಗಳು ಹೇಗೆ ಕಾರ್ಯ ನಿರ್ವಹಣೆ ಮಾಡುತ್ತಿದ್ದವು ಎಂಬುದನ್ನು ತಿಳಿದುಕೊಳ್ಳುವ ಕುತೂಹಲವೇ...?

– ಹಾಗಿದ್ದರೆ ನೀವು, ನಗರದ ಇನ್‌ಫೆಂಟ್ರಿ ರಸ್ತೆಯ ಸಂಚಾರ ನಿರ್ವಹಣೆ ಕೇಂದ್ರದ ಮೊದಲ ಮಹಡಿಯಲ್ಲಿ ಸ್ಥಾಪಿಸಲಾಗಿರುವ 'ಸಂಚಾರ ಪೊಲೀಸ್ ವಸ್ತು ಸಂಗ್ರಹಾಲಯ ಹಾಗೂ ಅನುಭವ ಕೇಂದ್ರ'ಕ್ಕೆ ಭೇಟಿ ನೀಡಬೇಕು.

ಕೇಂದ್ರವು ಸಂಚಾರ ಪೊಲೀಸ್ ವ್ಯವಸ್ಥೆಯ ವಿಕಸನ, ತಂತ್ರಜ್ಞಾನ ಬಳಕೆ, ಸಂಚಾರ ಪೊಲೀಸರ ಸಾಹಸಗಾಥೆ ಕುರಿತು ಭರಪೂರ ಮಾಹಿತಿ ಒದಗಿಸುತ್ತಿದೆ. ನೋಡುಗರನ್ನು ಕೇಂದ್ರವು ಶತಮಾನದ ಹಿಂದಕ್ಕೆ ಕೊಂಡೊಯ್ಯುತ್ತದೆ. ನಗರದ ಅಭಿವೃದ್ಧಿ, ತಂತ್ರಜ್ಞಾನದಲ್ಲಿ ಆಗಿರುವ ಬದಲಾವಣೆ, ಪೊಲೀಸರ ಕಾರ್ಯನಿರ್ವಹಣೆ, ಹೆಮ್ಮೆಯ ನಗರಿಯನ್ನಾಗಿ ರಾಜಧಾನಿಯನ್ನು ರೂಪಿಸಲು ಪೊಲೀಸರು ವಹಿಸುತ್ತಿರುವ ಪಾತ್ರದ ಕುರಿತು ಈ ಕೇಂದ್ರವು ಗಮನ ಸೆಳೆಯುತ್ತಿದೆ.

ಸಂಚಾರ ಪೊಲೀಸರ ಇತಿಹಾಸ, ಅವರ ಕೆಲಸಗಳ ಕುರಿತು ಬೆಳಕು ಚೆಲ್ಲುತ್ತಿರುವ ದೇಶದ ಮೊದಲ ವಸ್ತು ಸಂಗ್ರಹಾಲಯ ಇದಾಗಿದೆ ಎಂದು ಪೊಲೀಸರು ಹೆಮ್ಮೆಯಿಂದ ನುಡಿಯುತ್ತಾರೆ.





ವಿಜಯನಗರ ಸೇಂಟ್ ಜಾನ್ಸ್ ಶಾಲೆಯ ವಿದ್ಯಾರ್ಥಿಗಳು ವಸ್ತು ಸಂಗ್ರಹಾಲಯ ವೀಕ್ಷಿಸಿದರು (ಎಡ ಚಿತ್ರ). 'ಬಿಟಿಪಿ ರೋಡ್ ಮಾಸ್ಟರ್' ಕುರಿತು ಸಂಚಾರ ಪೊಲೀಸ್ ಕಾನ್‌ಸ್ಟೆಬಲ್ ವಿವರಣೆ ನೀಡಿದರು ಚಿತ್ರಗಳು: ಪ್ರಶಾಂತ್ ಎಚ್‌.ಜಿ.

1908ಕ್ಕೂ ಹಿಂದೆ ಸಂಚಾರ ವ್ಯವಸ್ಥೆ ನಿರ್ವಹಣೆ ಮಾಡುತ್ತಿರಲಿಲ್ಲ. 1908ರಲ್ಲಿ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 'ಮೈಸೂರು ಪೊಲೀಸ್ ಕಾಯ್ದೆ' ಜಾರಿಗೆ ತಂದಿದ್ದರು. ಕಾಯ್ದೆಯ ಅನ್ವಯ ಸಂಚಾರ ನಿರ್ವಹಣೆಯ ಕರ್ತವ್ಯವನ್ನು ಮೊದಲ ಬಾರಿಗೆ ಸಿವಿಲ್ ಪೊಲೀಸರಿಗೆ ವಹಿಸಲಾಗಿತ್ತು. ಅವರು ಸಂಚಾರ ದಟ್ಟಣೆ ನಿರ್ವಹಣೆ, ಸಾರ್ವಜನಿಕರು ರಸ್ತೆ ನಿಯಮಗಳನ್ನು ಪಾಲಿಸುತ್ತಿದ್ದಾರೆಯೇ ಎಂಬುದನ್ನು ನೋಡಿಕೊಳ್ಳುತ್ತಿದ್ದರು. ಜತೆಗೆ, ವಾಹನಗಳು ಸೂರ್ಯಾಸ್ತದ ಅರ್ಧ ಗಂಟೆ ಹಾಗೂ ಸೂರ್ಯೋದಯಕ್ಕೂ ಒಂದು ಗಂಟೆ ಮೊದಲು ದೀಪಗಳನ್ನು ಬಳಸುತ್ತಿವೆಯೇ ಎಂಬುದನ್ನೂ ಅವರು ಖಚಿತ ಪಡಿಸಿಕೊಳ್ಳಬೇಕಿತ್ತು.

1930ರಲ್ಲಿ ಅಂದಿನ ಮೈಸೂರು ರಾಜ್ಯದ ಐಜಿಪಿ ಎಫ್‌.ಎ.ಹ್ಯಾಮಿಲ್ಟನ್ ಅವರು ಸಂಚಾರ ನಿರ್ವಹಣೆಗೆ ಪ್ರತ್ಯೇಕ ವ್ಯವಸ್ಥೆಬೇಕೆಂದು ಅಭಿಪ್ರಾಯಪಟ್ಟಿದ್ದರು. ಸರ್ಕಾರವು ಅವರ ಪ್ರಸ್ತಾವ ಒಪ್ಪಿ, ಬೆಂಗಳೂರು ಸಂಚಾರ ವಿಭಾಗವನ್ನು ಆರಂಭಿಸಿತ್ತು. 1963ರಲ್ಲಿ ನಗರ ಪೊಲೀಸ್ ವ್ಯವಸ್ಥೆಯನ್ನು ಮರು ವಿಂಗಡಣೆ ಮಾಡಲಾಯಿತು. ಪೊಲೀಸ್ ಕಮಿಷನರೇಟ್ ವ್ಯವಸ್ಥೆ ಜಾರಿಗೆ ತರಲಾಯಿತು. ಸಂಚಾರ ವಿಭಾಗದ ಮೊದಲ ಡಿಸಿಪಿಯಾಗಿ ಬಿ.ಎನ್‌.ಗರುಡಾಚಾರ್ ಅವರು ನೇಮಕಗೊಂಡಿದ್ದರು. ಅದರ ಮಾಹಿತಿ ಕೇಂದ್ರದಲ್ಲಿ ಇದೆ.

ಸಿಗ್ನಲಿಂಗ್ ವ್ಯವಸ್ಥೆ: ಜಂಕ್ಷನ್‌ಗಳಲ್ಲಿ ಪೊಲೀಸರು ತಮ್ಮ ಕೈಗಳನ್ನು ಬಳಸಿ ವಾಹನ ದಟ್ಟಣೆ ನಿಯಂತ್ರಣ ಮಾಡುತ್ತಿದ್ದ ಛಾಯಾಚಿತ್ರಗಳಿಂದ ಹಿಡಿದು ಈವರೆಗಿನ ಕೃತಕ ಬುದ್ಧಿಮತ್ತೆ(ಎ.ಐ) ಕ್ಯಾಮೆರಾಗಳ ವರೆಗಿನ ಚಿತ್ರಗಳು ಸಂಗ್ರಹಾಲಯದಲ್ಲಿ ಇವೆ.

ಪ್ರಾರಂಭದ ದಿನಗಳಲ್ಲಿ ಸಂಚಾರ ಪೊಲೀಸರು, ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ಎರಡು ಅಡಿ ಎತ್ತರದ ಪೀಠದ ಮೇಲೆ ನಿಂತು ಸಂಚಾರ ನಿಯಂತ್ರಿಸುತ್ತಿದ್ದರು. 1970ರಲ್ಲಿ ಸಂಚಾರ ಕಿಯೋಸ್ಕ್‌ಗಳನ್ನು ಅಳವಡಿಸಿಕೊಳ್ಳಲಾಯಿತು.

1976ರಲ್ಲಿ ಸಂಚಾರ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ನೃಪತುಂಗ ರಸ್ತೆಯ ಜಂಕ್ಷನ್‌ನಲ್ಲಿ ವಾಹನ ದಟ್ಟಣೆ ನಿಯಂತ್ರಣ ಮಾಡುತ್ತಿದ್ದ ಚಿತ್ರ ಗಮನ ಸೆಳೆಯುತ್ತಿದೆ.

ಬೆಂಗಳೂರಿನಲ್ಲಿ ಮೊದಲ ಸಂಚಾರ ಸಿಗ್ನಲ್, 1998ರಲ್ಲಿ ಸದಾಶಿವನಗರ ಪೊಲೀಸ್ ಠಾಣೆಯ ಜಂಕ್ಷನ್‌ನಲ್ಲಿ ಸ್ಥಾಪಿಸಲಾದ ಮೊದಲ ಸೌರಶಕ್ತಿ ಚಾಲಿತ ಸಿಗ್ನಲ್, ಬಳ್ಳಾರಿ ರಸ್ತೆಯ ಕಾವೇರಿ ಚಿತ್ರಮಂದಿರದ ಬಳಿಯ ಜಂಕ್ಷನ್‌ನಲ್ಲಿ ಅಳವಡಿಸಿದ್ದ ಕೌಂಟ್‌ಡೌನ್ ಟೈಮರ್ ಸಿಗ್ನಲ್ ಹಾಗೂ ಇತ್ತೀಚೆಗೆ ಅಳವಡಿಸಿಕೊಂಡಿರುವ ಮೊಡರಾಟೊ ಸಿಗ್ನಲ್ ವ್ಯವಸ್ಥೆಯ ಚಿತ್ರಗಳು ಸಂಚಾರ ನಿಯಂತ್ರಣ ವ್ಯವಸ್ಥೆಯ ಇತಿಹಾಸದ ಚಿತ್ರಣ ನೀಡುತ್ತವೆ.

ಹಿಂದೆ ಗಣ್ಯರು ಬಂದಾಗ ಬೆಂಗಾವಲು ಪಡೆಯ ಕಾರ್ಯನಿರ್ವಹಣೆ, 1933ರಲ್ಲಿ ಪೊಲೀಸರು ಬಳಸುತ್ತಿದ್ದ ಖಾಕಿ ಚಡ್ಡಿ ಹಾಗೂ ಅಂಗಿಯ ಮಾದರಿ, 1982ರಲ್ಲಿ ತೆಳು ನೀಲಿ ಬಣ್ಣದ ಪ್ಯಾಂಟ್, ಬಿಳಿ ಬಣ್ಣದ ಅಂಗಿ, ಕಸ್ಟೋಡಿಯನ್ ಹೆಲ್ಮೆಟ್, ಬಾಬು ಹ್ಯಾಟ್‌ನ ಮಾದರಿಗಳೂ ಇವೆ. ಅಲ್ಲದೇ 1984ರಲ್ಲಿ ಖಾಕಿ ಸಮವಸ್ತ್ರಕ್ಕೆ ಹೇಗೆ ಬದಲಾವಣೆ ಮಾಡಿಕೊಳ್ಳಲಾಯಿತು ಎಂಬುದನ್ನು ಪರಿಚಯಿಸಲಾಗಿದೆ.

ಸಂಚಾರಕ್ಕೆ ಸಂಬಂಧಿಸಿದ ಹಳೇ ಉಪಕರಣಗಳು, ದಾಖಲೆಗಳು, ಸಂಚಾರ ನಿಯಮ ಉಲ್ಲಂಘನೆ ಪತ್ತೆಗೆ ಬಳಸುತ್ತಿದ್ದ ಡಾಪ್ಲರ್ ರೇಡಾರ್ ಉಪಕರಣ, ಅತಿವೇಗವಾಗಿ ಚಲಿಸುತ್ತಿದ್ದ ವಾಹನವನ್ನು ಪತ್ತೆಹಚ್ಚಲು ಬಳಸುತ್ತಿದ್ದ ಕ್ಯಾಮೆರಾಗಳು, ಮದ್ಯ ಸೇವಿಸಿದ್ದವರ ಪತ್ತೆಗೆ ಉಪಯೋಗಿಸುತ್ತಿದ್ದ ಹಳೇ ಉಪಕರಣಗಳು ಹಾಗೂ ಅವುಗಳ ಛಾಯಾಚಿತ್ರಗಳನ್ನು ಇಡಲಾಗಿದ್ದು, ಪ್ರೇಕ್ಷಕರ ಮನ ಸೆಳೆಯುತ್ತಿವೆ.

ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಭವಿಷ್ಯದಲ್ಲಿ ಏನೆಲ್ಲಾ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಲಾಗುವುದು ಎಂಬುದನ್ನು ವಿವರಿಸಲು ಪ್ರತ್ಯೇಕ ಕೊಠಡಿಯೇ ಇದೆ. ಅಲ್ಲಿ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸಲು 'ಬಿಟಿಪಿ ರೋಡ್ ಮಾಸ್ಟರ್' ಇಡಲಾಗಿದೆ. ಅಸ್ತ್ರಂ ಮೊಬೈಲ್ ಆ್ಯಪ್‌ನ ಬಗೆ ಮಾಹಿತಿ ನೀಡಲಾಗುತ್ತಿದೆ. ಸಂಚಾರ ವಿಭಾಗಕ್ಕೆ ಸಂಬಂಧಿಸಿದ ಪ್ರಶ್ನೆ ಕೇಳಿದರೆ ಇಲ್ಲಿರುವ 'ರೋಬೊ' ಥಟ್ ಎಂದು ಉತ್ತರಿಸುತ್ತದೆ.



ಗಮನ ಸೆಳೆಯುತ್ತಿರುವ ರೋಬೊ

ಮುಕ್ತ ಅವಕಾಶ

ವಸ್ತು ಸಂಗ್ರಹಾಲಯ ಹಾಗೂ ಅನುಭವ ಕೇಂದ್ರದ ವೀಕ್ಷಣೆಗೆ ಸಾರ್ವಜನಿಕರಿಗೆ ಮುಕ್ತ ಪ್ರವೇಶ ಇದೆ. ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಅವಕಾಶ ಇದೆ. ವಿದ್ಯಾರ್ಥಿಗಳು ಹಾಗೂ ಸಂಶೋಧಕರು, ಆಸಕ್ತರು ಸಂಚಾರ ನಿಯಮಗಳ ಕುರಿತು ತಿಳಿದುಕೊಳ್ಳಲು ಇಲ್ಲಿಗೆ ಭೇಟಿ ನೀಡಬಹುದಾಗಿದೆ. ಕೇಂದ್ರಕ್ಕೆ ಬಂದವರನ್ನು ಆತ್ಮೀಯವಾಗಿ ಸ್ವಾಗತಿಸುವ ಸಿಬ್ಬಂದಿ, ಬೇಕಾದ ಮಾಹಿತಿಯನ್ನೂ ಒದಗಿಸುತ್ತಾರೆ. ಅಲ್ಲಲ್ಲಿ ಧ್ವನಿಮುದ್ರಿತ ವ್ಯವಸ್ಥೆಯೂ ಇದೆ. ಅಲ್ಲಿಯೂ ಮಾಹಿತಿ ತಿಳಿದುಕೊಳ್ಳಬಹುದಾಗಿದೆ.

ಗತವೈಭವ...

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ ಗ್ರಂಥಾಲಯದಿಂದ ಹಲವು ಚಿತ್ರಗಳನ್ನು ಪಡೆದುಕೊಂಡಿರುವ ಪೊಲೀಸ್ ಇಲಾಖೆ, ಆ ಚಿತ್ರಗಳನ್ನೂ ಸಂಗ್ರಹಾಲಯದಲ್ಲಿ ಇರಿಸಿದೆ. ಈ ಚಿತ್ರಗಳು ನಗರದ ಗತವೈಭವವನ್ನು ಸಾರುತ್ತಿವೆ.



ಬೆಂಗಳೂರು ವೇಗವಾಗಿ ಬೆಳೆಯುತ್ತಿರುವ ನಗರ. ಹಾಗಾಗಿ, ನಗರದ ಅಗತ್ಯಗಳಿಗೆ ಅನುಗುಣವಾಗಿ ಸಂಚಾರ ವಿಭಾಗದ ಪೊಲೀಸರು, ತಂತ್ರಜ್ಞಾನ ಉಪಯೋಗಿಸಿಕೊಂಡು ಸುಧಾರಣೆ ತರುತ್ತಿದ್ದಾರೆ

ಬಿ.ದಯಾನಂದ
ನಗರ ಪೊಲೀಸ್ ಕಮಿಷನರ್



ಸಂಚಾರ ಪೊಲೀಸರ ಕಾರ್ಯ ನಿರ್ವಹಣೆಯ ಛಾಯಾಚಿತ್ರಗಳನ್ನು ವೀಕ್ಷಿಸುವ ಜತೆಗೇ ಅವರ ಕಥೆಗಳು ಹಾಗೂ ಸಾಹಸವನ್ನೂ ಕೇಂದ್ರದಲ್ಲಿ ಕಣ್ತುಂಬಿಕೊಳ್ಳಬಹುದಾಗಿದೆ

ಎಂ.ಎನ್‌.ಅನುಚೇತ್, ಜಂಟಿ ಪೊಲೀಸ್ ಕಮಿಷನರ್, ಸಂಚಾರ ವಿಭಾಗ

ತಿಮ್ಮಯ್ಯ ಅವರ ನೆನಪು

1995ರಲ್ಲಿ ಮೀಸೆ ತಿಮ್ಮಯ್ಯ ಅವರು ಸಿಗ್ನಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಮಹಿಳೆ ಹಾಗೂ ಅವರ ಪುತ್ರನನ್ನು ಅಪಘಾತದಿಂದ ಪಾರು ಮಾಡಿದ್ದರು. ಇಬ್ಬರನ್ನೂ ರಕ್ಷಿಸಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದರು. ಆ ವೃತ್ತಕ್ಕೆ ಪೊಲೀಸ್ ತಿಮ್ಮಯ್ಯ ವೃತ್ತ (ಜಿ.ಪಿ.ಒ ಸಿಗ್ನಲ್) ಎಂದು ಹೆಸರಿಡಲಾಗಿದೆ. 1990ರಲ್ಲಿ ತಿಮ್ಮಯ್ಯ ಅವರು ಕರ್ತವ್ಯದಲ್ಲಿದ್ದ ಫೋಟೊವನ್ನು ಸಂಗ್ರಹಾಲಯದಲ್ಲಿ ಇಡಲಾಗಿದೆ.

ವಿಧಾನಸೌಧದ ಅಂಗಳದಲ್ಲಿ ಆಯೋಜಿಸಿದ್ದ ನಾಲ್ಕು ದಿನಗಳ 'ಪುಸ್ತಕ ಮೇಳ'ಕ್ಕೆ ತೆರೆ

ಮಳಿಗೆಗೆ ಶಾಸಕರು ಬರಲಿಲ್ಲ, ಪುಸ್ತಕ ಖರೀದಿಸಲಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವ ಶಾಸಕರೂ ₹2 ಲಕ್ಷ ಮೊತ್ತದ ಪುಸ್ತಕಗಳನ್ನು ಖರೀದಿಸಲಿಲ್ಲ. ಪ್ರಕಾಶಕರಿಂದ ಪುಸ್ತಕಗಳ ಪಟ್ಟಿ ಪಡೆದು ಬೇಡಿಕೆಯನ್ನೂ ಸಲ್ಲಿಸಲಿಲ್ಲ. ಕನಿಷ್ಠ ಪುಸ್ತಕದ ಮಳಿಗೆಗಳತ್ತಲೂ ಸುಳಿಯಲಿಲ್ಲ..!

ವಿಧಾನಸೌಧದ ಅಂಗಳದಲ್ಲಿ ಮೊದಲ ಬಾರಿಗೆ ಕರ್ನಾಟಕ ವಿಧಾನಸಭೆ ಸಚಿವಾಲಯ ಆಯೋಜಿಸಿದ್ದ 'ಪುಸ್ತಕ ಮೇಳ'ದ ಅಂತಿಮ ದಿನವಾದ ಸೋಮವಾರದಂದು ನಡೆದ ಬೆಳವಣಿಗೆಗಳಿವು.

ಮೇಳ ಆರಂಭಕ್ಕೂ ಮುನ್ನ ಸಭಾಧ್ಯಕ್ಷ ಯು.ಟಿ.ಖಾದರ್ ಅವರು, ಪುಸ್ತಕ ಮೇಳದಲ್ಲಿ ಪ್ರತಿ ಶಾಸಕರು ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ₹2 ಲಕ್ಷ ಮೊತ್ತದ ಪುಸ್ತಕ ಖರೀದಿಸಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದರು.

ಪ್ರಕಾಶಕರು ಇದೇ ನಿರೀಕ್ಷೆಯಲ್ಲಿದ್ದರು. ಅವರ ನಿರೀಕ್ಷೆ ಪೂರ್ಣ ಈಡೇರಲಿಲ್ಲ.

ಮಧ್ಯಾಹ್ನ 3ರವರೆಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಸತೀಶ್ ರೆಡ್ಡಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಎಚ್‌.ಸಿ.ಬಾಲಕೃಷ್ಣ ಸೇರಿದಂತೆ ಕೆಲವರಷ್ಟೇ ಆಯ್ದ ಮಳಿಗೆಗಳಿಗೆ ಭೇಟಿ ನೀಡಿ ಪುಸ್ತಕ ಖರೀದಿಸಿದರು.

'ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಪ್ರಕಾಶನಗಳಿಂದ ಬೆಲೆ ಸಹಿತ ಪುಸ್ತಕಗಳ ಪಟ್ಟಿ ತರಿಸಿಕೊಂಡಿದ್ದಾರೆ. ಒಂದಿಬ್ಬರು ಶಾಸಕರು ವೈಯಕ್ತಿಕ ಆಸಕ್ತಿಯಿಂದಾಗಿ ಒಂದಷ್ಟು ಪುಸ್ತಕ ಖರೀದಿಸಿದ್ದಾರೆ' ಎಂದು ಪ್ರಕಾಶಕರೊಬ್ಬರು ಶಾಸಕರು ಖರೀದಿಸಿದ ಪುಸ್ತಕಗಳ ಪಟ್ಟಿಯನ್ನು ತೋರಿಸಿದರು.

'ಪುಸ್ತಕ ಖರೀದಿಗೆ ಪ್ರತ್ಯೇಕ ಅನುದಾನವಿಲ್ಲವಂತೆ. ಈಗಾಗಲೇ ಬಿಡುಗಡೆಯಾಗಿರುವ ಹಣ ಖರ್ಚಾಗಿದೆ. ಹಾಗಾಗಿ ಶಾಸಕರು ಪುಸ್ತಕ ಖರೀದಿಸಿಲ್ಲವಂತೆ' ಎಂದು ಮತ್ತೊಬ್ಬ ಪ್ರಕಾಶಕರು ಹೇಳಿದರು.

ನಮ್ಮೂರಿಗೂ ಪುಸ್ತಕ ಮೇಳ ಬರಲಿ



ಹೈಕೋರ್ಟ್‌ನಲ್ಲಿ ಕೆಲಸವಿತ್ತು. ವಿರಾಮದ ನಡುವೆ ಪುಸ್ತಕ ಮೇಳಕ್ಕೆ ಭೇಟಿ ನೀಡಿದೆ. ರಾಜ್ಯದಲ್ಲಿ ಎಷ್ಟೊಂದು ಪ್ರಕಾಶನ ಸಂಸ್ಥೆಗಳಿವೆ ಎಂದು ಆಶ್ಚರ್ಯವಾಯಿತು. ನಮ್ಮ ಜಿಲ್ಲೆಗಳಲ್ಲೂ ಇಂಥ ಮೇಳ ಆಯೋಜಿಸಬೇಕು. ಪುಸ್ತಕಗಳ ಓದು, ಅಲ್ಲಿಗೂ ತಲುಪಬೇಕು.

ಎಚ್‌.ಕೆ.ಎಸ್‌.ಸ್ವಾಮಿ, ಪರಿಸರ ಕಾರ್ಯಕರ್ತ, ಚಿತ್ರದುರ್ಗ

ಬೀದರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ನಂತರ ಪುಸ್ತಕ ಮೇಳಕ್ಕೆ ಭೇಟಿ ನೀಡುವ, ಪುಸ್ತಕ ಖರೀದಿಸುವ ಅವಕಾಶ ಈಗ ಸಿಕ್ಕಿದೆ. ಪುಸ್ತಕಗಳು ವಿಶೇಷ ರಿಯಾಯಿತಿಯಲ್ಲಿ ಸಿಗುತ್ತಿರುವುದು ಖುಷಿಯ ವಿಷಯ. ನಮ್ಮೂರು ಬೀದರ್ ಸೇರಿದಂತೆ ಎಲ್ಲ ಜಿಲ್ಲೆಗಳಲ್ಲೂ ಇಂತಹ ಪುಸ್ತಕ ಮೇಳಗಳು ನಡೆದರೆ ಓದುಗರಿಗೆ ಈ ಹಬ್ಬದ ಸಂಭ್ರಮ ದೊರೆತಂತಾಗುತ್ತದೆ.



ಅರ್ಚನಾ ರಘುನಾಥ್, ಹುಮ್ನಾಬಾದ್, ಬೀದರ್



ಇಂಟರ್‌ನೆಟ್‌ನಲ್ಲಿ ಮುಳುಗಿ ಹೋದ ಜನರನ್ನು ಪುಸ್ತಕಗಳೆಡೆಗೆ ಈ ಮೇಳ ಸೆಳೆದಿದೆ. ಈ ನಿಟ್ಟಿನಲ್ಲಿ ಇದು ಯಶಸ್ವಿ ಮೇಳ. ಕನ್ನಡದಲ್ಲಿ ಎಷ್ಟೆಲ್ಲ ಪುಸ್ತಕಗಳಿವೆ, ಲೇಖಕರಿದ್ದಾರೆ ಎನ್ನುವುದನ್ನು ಮೇಳ ಪರಿಚಯಿಸಿದೆ. ಪುಸ್ತಕಗಳನ್ನು ಓದಲು ಮೇಳ ಪ್ರೇರಣೆ ನೀಡಿದೆ. ಇಂತಹ ಪ್ರೇರಣೆ ನಮ್ಮೂರಿನ ಜನರಿಗೂ ಸಿಕ್ಕರೆ ಚೆನ್ನ.

ಶಾಲಿನಿ ಸರೋದೇ, ರಾಯಚೂರು

ನಾಲ್ಕನೇ ದಿನವೂ ಪ್ರವೇಶ

ಮೇಳದ ನಾಲ್ಕನೇ ದಿನವೂ ವಿಧಾನಸೌಧ ಆವರಣ ಪ್ರವೇಶಿಸಲು ಸಾರ್ವಜನಿಕರಿಗೆ ಅವಕಾಶ ನೀಡಲಾಗಿತ್ತು. ಹೀಗಾಗಿ ಬೆಳಿಗ್ಗೆ 10ರಿಂದಲೇ ಪ್ರವೇಶ ದ್ವಾರದಲ್ಲಿ ಜನರು ಸಾಲುಗಟ್ಟಿ ನಿಂತಿದ್ದರು.

ಮೇಳಕ್ಕೆ ಬಂದವರು, ವಿಧಾನಸೌಧದ ಒಳಾಂಗಣ ಪ್ರವೇಶಕ್ಕೆ ಪೊಲೀಸರ ಅನುಮತಿ ಕೇಳುತ್ತಿದ್ದರು. ಆದರೆ, ಅವರು ನಿರಾಕರಿಸುತ್ತಿದ್ದರು. ನಿರಾಸೆಯೊಂದಿಗೆ ಮುಖ್ಯದ್ವಾರದ ಎದುರು ನಿಂತು ಗೇಟ್ ಸಂದಿಯಲ್ಲೇ ಒಳಗಿನ ಚಟುವಟಿಕೆಗಳನ್ನು ವೀಕ್ಷಿಸಿ ಸಂಭ್ರಮಿಸುತ್ತಿದ್ದರು. ವಿಧಾನಸೌಧದ ಮೆಟ್ಟಿಲುಗಳೆಲ್ಲ 'ಸೆಲ್ಫಿ', ಫೋಟೊ ಕ್ಲಿಕ್ಕಿಸುವ ತಾಣ'ಗಳಾಗಿದ್ದವು.

ಮಳಿಗೆಗಳಲ್ಲಿ ಪುಸ್ತಕ ಖರೀದಿಸುವವರ ಸಂಖ್ಯೆ ಕಡಿಮೆ ಇತ್ತು. ಶಾಲಾ–ಕಾಲೇಜು ವಿದ್ಯಾರ್ಥಿಗಳು ಪುಸ್ತಕ ಖರೀದಿಗೆ ಹೆಚ್ಚು ಆಸಕ್ತಿ ತೋರಿಸುತ್ತಿದ್ದರು. ಬೇರೆ ಬೇರೆ ಊರುಗಳಿಂದ ವಿಧಾನಸೌಧ, ಹೈಕೋರ್ಟ್, ಮತ್ತಿತರ ಕಚೇರಿ ಕೆಲಸಕ್ಕಾಗಿ ಬಂದವರೂ 'ಪುಸ್ತಕ ಮೇಳ'ಕ್ಕೆ ಭೇಟಿ ನೀಡಿ ಸಂಭ್ರಮಿಸಿದರು.



ಶಾಸಕರಾದ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌.ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತಿತರರು ಪುಸ್ತಕ ಮಳಿಗೆಯೊಂದಕ್ಕೆ ಭೇಟಿ ನೀಡಿದರು ಪ್ರಜಾವಾಣಿ ಚಿತ್ರ

'ಅನುಮಾನ ಕಳೆಯಲಿ, ಪ್ರೀತಿಯ ನಂಟು ಬೆಳೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ, ಧರ್ಮಗಳ ಹೆಸರಿನಲ್ಲಿ ಮನುಷ್ಯ ಮನುಷ್ಯರು ಪರಸ್ಪರ ಅನುಮಾನದಿಂದ ನೋಡುವುದು, ಕೀಳಾಗಿ ಭಾವಿಸುವುದು ಕಳೆಯಬೇಕು. ಶಾಂತಿಯ, ಪ್ರೀತಿಯ ನಂಟು ಬೆಳೆಯಬೇಕು' ಎಂದು ಸಾಹಿತಿ ಬಾನು ಮುಷ್ತಾಕ್ ಆಶಿಸಿದರು.

ಕರ್ನಾಟಕ ವಿಧಾನಸಭೆ ಸಚಿವಾಲಯ ಆಯೋಜಿಸಿದ್ದ 'ಪುಸ್ತಕ ಮೇಳ'ದ ಪ್ರಯುಕ್ತ ಭಾನುವಾರ ನಡೆದ 'ಕನ್ನಡ ಸಾಹಿತ್ಯದಲ್ಲಿ ಸರ್ವ ಸಮಭಾವದ ಚಿಂತನೆಗಳು' ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಾಹಿತ್ಯ ರಕ್ತಪಾತ ಉಂಟು ಮಾಡುವುದಿಲ್ಲ. ದ್ವೇಷ, ಅಸೂಯೆ, ಹಿಂಸೆ, ನೋವು, ರಕ್ತಪಾತ ಎಲ್ಲವೂ ಜನರ ಮೇಲಾಟದಿಂದ, ಪ್ರಭುತ್ವದ ಸಂಚು–ಒಳ ಸಂಚುಗಳಿಂದ ಮತ್ತು ಅಧಿಕಾರ ಕೇಂದ್ರಿತ ರಾಜಕಾರಣದಿಂದ ಆಗುತ್ತದೆ ಎಂದು ಹೇಳಿದರು.

ಜನರ ನೋವುಗಳಿಗೆ ಮುಲಾಮು ಹಚ್ಚುವ ಕೆಲಸವನ್ನು ಸಾಹಿತ್ಯ ಮಾಡುತ್ತದೆ. ಪ್ರಭುತ್ವದ ಕೇಂದ್ರವಾದ ವಿಧಾನಸೌಧ ಆವರಣವನ್ನು ಜನರ ಒಡನಾಟಕ್ಕೆ ಮುಕ್ತಗೊಳಿಸುವುದು ಕೂಡ ಸಾಹಿತ್ಯದ ಪ್ರಕ್ರಿಯೆ ಎಂದು ಪ್ರತಿಪಾದಿಸಿದರು.

'ಬುಕರ್ ಪ್ರಶಸ್ತಿ ಆರಂಭವಾದಲ್ಲಿಂದ ಇಲ್ಲಿವರೆಗೆ ಕನ್ನಡದ ಕೃತಿಗಳು ಆಯ್ಕೆಯ ಪಟ್ಟಿಗೇ ಹೋಗಿರಲಿಲ್ಲ. ಇದೇ ಮೊದಲ ಬಾರಿಗೆ ನನ್ನ ಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ 'ಹಾರ್ಟ್ ಲ್ಯಾಂಪ್' ಕೃತಿ ಬುಕರ್ ಪಟ್ಟಿಯಲ್ಲಿ ಕಾಣಿಸಿಕೊಂಡಿದೆ. ಪಟ್ಟಿಯಲ್ಲಿದೆ ಎಂದು ಗೊತ್ತಾದಾಗ ಎಲ್ಲರೂ ಇದು ನಮಗೆ ಸಂದ ಗೌರವ ಎಂದು ಹೇಳಿಕೊಂಡರಲ್ಲ. ಅದುವೇ ಕನ್ನಡದ ಪ್ರೀತಿ. ಒಳಗೊಳ್ಳುವಿಕೆಯೇ ನಿಜವಾದ ಸಾಹಿತ್ಯ' ಎಂದು ಪ್ರತಿಪಾದಿಸಿದರರು.

ಬರಹಗಾರ ಡಿ. ಡೊಮಿನಿಕ್ ಮಾತನಾಡಿ, 'ಕನ್ನಡ ಲಿಪಿಯು ಅಹಿಂಸೆಯ ಭಾಗವಾಗಿ ಹುಟ್ಟಿಕೊಂಡಿದೆ. ಸಾಮ್ರಾಟ ಅಶೋಕ ಮೊದಲ ಬಾರಿ ಪಾಳಿ ಲಿಪಿಯಲ್ಲಿ ಶಾಸನಗಳನ್ನು ಬರೆಸಿದ. ಇಲ್ಲಿ ಮೊದಲು ಪಾಳಿ, ಪ್ರಾಕೃತ ಲಿಪಿಗಳು ಬಂದು ಆನಂತರ ಕನ್ನಡ ಲಿಪಿಗಳಾದವು. ಕನ್ನಡದ ಮೊದಲ ಶಾಸನ ಎಂದು ಕರೆಯುವ ಹಲ್ಮಿಡಿ ಶಾಸನವು ಸಂಸ್ಕೃತ ಭಾಷೆಯಲ್ಲಿದ್ದರೂ ಕನ್ನಡ ಲಿಪಿಯಲ್ಲಿದೆ' ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಉಪಸ್ಥಿತರಿದ್ದರು.



ವಿಧಾನಸಭೆ ಸಚಿವಾಲಯ ಆಯೋಜಿಸಿದ್ದ 'ಪುಸ್ತಕ ಮೇಳ'ದ ಪ್ರಯುಕ್ತ ಭಾನುವಾರ ನಡೆದ 'ಕನ್ನಡ ಸಾಹಿತ್ಯದಲ್ಲಿ ಸರ್ವ ಸಮಭಾವದ ಚಿಂತನೆಗಳು' ಗೋಷ್ಠಿಯಲ್ಲಿ ಸಾಹಿತಿ ಬಾನು ಮುಷ್ತಾಕ್ ಮಾತನಾಡಿದರು. ಮಹೇಶ ಜೋಶಿ ಮತ್ತು ಬರಹಗಾರ ಡಿ.ಡೊಮಿನಿಕ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

14ಕ್ಕೆ ಮಹಾರಥೋತ್ಸವ, ಸ್ವಾಮೀಜಿ ಅಡ್ಡಪಲ್ಲಕ್ಕಿ ಉತ್ಸವ

7ರಿಂದ ಆದಿಚುಂಚನಗಿರಿ ಜಾತ್ರೆ


ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಪ್ರಸಿದ್ಧ ಆದಿಚುಂಚನಗಿರಿ ಕ್ಷೇತ್ರದಲ್ಲಿ ಮಾ.7ರಿಂದ 15ರವರೆಗೆ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ನಡೆಯಲಿದ್ದು, 9 ದಿನಗಳವರೆಗೆ ವಿವಿಧ ಧಾರ್ಮಿಕ ಮತ್ತು ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

7ರಂದು ಬೆಳಿಗ್ಗೆ 6.30ಕ್ಕೆ ಗಂಗಾಧರೇಶ್ವರಸ್ವಾಮಿ ದೇವಾಲಯದಲ್ಲಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿಯವರು ಮಹಾಪೂಜೆ, ಧರ್ಮಧ್ವಜ ಸ್ಥಾಪನೆ ಮೂಲಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ಮೊದಲ ದಿವಸ ವಿವಿಧ ಬಗೆಯ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಾಂದಿ ಪೂಜೆ ನಡೆಯಲಿದ್ದು, ಬೆಳಿಗ್ಗೆ 10ರ ನಂತರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಭಾ ಕಾರ್ಯಕ್ರಮಗಳು ಜರುಗಲಿವೆ. 8ರಂದು ಸಂಜೆ 6ಕ್ಕೆ ಸರ್ವಾಲಂಕೃತ, ಚಂದ್ರಮೌಳೀಶ್ವರಸ್ವಾಮಿ ಉತ್ಸವ , 9ರಂದು ಸಂಜೆ 6ಕ್ಕೆ ಮಲ್ಲೇಶ್ವರಸ್ವಾಮಿ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ.

10ರಂದು ಬೆಳಿಗ್ಗೆ 9.30ಕ್ಕೆ ಸರಳ ಸಾಮೂಹಿಕ ವಿವಾಹ ಮತ್ತು ಹಿರಿಯ ದಂಪತಿಗೆ ಸನ್ಮಾನ ಸಮಾರಂಭ ನಡೆಯಲಿದೆ. ಸಂಜೆ 6ರಿಂದ ಸಿದ್ದೇಶ್ವರಸ್ವಾಮಿ ಉತ್ಸವವು ಸಂಭ್ರಮದಿಂದ ಜರುಗಲಿದೆ. 11ರಂದು ಬೆಳಿಗ್ಗೆ 7.30ಕ್ಕೆ ಕಾಲಭೈರವೇಶ್ವರಸ್ವಾಮಿಗೆ ಸುವರ್ಣ ಕವಚ ಅಲಂಕಾರ ಮತ್ತು ಗಂಗಾಧರೇಶ್ವರಸ್ವಾಮಿಗೆ ರಜತ ನಾಗಾಭರಣ ಅಲಂಕಾರದೊಂದಿಗೆ ಪೂಜಾ ಕಾರ್ಯಕ್ರಮ ನಡೆಯಲಿದೆ.



ಸಂಜೆ 6ಕ್ಕೆ ಕಾಲಭೈರವೇಶ್ವರ ಸ್ವಾಮಿಯ ಹೂವಿನ ಪಲಕ್ಕಿ ಉತ್ಸವ, ನಿರ್ಮಲಾನಂದನಾಥ ಸ್ವಾಮೀಜಿ ಅವರ ಮುತ್ತಿನ ಪಲಕ್ಕಿ ಉತ್ಸವಗಳು ಸಂಭ್ರಮದಿಂದ ಜರುಗಲಿವೆ.

12ರಂದು ಸಂಜೆ 6ಕ್ಕೆ ಜ್ವಾಲಾ ಪೀಠಾರೋಹಣ ಮತ್ತು ಸಿದ್ಧಸಿಂಹಾಸನ ಪೂಜೆ, ರಾತ್ರಿ 8ಕ್ಕೆ ಚಂದ್ರಮಂಡಲೋತ್ಸವ ನಡೆಯಲಿದೆ. 13ರಂದು ಸಂಜೆ 6.30ಕ್ಕೆ ಸರ್ವಧರ್ಮ ಸಮ್ಮೇಳನ, ರಾತ್ರಿ 8ಕ್ಕೆ ಕಾಲಭೈರವೇಶ್ವರಸ್ವಾಮಿ ತಿರುಗಣಿ ಉತ್ಸವ ಮತ್ತು ರಾತ್ರಿ 9ಕ್ಕೆ ಕಾಲಭೈರವೇಶ್ವರಸ್ವಾಮಿ ಪುಷ್ಕರಣಿಯಲ್ಲಿ ತೆಪ್ಪೋತ್ಸವ, 9.30ಕ್ಕೆ ಪೌರಾಣಿಕ ನಾಟಕ ನಡೆಯಲಿದೆ.

14ರಂದು ಗಂಗಾಧರೇಶ್ವರ ಸ್ವಾಮಿ ಮಹಾರಥೋತ್ಸವ: ಜಾತ್ರೆಯ ಕೇಂದ್ರ ಬಿಂದು, ಗಂಗಾಧರೇಶ್ವರ ಸ್ವಾಮಿ ಮಹಾರಥೋತ್ಸವವು 14ರಂದು ಮುಂಜಾನೆ 4ರಂದು ವಿಜೃಂಭಣೆಯಿಂದ ಜರುಗಲಿದೆ. ನಿರ್ಮಲಾನಂದನಾಥ ಸ್ವಾಮೀಜಿಯವರ ಅಡ್ಡಪಲ್ಲಕ್ಕಿ ಉತ್ಸವವೂ ನೆರವೇರಲಿದೆ. ನಂತರ ಸಂಜೆ 6ಗಂಟೆಗೆ ನೂರಾರು ಗ್ರಾಮ ದೇವರುಗಳ ಮೆರವಣಿಗೆಯ ಮೂಲಕ ಗಿರಿಪ್ರದಕ್ಷಿಣೆ ನಡೆಯಲಿದೆ. ಸರ್ವಾಲಂಕೃತ ಸೋಮೇಶ್ವರಸ್ವಾಮಿ ಉತ್ಸವ ಜರುಗಲಿದೆ.

'15ರಂದು ಬೆಳಿಗ್ಗೆ 9ಕ್ಕೆ ಧರ್ಮ ಧ್ವಜಾರೋಹಣ ಮತ್ತು ಬಿಂದು ಸರೋವರದಲ್ಲಿ ಅವಭೃತ ಸ್ನಾನ ಮತ್ತು ಮಹಾಭಿಷೇಕ ಹಾಗೂ ಸಭೆ ಕಾರ್ಯಕ್ರಮದೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ. ಭಕ್ತರಿಗೆ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ' ಎಂದು ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ತಿಳಿಸಿದ್ದಾರೆ.

ಮೆಟ್ರೊ ಹಂತ-2 ಎ,ಬಿ, ಹಂತ-3

ಮೆಟ್ರೊ: ವಿವಿಧ ಕಾಮಗಾರಿ 2029ಕ್ಕೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಯೋಜನೆಯ ಈಗ ಚಾಲ್ತಿಯಲ್ಲಿರುವ ವಿವಿಧ ಮಾರ್ಗಗಳ ಕಾಮಗಾರಿಗಳನ್ನು 2029ರ ಡಿಸೆಂಬರ್‌ನಲ್ಲಿ ಪೂರ್ಣಗೊಳಿಸಲಾಗುವುದು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಹೇಳಿದರು.

ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರು.

ಮೆಟ್ರೊ ಯೋಜನೆಯ ಹಂತ-2 ಎ ರಲ್ಲಿ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೃಷ್ಣರಾಜಪುರದವರೆಗೆ 19.75 ಕಿ.ಮೀ ಮತ್ತು ಹಂತ-2 ಬಿ ರಲ್ಲಿ ಕೃಷ್ಣರಾಜಪುರದಿಂದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ 38.44 ಕಿ.ಮೀ ಕಾಮಗಾರಿ ನಡೆಯುತ್ತಿದ್ದು, ಒಟ್ಟು ₹14,788 ಕೋಟಿ ವೆಚ್ಚದ ಕಾಮಗಾರಿಗಳು ಚಾಲ್ತಿಯಲ್ಲಿವೆ ಎಂದರು.

ಅದೇ ರೀತಿ, ಹಂತ-3 ಕಾರಿಡಾರ್ 1- ಕೆಂಪಾಪುರದಿಂದ ಜೆ.ಪಿ.ನಗರ 4 ನೇ ಹಂತದವರೆಗೆ 32.15 ಕಿ.ಮೀ ಮತ್ತು ಕಾರಿಡಾರ್ 2- ಹೊಸಹಳ್ಳಿಯಿಂದ ಕಡಬಗೆರೆವರೆಗಿನ 12.50 ಕಿ.ಮೀ, ಒಟ್ಟು 44.65 ಕಿ.ಮೀ ಉದ್ದದ ₹15,611 ಕೋಟಿ ಅಂದಾಜು ವೆಚ್ಚದ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಗಳನ್ನು ಡಿಸೆಂಬರ್ 29 ರೊಳಗೆ ಪೂರ್ಣಗೊಳಿಸಲಾಗುವುದು ಎಂದು ರಾಜ್ಯಪಾಲರು ತಿಳಿಸಿದರು.

ಅಲ್ಲದೇ, ಬಿಬಿಎಂಪಿ ವ್ಯಾಪ್ತಿಯಲ್ಲಿ ವಾಹನ ದಟ್ಟಣೆ ತಗ್ಗಿಸುವ ಉದ್ದೇಶದಿಂದ ಡಬಲ್ ಡೆಕರ್ ಮಾದರಿಯಲ್ಲಿ ಮೆಟ್ರೊ ಮತ್ತು ರಸ್ತೆ ಮೇಲ್ಸೇತುವೆ ನಿರ್ಮಿಸಲು ಉದ್ದೇಶಿಸಲಾಗಿದೆ. ಸುಮಾರು 40.50 ಕಿ.ಮೀ ಸಂಯುಕ್ತ ಮೆಟ್ರೊ ರಸ್ತೆ ಮೇಲ್ಸೇತುವೆ ಯೋಜನೆಯನ್ನು ₹8,916 ಕೋಟಿಗಳಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.

ಪೆರಿಫೆರಲ್ ರಿಂಗ್ ರಸ್ತೆ: ಪೆರಿಫೆರಲ್ ರಿಂಗ್ ರಸ್ತೆ ಭಾಗ–1 ರ ಯೋಜನೆಯನ್ನು ಕೈಗೊಳ್ಳಲು ಅಗತ್ಯವಿರುವ ₹27,000 ಕೋಟಿಯನ್ನು ಹುಡ್ಕೋ ಸಂಸ್ಥೆಯಿಂದ ಸಾಲದ ರೂಪದಲ್ಲಿ ಪಡೆಯಲು ನಿರ್ಧರಿಸಲಾಗಿದೆ. ಈ ಸಾಲಕ್ಕೆ ಸರ್ಕಾರ ಭದ್ರತೆ ನೀಡಲಿದೆ ಎಂದರು.

ಯೋಜನೆ ಕಾರ್ಯಗತಗೊಳಿಸಲು 2,565 ಎಕರೆ ಭೂ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಕೈಗೊಳ್ಳಲು ಉದ್ದೇಶಿಸಲಾಗಿದೆ. ಸುಮಾರು 73 ಕಿ.ಮೀ ರಸ್ತೆ ನಿರ್ಮಾಣ ಮಾಡಲಾಗುವುದು ಎಂದರು.

34 ಸ್ಥಳಗಳಲ್ಲಿ ವಸತಿ ಸಮುಚ್ಚಯ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಗರದಾದ್ಯಂತ 34 ಸ್ಥಳಗಳಲ್ಲಿ ವಸತಿ ಸಮುಚ್ಚಯ ನಿರ್ಮಿಸಿ ಸುಮಾರು 30,000 ಫ್ಲಾಟ್‌ಗಳನ್ನು ಹಂಚುವ ಗುರಿ ಹಮ್ಮಿಕೊಂಡಿದೆ. ಈ ಪೈಕಿ ಈವರೆಗೆ 25 ಯೋಜನೆಗಳಲ್ಲಿ ಒಟ್ಟು 14,909 ಫ್ಲಾಟ್‌ಗಳ ನಿರ್ಮಾಣ ಕಾರ್ಯಕೈಗೊಂಡಿದ್ದು, 10,615 ಫ್ಲಾಟ್‌ಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ ಎಂದು ಹೇಳಿದರು.

ಸಂಚಾರ ನಿರ್ವಹಣೆಗೆ ಎಐ: ನಗರದಲ್ಲಿ ಸುಗಮ ಸಂಚಾರಕ್ಕಾಗಿ ತಂತ್ರಜ್ಞಾನ ಅಳವಡಿಸಿಕೊಳ್ಳುವಲ್ಲಿ ಬೆಂಗಳೂರು ಸಂಚಾರ ಪೊಲೀಸರು ಮುಂಚೂಣಿಯಲ್ಲಿದ್ದಾರೆ. ಸುಸ್ಥಿರ ಸಂಚಾರ ನಿರ್ವಹಣೆಗಾಗಿ ಕೃತಕ ಬುದ್ಧಿಮತ್ತೆ ಆಧಾರಿತ ಡೇಟಾ ಪ್ಲಾಟ್ ಫಾರಂ, ನೈಜ ಸಮಯದಲ್ಲಿ ಡೇಟಾವನ್ನು ಸಂಗ್ರಹಿಸಲು, ವಿಶ್ಲೇಷಿಸಲು ಮತ್ತು ತೆರವುಗೊಳಿಸಲು ಇದನ್ನು ಬಳಸಲಾಗುತ್ತಿದೆ ಎಂದು ಗೆಹಲೋತ್ ಹೇಳಿದರು.

ಕುಡಿಯುವ ನೀರು ಪೂರೈಕೆಗೆ ಡಿಪಿಆರ್

ಬೆಂಗಳೂರು ನಗರ ಮತ್ತು ಉಪನಗರಗಳಿಗೆ ಹೆಚ್ಚುವರಿ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು 6 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿದ್ದು, ಈ ಯೋಜನೆ ಕೈಗೆತ್ತಿಕೊಳ್ಳಲು ₹6,939 ಕೋಟಿ ವೆಚ್ಚದಲ್ಲಿ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗಿದೆ ಎಂದು ರಾಜ್ಯಪಾಲ ಗೆಹಲೋತ್ ಹೇಳಿದರು.

ಕಾವೇರಿ 5 ನೇ ಹಂತ ಪೂರ್ಣಗೊಂಡಿದ್ದು, 775 ದಶಲಕ್ಷ ಲೀಟರ್ ಹೆಚ್ಚುವರಿಯಾಗಿ ಬಿಬಿಎಂಪಿಗೆ ಸೇರ್ಪಡೆಯಾಗಿರುವ 110 ಹಳ್ಳಿಗಳ 50 ಲಕ್ಷ ಜನರಿಗೆ ಕಾವೇರಿ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಯನ್ನು ಜಾರಿಗೊಳಿಸಿದೆ ಎಂದರು.




ಮಾತಿಗೆ ಸಚಿವರಿಂದ ಅಡ್ಡಿ: ಕಡಿವಾಣಕ್ಕೆ ಬಿಜೆಪಿ ಆಗ್ರಹ

ಬೆಂಗಳೂರು: ವಿರೋಧ ಪಕ್ಷದ ಸದಸ್ಯರು ಮಾತನಾಡುವಾಗ ಕೆಲವು ಸಚಿವರು ಎದ್ದು ನಿಂತು ಅಡ್ಡಿಪಡಿಸಿ, ಗದ್ದಲ ಸೃಷ್ಟಿಸುತ್ತಾರೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಬಿಜೆಪಿ ಸದಸ್ಯರು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರನ್ನು ಒತ್ತಾಯಿಸಿದ್ದಾರೆ.

'ಬೆಳಗಾವಿ ಅಧಿವೇಶನವೂ ಸೇರಿ ಕಳೆದ ವರ್ಷ ನಡೆದ ಅಧಿವೇಶನಗಳಲ್ಲಿ ಕೆಲವು ಸಚಿವರು ಉತ್ತರ ನೀಡುವುದಕ್ಕಿಂತ ವಿರೋಧ ಪಕ್ಷಗಳ ಸದಸ್ಯರ ಮಾತಿಗೆ ಅಡ್ಡಿಪಡಿಸುವುದಕ್ಕೆ ಸಮಯ ವ್ಯರ್ಥಮಾಡಿದ್ದರು. ಇದು ಒಳ್ಳೆಯ ಲಕ್ಷಣವಲ್ಲ ಎಂದು ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಮತ್ತು ವಿ.ಸುನಿಲ್‌ಕುಮಾರ್ ಸಭಾಧ್ಯಕ್ಷರಿಗೆ ತಿಳಿಸಿದರು. ಈ ಬಗ್ಗೆ ಗಮನಹರಿಸುವುದಾಗಿ ಸಭಾಧ್ಯಕ್ಷರು ಭರವಸೆ ನೀಡಿದರು' ಎಂದು ಮೂಲಗಳು ಹೇಳಿವೆ.

ಮಹತ್ವದ ಚರ್ಚೆ ನಡೆಯುವಾಗ ವಿಪಕ್ಷಗಳ ಸದಸ್ಯರು ಮಾತನಾಡುವುದನ್ನು ಕ್ಯಾಮೆರಾದಲ್ಲಿ ತೋರಿಸುವುದಿಲ್ಲ. ವಿಡಿಯೊ ನಿರ್ವಹಣೆ ಮಾಡುವವರನ್ನು ಬದಲಾಯಿಸಬೇಕು ಎಂದೂ ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಭಾಧ್ಯಕ್ಷರು ಈ ಬಾರಿ ವಾರ್ತಾ ಇಲಾಖೆಯವರಿಗೇ ನೀಡುವುದಾಗಿ ಭರವಸೆ ನೀಡಿದರು.



ಪರೀಕ್ಷೆ ಒತ್ತಡ ಬೇಡ ಒತ್ತಾಸೆ ಇರಲಿ

ರಘು ವಿ.

ವಿದ್ಯಾರ್ಥಿಗಳು ಪರೀಕ್ಷೆಗೆ ತಯಾರಾಗುತ್ತಿರುವಾಗ ಮನೆಯ ವಾತಾವರಣ ಅವರ ಓದಿಗೆ ಪೂರಕವಾಗಿರತಕ್ಕದ್ದು. ಶಾಂತಿಯುತ, ಸಹಕಾರಪೂರ್ಣ ವಾತಾವರಣವು ವಿದ್ಯಾರ್ಥಿಯ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಪರೀಕ್ಷಾ ಆತಂಕವನ್ನು ಕಡಿಮೆಗೊಳಿಸಿ, ಏಕಾಗ್ರತೆಯನ್ನು ವೃದ್ಧಿಸುತ್ತದೆ. ಮನೆಯೆಂಬುದು ಶಾಂತಿಧಾಮವಾಗಬೇಕು. ಪರೀಕ್ಷಾ ಸಮಯದಲ್ಲಿ ವಾತಾವರಣ ತಿಳಿಯಾಗಿರಬೇಕು. ವಿದ್ಯಾರ್ಥಿಗಳು ಬೇರೆ ಬೇರೆ ಕಾರಣಗಳಿಂದ ಅದಾಗಲೇ ಒತ್ತಡಕ್ಕೆ ಒಳಗಾಗಿರುತ್ತಾರೆ. ನಿರೀಕ್ಷೆಗಳು, ಸಹಪಾಠಿಗಳ ಸ್ಪರ್ಧೆ, ಸೋಲಿನ ಭಯ – ಇವೆಲ್ಲ ಅವರನ್ನು ಕಾಡುತ್ತಿರುತ್ತವೆ. ಈ ಸಂದರ್ಭದಲ್ಲಿ ಮನೆಯವರ ಮನೋಭಾವ ಈ ಒತ್ತಡಗಳನ್ನು ಹೆಚ್ಚಿಸಲೂಬಹುದು ಅಥವಾ ಕಡಿಮೆ ಮಾಡಲೂಬಹುದು. ವ್ಯವಸ್ಥಿತ ಕುಟುಂಬ ಮತ್ತು ಶಾಂತಿಯುತ ಮನೆಯ ವಾತಾವರಣ ವಿದ್ಯಾರ್ಥಿಯ ಏಕಾಗ್ರತೆಯನ್ನು ಹೆಚ್ಚಿಸುತ್ತದೆ ಮತ್ತು ಗ್ರಹಣ ಸಾಮರ್ಥ್ಯವನ್ನು ವೃದ್ಧಿಸುತ್ತದೆ. ಜೊತೆಗೆ ಪರೀಕ್ಷೆಯನ್ನು ಸಮಾಧಾನ ಚಿತ್ತದಿಂದ ಎದುರಿಸುವ ಧೈರ್ಯವನ್ನು ನೀಡುತ್ತದೆ. ಮನೆಯ ಗದ್ದಲಗಳು, ಅಶಾಂತಿಯ ವಾತಾವರಣ, ಕುಟುಂಬದ ಅತಿ ಹೆಚ್ಚಿನ ನಿರೀಕ್ಷೆಗಳು ವಿದ್ಯಾರ್ಥಿಯಲ್ಲಿ ಬೇಸರವನ್ನು ಮತ್ತು ಅಸಹಾಯಕತೆಯನ್ನು ಮೂಡಿಸಿ ಅಧ್ಯಯನದಲ್ಲಿ ಅವನು/ಅವಳು ಏಕಾಗ್ರತೆಯನ್ನು ಕಳೆದುಕೊಳ್ಳುವ ಸಾಧ್ಯತೆಗಳಿವೆ.

ಮಾನಸಿಕ ಒತ್ತಾಸೆ


ಪರೀಕ್ಷೆಯ ಹತ್ತಿರದ ದಿನಗಳಲ್ಲಿ ವಿದ್ಯಾರ್ಥಿಯು ಒತ್ತಡಕ್ಕೆ ಒಳಗಾಗುವ ಸಾಧ್ಯತೆಗಳಿವೆ. ಆ ಸಮಯದಲ್ಲಿ ಅವನು/ಅವಳು ಪೋಷಕರ ಅಥವಾ ಒಡಹುಟ್ಟಿದವರ ಜೊತೆ ಮಾತನಾಡಲು ಬಯಸಬಹುದು. ಆಗ ಅಂತಹ ಮಾತುಕತೆಗೆ ಅವಕಾಶ ನೀಡಬೇಕು. 'ನೀನು ಚೆನ್ನಾಗಿಯೇ ಪರೀಕ್ಷೆಗೆ ತಯಾರಾಗಿದ್ದೀಯ. ನಿನಗೆ ಏನಾದರೂ ಸಹಾಯ ಬೇಕಿದ್ದರೆ ನಾವಿದ್ದೇವೆ' ಎಂಬ ಭರವಸೆಯನ್ನು ಕುಟುಂಬದವರು ನೀಡಬೇಕು.

ಒಟ್ಟಿನಲ್ಲಿ ವಿದ್ಯಾರ್ಥಿಯ ಯಶಸ್ಸು ಕೇವಲ ಆತನ ಕಲಿಕೆಯ ಮೇಲೆ ನಿಂತಿರುವುದಿಲ್ಲ; ಸುತ್ತಲಿನವರ ಒತ್ತಾಸೆ ಮತ್ತು ಮನೆಯ ವಾತಾವರಣವು ಅವನ ಸಾಧನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಕ್ಕಳ ಮನಸ್ಸು ವಿಚಲಿತವಾಗುವುದನ್ನು ತಡೆಯುವ, ಒತ್ತಡವನ್ನು ಕಡಿಮೆ ಮಾಡುವ ಮತ್ತು ಉಲ್ಲಾಸಕರವಾದ ವಾತಾವರಣವನ್ನು ಸೃಷ್ಟಿಸುವ ಜವಾಬ್ದಾರಿ ಇಡೀ ಕುಟುಂಬಕ್ಕೆ ಸೇರಿದ್ದು ಎಂಬುದನ್ನು ಮರೆಯಬಾರದು. ಪರೀಕ್ಷೆ ರಣರಂಗವಲ್ಲ, ಅದು ವ್ಯಕ್ತಿಯ ಸಾಮರ್ಥ್ಯದ ಚಿತ್ತಾರವನ್ನು ಬಿಡಿಸುವ ಮನೋರಂಗ – ಎಂಬುದನ್ನು ಮಕ್ಕಳೂ ಪೋಷಕರೂ ನೆನಪಿನಲ್ಲಿರಿಸಿಕೊಳ್ಳಬೇಕು.

ಜೋರು ದನಿ ಮತ್ತು ಟಿ.ವಿ.

ಟಿ.ವಿ., ಮೊಬೈಲ್ ಫೋನ್ ಸಂಭಾಷಣೆ ಮತ್ತು ಜೋರು ದನಿಯ ಮಾತುಕತೆಗಳು ವಿದ್ಯಾರ್ಥಿಗಳ ಏಕಾಗ್ರತೆಯನ್ನು ಹಾಳುಮಾಡುತ್ತವೆ. ಕೆಲವು ಮನೆಗಳಲ್ಲಿ ಯಾರೇನೇ ಕೆಲಸ ಮಾಡುತ್ತಿದ್ದರೂ ಟಿ.ವಿ. ಜೋರು ದನಿಯಲ್ಲಿ ಮೊಳಗುತ್ತಿರುತ್ತದೆ. ವಾರ್ತೆಗಳು, ಸೀರಿಯಲ್‌ಗಳು, ಕ್ರೀಡಾ ಚಾನೆಲ್‌ಗಳು ಓಡುತ್ತಿರುತ್ತವೆ. ಪರೀಕ್ಷಾ ಸಮಯದಲ್ಲಿ ಹಿರಿಯರು ತಾವೇ ಖುದ್ದಾಗಿ ಇವುಗಳಿಂದ ದೂರ ಉಳಿಯಬೇಕು, ಅಥವಾ ಹೆಡ್‌ಫೋನ್‌ಗಳನ್ನು ಬಳಸಬೇಕು. ವಿದ್ಯಾರ್ಥಿಯೊಬ್ಬ ಕೋಣೆಯಲ್ಲಿ ಓದುತ್ತಿರುವಾಗ ನಡುಮನೆಯಲ್ಲಿ ಜೋರಾಗಿ ಕ್ರಿಕೆಟ್ ಆಟದ ವೀಕ್ಷಣೆ, ಗದ್ದಲ ನಡೆಯುತ್ತಿದ್ದರೆ ಆತ ಓದುವುದಾದರೂ ಹೇಗೆ? ವಿದ್ಯಾರ್ಥಿಯ ಮೇಲೂ ಅತಿ ಒತ್ತಡ ತಾರದೆ ಅವನೂ ಸೇರಿದಂತೆ ದಿನಕ್ಕೆ ಇಂತಿಷ್ಟು ನಿಮಿಷದ ವೀಕ್ಷಣೆ ಎಂಬ ನಿಯಮವನ್ನು ಪಾಲಿಸಬಹುದು. ಇಂದು ಹೇಗಿದ್ದರೂ ರೆಕಾರ್ಡಿಂಗ್ ಸೌಲಭ್ಯವಿದೆ. ತಮಗಿಷ್ಟವಾದ ಎಲ್ಲ ಕಾರ್ಯಕ್ರಮಗಳನ್ನು ರೆಕಾರ್ಡ್ ಮಾಡಿಕೊಂಡು ಪರೀಕ್ಷೆ ಮುಗಿದ ನಂತರ ಎಲ್ಲರೂ ನೋಡಬಹುದು.

ಆರೋಗ್ಯಕರ ಆಹಾರ




ಜಂಕ್‌ಫುಡ್‌ಗಳನ್ನು ಪರೀಕ್ಷಾ ಸಮಯದಲ್ಲಿ ಮಕ್ಕಳು ಸೇವಿಸದಂತೆ ಜಾಗ್ರತೆ ವಹಿಸಬೇಕು. ಮೊದಲೇ ಆತಂಕದಲ್ಲಿರುವ ಕಾರಣ ಹೊಟ್ಟೆಯೂ ಆಮ್ಲವನ್ನು ಉತ್ಪತ್ತಿ ಮಾಡುತ್ತಿರುತ್ತದೆ. ಈ ಸಂದರ್ಭದಲ್ಲಿ ಚಿಪ್ಸ್, ಸಾಫ್ಟ್ ಡ್ರಿಂಕ್ಸ್, ಕರಿದ ಪದಾರ್ಥಗಳು, ಪಿಜ್ಜಾ ಬರ್ಗರ್ ಜಠರಾಮ್ಲವನ್ನು ಹೆಚ್ಚು ಮಾಡುತ್ತವೆ.ಪೌಷ್ಟಿಕ ಆಹಾರ, ಹಣ್ಣು, ಕಾಳುಗಳು ಮತ್ತು ಮನೆಯಲ್ಲೇ ತಯಾರಿಸಿದ ಆಹಾರ ದೇಹದ ಮತ್ತು ಮಾನಸಿಕ ಶಕ್ತಿಯನ್ನು ಹಾಗೂ ಏಕಾಗ್ರತೆಯನ್ನು ಕಾಪಾಡಿಕೊಳ್ಳಲು ನೆರವಾಗುತ್ತವೆ. ಓದುವ ಸಂದರ್ಭದಲ್ಲಿ ಮಕ್ಕಳಿಗೆ ಮಧ್ಯೆ ಮಧ್ಯೆ ಲಘು ಆಹಾರವನ್ನು ಮತ್ತು ಪಾನೀಯವನ್ನು ಕೊಡುವುದು ಒಳ್ಳೆಯದು. ಹಣ್ಣಿನ ರಸ, ಹರ್ಬಲ್ ಟೀ, ಪೌಷ್ಟಿಕಯುಕ್ತ ಲಘು ಆಹಾರ, ಬಾದಾಮಿ ಅಥವಾ ವಾಲ್ನಟ್‌ಗಳನ್ನು ಕೊಡಬಹುದು.

ವಿಶ್ರಾಂತಿ

ಓದುವ ಸಂದರ್ಭದಲ್ಲಿ ಆಗಾಗ ವಿರಾಮ ಪಡೆಯುವುದರಿಂದ ಸ್ಮರಣಶಕ್ತಿ ಗಟ್ಟಿಯಾಗುತ್ತದೆ. ಜೊತೆಗೆ ವಿದ್ಯಾರ್ಥಿಯು ದಿನಕ್ಕೆ ಕನಿಷ್ಠ ಆರರಿಂದ ಎಂಟು ಗಂಟೆಗಳ ಕಾಲ ನಿದ್ರೆ ಮಾಡಬೇಕು. ಮಧ್ಯರಾತ್ರಿಯನ್ನು ಮೀರಿ ಓದುವ ಸಂದರ್ಭಗಳಲ್ಲಿ ಪೋಷಕರು ಮಕ್ಕಳಿಗೆ ವಿಶ್ರಾಂತಿಯನ್ನು ಪಡೆಯಲು ಪ್ರೇರಣೆ ನೀಡಬೇಕು.

ಪರೀಕ್ಷೆ ಬರೆಯುವುದು ಒಬ್ಬರೇ ಆದರೂ ಮನೆಮಂದಿಯೆಲ್ಲ ಆತಂಕ ಪಡುವುದು ಬೇಡ. ಮನೆಯಲ್ಲಿ ಸಹಜವಾದ ತಿಳಿಯಾದ ವಾತಾವರಣ ಇರಲಿ. ಆಗಾಗ ಒಂದು ನಗೆ ಚಟಾಕಿ ಹಾರಿದರೆ ಮತ್ತೂ ಉತ್ತಮ. ಸಂದರ್ಭಾನುಸಾರ ಹಿರಿಯರು ತಾವು ಪರೀಕ್ಷಾ ದಿನಗಳಲ್ಲಿ ಎದುರಿಸಿದ ಕೆಲವು ಸಮಸ್ಯೆಗಳನ್ನು, ನಡೆದ ಕೆಲವು ಹಾಸ್ಯಪ್ರಸಂಗಗಳನ್ನು ಕಿರಿಯರೊಂದಿಗೆ ಹಂಚಿಕೊಂಡು ವಾತಾವರಣವನ್ನು ತಿಳಿಗೊಳಿಸಬಹುದು.



ಒತ್ತಾಸೆಯ ವಾತಾವರಣ


ವಿದ್ಯಾರ್ಥಿಯನ್ನು ಬೈದು, ಹಂಗಿಸಿ ಅಥವಾ ಪದೇಪದೇ ಪರೀಕ್ಷೆಯ ಬಗ್ಗೆ ನೆನಪಿಸಿ ಅವನ ಆತಂಕವನ್ನು ಹೆಚ್ಚಿಸಬಾರದು. ಪೋಷಕರು ಸಮಾಧಾನ ಚಿತ್ತದಿಂದ ಪ್ರೋತ್ಸಾಹದಾಯಕ ಮಾತುಗಳನ್ನು ಆಡುತ್ತ, ಪ್ರಯತ್ನವೇ ಮುಖ್ಯ ಫಲಿತಾಂಶಗಳ ಬಗ್ಗೆ ಹೆಚ್ಚು ಚಿಂತಿಸಬಾರದು ಎಂಬ ಧೋರಣೆಯನ್ನು ತಳೆಯಬೇಕು. ಜೊತೆಗೆ ಅದೇ ಭರವಸೆಯನ್ನು ವಿದ್ಯಾರ್ಥಿಗೆ ನೀಡಬೇಕು.



ಸಂಭ್ರಮ–ಸುರಕ್ಷತೆ

ಪರೀಕ್ಷಾ ದಿನಗಳಲ್ಲಿ ಆದಷ್ಟು ಸಾಮಾಜಿಕ ಸಮಾರಂಭಗಳಿಂದ ಮತ್ತು ತಡರಾತ್ರಿ ತಿರುಗಾಟದಿಂದ ದೂರವಿರಬೇಕು. ಸಾಮಾಜಿಕ ಜೀವನ ಮುಖ್ಯವೂ ಅಗತ್ಯವೂ ಆದುದಾದರೂ ತಡರಾತ್ರಿಯ ಓಡಾಟಗಳು ವಿದ್ಯಾರ್ಥಿಯ ಸಹಜ ದಿನಚರಿಗೆ ತೊಡಕುಂಟು ಮಾಡುತ್ತವೆ. ಕುಟುಂಬದ ಸಮಾರಂಭಗಳನ್ನು ತಾತ್ಕಾಲಿಕವಾಗಿ ಮುಂದೂಡುವುದು ಒಳ್ಳೆಯದು. ಅಕಸ್ಮಾತ್ ಹತ್ತಿರದ ಬಂಧುಗಳ ಮನೆಯಲ್ಲಿ ಏನಾದರೊಂದು ಕಾರ್ಯಕ್ರಮ ಜರುಗಿದರೆ, ಅದರಲ್ಲಿ ಒಂದಿಬ್ಬರು ಹಿರಿಯರು ಭಾಗವಹಿಸಿ ವಿದ್ಯಾರ್ಥಿಗಳನ್ನು ಮನೆಯಲ್ಲಿ ಕ್ಷೇಮವಾಗಿ ಇರಿಸುವುದು ಉತ್ತಮ. ❖

ಜರಾಯು ತಂದ ಜಟಿಲ ಗರ್ಭ



ಡಾ. ಗಣೇಶ್ ಗಂಗೊಳ್ಳಿ

ಯಂತ್ರಯುಗದಲ್ಲಿ ಬದುಕುತ್ತಿರುವ ಮನುಷ್ಯನಿಗೆ ಈಗ ಎಲ್ಲವೂ ತ್ವರಿತವಾಗಿ ಅಗಬೇಕು, ಎಲ್ಲದಕ್ಕೂ ತಕ್ಷಣ ಪರಿಹಾರ ಸಿಗಬೇಕು ಎಂಬ ಹಂಬಲ. ಹೆರಿಗೆಯಲ್ಲಿ 'ಸಿಸೇರಿಯನ್' (Ceasrean section) ಗಣನೀಯವಾಗಿ ಏರಿಕೆ ಕಾಣಲು ಇಂಥ ಧಾವಂತವೂ ಒಂದು ಕಾರಣ. ತಾಯಿ ಮತ್ತು ಶಿಶುವಿನ ಸುರಕ್ಷತೆ, ಆರೋಗ್ಯದ ದೃಷ್ಟಿಯಿಂದ ವೈದ್ಯಕೀಯ ಪದ್ಧತಿಯು ಸಿಸೇರಿಯನ್‌ಗೆ ಒತ್ತು ಕೊಡುತ್ತದೆ. ಆದರೆ ಹೆಚ್ಚಿನವರಿಗೆ ಇದರ 'ರಿಸ್ಕ್ 'ಕುರಿತ ಅರಿವು ಇಲ್ಲ. ಅಂತಹ ಒಂದು ವಿರಳ ಪ್ರಕರಣ, 'ಪ್ಲಾಸೆಂಟಾ ಪರ್ಕ್ರೀಟಾ'.

ಸಹೋದ್ಯೋಗಿ ಅಂದು ಆಸ್ಪತ್ರೆಯಿಂದ ಕರೆ ಮಾಡಿ ತುರ್ತು ಶಸ್ತ್ರಚಿಕಿತ್ಸೆಗೆ ಬರುವಂತೆ ತಿಳಿಸಿದಾಗಲೇ ನಾನು ನಿರ್ಧರಿಸಿದ್ದೆ, ಇದೊಂದು 'ಪ್ಲಾಸೆಂಟಾ ಪರ್ಕ್ರೀಟಾ' ಕೇಸ್ ಎಂದು. 'ಜರಾಯು', 'ಮಾಸುಚೀಲ' ಇತ್ಯಾದಿ ಹೆಸರುಗಳಿಂದ ಕರೆಯಬಹುದಾದ ಪ್ಲಾಸೆಂಟಾ, ಭ್ರೂಣವನ್ನು ಗರ್ಭಾಶಯದ ಭಿತ್ತಿಗೆ ಜೋಡಿಸುವ ಒಂದು ಅಂಗ. ತಾಯಿಗೂ ಭ್ರೂಣಕ್ಕೂ ಇರುವ ಸಂಪರ್ಕಸೇತು – ಎಂದು ಸರಳವಾಗಿ ಇದನ್ನು ಬಣ್ಣಿಸಬಹುದು.

ಪ್ಲಾಸೆಂಟಾ ಪರ್ಕ್ರೀಟಾ ಸಾಮಾನ್ಯವಾಗಿ ಗರ್ಭಾಶಯದ ಭಿತ್ತಿಗೆ (uterine wall) ಅಂಟಿಕೊಂಡಿದ್ದು ಶಿಶುವಿನ ಜನನದ ನಂತರ ಹೊರಬೀಳುತ್ತದೆ. ಅನಂತರದಲ್ಲಿ ಅದೊಂದು ತ್ಯಾಜ್ಯವಷ್ಟೆ!

ಆದರೆ, ಅಂದು ನಾನು ಅಟೆಂಡ್ ಮಾಡಿದ ಪ್ರಕರಣದಲ್ಲಿ ಜರಾಯು ಗರ್ಭಕೋಶವನ್ನು ಭೇದಿಸಿ ಸಮೀಪದ ಅಂಗವಾದ ಮೂತ್ರಕೋಶಕ್ಕೆ ಅಂಟಿಕೊಂಡಿತ್ತು. ಇದು ಅತ್ಯಂತ ವಿರಳ ಹಾಗೂ ಅಪಾಯಕಾರಿ ಗರ್ಭಧಾರಣೆ. ಇಂಥ ಪ್ರಕರಣಗಳಲ್ಲಿ ಶೇ 40ರಿಂದ 50ರಷ್ಟು ಪ್ರತಿಕೂಲ ಪರಿಣಾಮವನ್ನು ಕಂಡರೆ, ಶೇ 7ರಿಂದ 8ರಷ್ಟು ಸಾವು ಕೂಡ ಸಂಭವಿಸುವುದುಂಟು. ಆದ್ದರಿಂದ ವೈದ್ಯರಲ್ಲಿ ಆತಂಕ, ಅಳುಕು ಸಹಜ. ಕೆಲವು ವೈದ್ಯರಿಗೆ ವೃತ್ತಿಜೀವನದಲ್ಲಿ ಒಮ್ಮೆಯೂ ಇಂಥ ಸಂದರ್ಭವನ್ನು ನಿಭಾಯಿಸುವ 'ಸಂದರ್ಭ' ಬರುವುದಿಲ್ಲ. ಹೆಚ್ಚಾಗಿ ಅತ್ಯಾಧುನಿಕ ಸೌಲಭ್ಯಗಳು ಇರುವ ಆಸ್ಪತ್ರೆಗಳಿಗೆ ಇಂಥ ಪ್ರಕರಣಗಳನ್ನು ವರ್ಗಾಯಿಸಲಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಇಂತಹ ಅಪಾಯಕಾರಿ ಗರ್ಭಧಾರಣೆ ವಿರಳವೇನೂ ಅಲ್ಲ. ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸುವುದು ಕೂಡ ಇದಕ್ಕೊಂದು ಕಾರಣ.

ತರಾತುರಿಯಲ್ಲಿ ಶಸ್ತ್ರಚಿಕಿತ್ಸಾ ಕೊಠಡಿಗೆ ಹೋಗುವಾಗ ಆ ಮಹಿಳೆ ಅರಿವಳಿಕೆಯ ಮಂಪರಿಗೆ ಜಾರುತ್ತಿದ್ದರು. ವೈದ್ಯರ ತಂಡ ಸಜ್ಜಾಗಿ ನಿಂತಿತ್ತು. ಶುಶ್ರೂಷಾ ಸಿಬ್ಬಂದಿ ಇಂಟರ್ನ್ ರಕ್ತ ಹೊಂದಿಸುತ್ತಿದ್ದರು. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಇದು ಅಧ್ಯಯನದ ವಿಷಯವಾಗಿತ್ತು. ಆದ್ದರಿಂದ ಅವರು ಅಲ್ಲಿದ್ದರು. ಯೂರಾಲಜಿ ಹಾಗೂ ಆಂಕೊ ಸರ್ಜರಿಯವರಿಗೂ ಕರೆ ಹೋಗಿತ್ತು.

ಸಮಯ ಮಧ್ಯಾಹ್ನ 1.30. ಹಸಿವಿನಿಂದ ಹೊಟ್ಟೆ ಚುರುಗುಟ್ಟುತ್ತಿದ್ದರೂ ಮನದಲ್ಲಿ ಬೇರೆಯದೇ ಬೇನೆ. ಹೊಟ್ಟೆಯೊಳಗೆ ಚಿವುಟಿದ ಅನುಭವ. ರೋಗಿ ಉಳಿದರೆ ಸಾಕಿತ್ತು ಎಂಬ ಹಂಬಲ. ಚರ್ಮಛೇದನ ಮಾಡಿ ಉದರ ಸೀಳಿ ಗರ್ಭಕೋಶವನ್ನು ನೋಡುವಾಗ, ಈ ಹಿಂದಿನ ಹೆರಿಗೆಯ ಸಂದರ್ಭದಲ್ಲಿ ಮಾಡಿದ ಗಾಯ ಇದ್ದಲ್ಲಿ ರಂಧ್ರವಾಗಿತ್ತು (previous scar rupture). ರಕ್ತನಾಳಗಳು ಹಿಗ್ಗಿದ್ದವು. ಅವಧಿಪೂರ್ವ ಮಗುವನ್ನು ಹೊರತೆಗೆಯುವುದು ಅನಿವಾರ್ಯವಾಗಿತ್ತು. ರಕ್ತ ಒಸರುತ್ತಿತ್ತು. ಅಣೆಕಟ್ಟು ಒಡೆದಂತೆ ಧುಮ್ಮಿಕ್ಕುತ್ತಿತ್ತು. ರಕ್ತದೊತ್ತಡ ಕ್ಷೀಣಿಸುವುದನ್ನು ಗಮನಿಸಿದ ಅರಿವಳಿಕೆ ತಜ್ಞರು ರಕ್ತ ಹಾಕಲು ಸಜ್ಜಾದರು. ಶಸ್ತ್ರಕ್ರಿಯೆ ಇನ್ನಷ್ಟು ದುರ್ಗಮವಾಯಿತು. ಕೊಠಡಿಯ ತುಂಬ ಆತಂಕ ತುಂಬಿತ್ತು.

ಇಂತಹ ಶಸ್ತ್ರಚಿಕಿತ್ಸೆಯಲ್ಲಿ ಮೂತ್ರಚೀಲ ಹರಿಯುವ ಸಾಧ್ಯತೆ ಇರುತ್ತದೆ. ಇಲ್ಲಿಯೂ ಹಾಗಾಯಿತು. ಯೂರಾಲಜಿ ವಿಭಾಗದವರು 'ಡಿಜೆ ಸ್ಟಂಟಿಂಗ್' ಮಾಡುವಲ್ಲಿ ಯಶಸ್ವಿಯಾದರು. ಹೆಣ್ಣಿನ ತಾಯ್ತನಕ್ಕೆ ಆಧಾರ ಗರ್ಭಾಶಯ. ಅದನ್ನು ಛೇದಿಸುವುದು ಭಾವನಾತ್ಮಕ ವಿಷಯವೂ ಹೌದು. ಭಾವುಕನಾಗದೆ ಮುಂದುವರಿದೆ. ಆಗಲೇ ಮೂರು ತಾಸು ಕಳೆದಿತ್ತು. ಆದರೆ ರಕ್ತ ಒಸರುವುದು ನಿಲ್ಲುವ ಲಕ್ಷಣ ಕಾಣಲಿಲ್ಲ.

ಆಗ ಸಂದೇಹದ ಅಲೆ ಎದ್ದಿತು. ರಕ್ತಸ್ರಾವ ಹೆಚ್ಚಾದಾಗ 'ಡಿಐಸಿ'ಗೆ ತುತ್ತಾಗುವ ಸಾಧ್ಯತೆ ಇರುತ್ತದೆ. ಅರಿವಳಿಕೆ ತಜ್ಞರು ಅದನ್ನೇ ಊಹಿಸಿದರು. ಪರಿಸ್ಥಿತಿ ಕೈಮೀರಿದೆ ಎಂಬ ನಿಲುವಿಗೆ ಎಲ್ಲರೂ ಬಂದಿದ್ದರು. 'ಹಿಸ್ಟೆರೆಕ್ಟಮಿ' ಮುಗಿದಿತ್ತು.


ಮೂತ್ರಚೀಲವನ್ನು ಹೊಲಿಯುವುದು ಮುಂದಿನ ಸವಾಲು. ದೇಹದಲ್ಲಿ ಕಲ್ಮಷ ಇದ್ದರೆ ಆಪತ್ತು. ಅದನ್ನು ಹೊರಗೆ ಹಾಕಲು ಇರುವ ವ್ಯವಸ್ಥೆಯೇ ಮೂತ್ರವಿಸರ್ಜನೆ. ರೋಗಿಯ ಜೀವಕ್ಕೆ ಬಂದ ವಿಪತ್ತು ಕೊನೆಗೊಳ್ಳುವುದು ಯಾವಾಗ ಎಂಬ ಚಿಂತೆಯ ನಡುವೆಯೇ ನಮ್ಮ ಕರ್ತವ್ಯ ಮುಗಿದಿತ್ತು. ಭಗವಂತನ ಮೇಲೆ ಭಾರ ಹಾಕಿ ಚಿಕಿತ್ಸೆಯ ಫಲಿತಾಂಶಕ್ಕಾಗಿ ಕಾದೆವು. ರೋಗಿ ಆಪತ್ತಿಗೆ ಸಿಲುಕಿದರೆ ಆರು ತಾಸಿನ ಶಸ್ತ್ರಚಿಕಿತ್ಸೆ, ಎಲ್ಲರ ಶ್ರಮ, ಕುಟುಂಬದವರ ಹಾರೈಕೆ ಎಲ್ಲದಕ್ಕೂ ಬೆಲೆ ಇಲ್ಲದಾಗುತ್ತಿತ್ತು. ಒಂದು ಜೀವ ಆರು ತಾಸು ಯಮನೊಂದಿಗೆ ಸೆಣಸುವುದು ಬಹಳ ದೊಡ್ಡ ಯುದ್ಧವೇ ಸರಿ ಎಂದೆನಿಸಿತು. ರೋಗಿಯ ನಗುವಿಗಾಗಿ ಕಾಯುತ್ತಿದ್ದ ತಂಡ ಕೊನೆಗೂ ನಿರಾಳವಾಯಿತು. ಐಸಿಯು ಘಟಕಕ್ಕೆ ಆಕೆಯನ್ನು ವರ್ಗಾಯಿಸಿ ನಾನು ಹೊರ ನಡೆದೆ. ❖

ಎಸ್ಸೆಸ್ಸೆಲ್ಸಿ - ಸಿಇಟಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು


27) ಕೊಟ್ಟಿರುವ ನಕ್ಷೆಯು y= p(x) ಬಹುಪದೋಕ್ತಿಯನ್ನು ಸೂಚಿಸುತ್ತದೆ. p(x) ಹೊಂದಿರುವ ಶೂನ್ಯತೆಗಳ ಸಂಖ್ಯೆ ಬರೆಯಿರಿ (ಮಾರ್ಚ್–2020)



ಉತ್ತರ:– p(x) ಹೊಂದಿರುವ ಶೂನ್ಯತೆಗಳ ಸಂಖ್ಯೆ= 3

28) ಒಂದು ಸಮಾಂತರ ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ ಸಮಾಂತರ ಚತುರ್ಭುಜವು ವಜ್ರಾಕೃತಿಯಾಗುತ್ತದೆ ಎಂದು ಸಾಧಿಸಿ.

ಪರಿಹಾರ:–



O ಕೇಂದ್ರವಿರುವ ವೃತ್ತಕ್ಕೆ ABCD ಚತುರ್ಭುಜವು ವೃತ್ತಪರಿಧಿಯಲ್ಲಿರುವ PQRS ಬಿಂದುಗಳಲ್ಲಿ ಸ್ಪರ್ಶಿಸುತ್ತದೆ. ಮತ್ತು ABCD ಚತುರ್ಭುಜವು ಸಮಾಂತರ ಚತುರ್ಭುಜವಾಗಿದೆ

ಹೀಗಾಗಿಯೇ AB = CD ಮತ್ತು BC = AD.

ಮೇಲಿನ ಚಿತ್ರದಿಂದ (i) DR = DS (ii) BP = BQ (iii) CR = CQ (iv) AP = AS

D, B, C ಮತ್ತು A ಬಿಂದುಗಳ ಮೇಲಿನಿಂದ ವೃತ್ತಕ್ಕೆ ಸ್ಪರ್ಶಕವನ್ನು ಎಳೆಯಲಾಗಿದೆ

ಇವುಗಳನ್ನು ಕೂಡಿಸಿ

DR+BP+CR+AP = DS+BQ+CQ+AS

ಪುನರ್ ರಚಿಸಿ

(BP+AP)+(DR+CR) = (CQ+BQ)+(DS+AS)

ಪುನಃ ಪುನರ್ ರಚಿಸಿ

AB+CD = BC+AD

ಹೀಗಾಗಿ AB = CD ಮತ್ತು BC = AD

2AB = 2BC

∴ AB = BC

ಹೀಗಾಗಿ AB = BC = CD = DA,

ಆದ್ದರಿಂದ ABCD ಸಮಾಂತರ ಚತುರ್ಭುಜವು ವಜ್ರಾಕೃತಿಯಾಗುತ್ತದೆ

29) d = 5, S9 = 75 ಆದರೆ a ಮತ್ತು a_9 ಕಂಡುಹಿಡಿಯಿರಿ

ಪರಿಹಾರ: S9 = 75 d = 5

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$S_9 = \frac{9}{2}[2a+(9-1)d]$$
$$S_9 = \frac{9}{2}[2a+8d]$$
$$S_9 = 9(a+4d)$$
$$S_9 = 9(a+4x5)$$
$$S_9 = 9(a+20)$$
$$75 = 9a+180$$
$$9a = 75-180$$
$$9a = -105$$
$$a = -105/9$$
$$a = 35/3$$

ನಮಗೆ ಗೊತ್ತಿರುವಂತೆ

$$a_n = a + (n-1)d$$
$$a_9 = a + (9-1)(d)$$
$$a_9 = a + 8(d)$$
$$a_9 = -\frac{35}{3} + 40$$
$$a_9 = \frac{-35+120}{3}$$
$$a_9 = \frac{85}{3}$$

30) $3+2\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ

ಉತ್ತರ:– $3+2\sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

$3 + 2\sqrt{5} = x/y$ {ಇಲ್ಲಿ co-prime x and y ($y \neq 0$) }

$$2\sqrt{5} = \frac{x}{y} - 3$$
$$\sqrt{5} = \frac{1}{2}(\frac{x}{y} - 3)$$
$$2\sqrt{5} = \frac{x}{y} - 3$$
$$\sqrt{5} = \frac{1}{2}(\frac{x}{y} - 3)$$

Since, x and y are integers, ಹೀಗಾಗಿ $\frac{1}{2}(\frac{x}{y} - 3)$ ಒಂದು ಭಾಗಲಬ್ಧ ಸಂಖ್ಯೆಯಾಗಿದೆ. ಅಂದರೆ ಇದರರ್ಥ $\sqrt{5}$ ಭಾಗಲಬ್ಧ ಸಂಖ್ಯೆಯಾಗಿದೆ ಆದರೆ ನಿಜ ಹೇಳಬೇಕೆಂದರೆ $\sqrt{5}$ ಇದೂ ಭಾಗಲಬ್ಧ ಸಂಖ್ಯೆಯಲ್ಲ! ಆದುದ್ದರಿಂದ $3+2\sqrt{5}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

31) ಪರಿಧಿಯು 22 cm ಇರುವ ಒಂದು ವೃತ್ತ ಚತುರ್ಥಕ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಪರಿಹಾರ:– ವೃತ್ತದ ಪರಿಧಿ C= 22 cm (ದತ್ತ)

ವೃತ್ತದ ತ್ರಿಜ್ಯ = r

$C = 2\pi r = 22$,

$R = 22/2\pi$ cm = 7/2 cm

ವೃತ್ತದ ವಿಸ್ತೀರ್ಣ= $(\theta/360°) \times \pi r^2$

ಇಲ್ಲಿ $\theta = 90°$

ಹೀಗಾಗಿ $A = (90°/360°) \times \pi r^2 cm^2$

$= (49/16) \pi cm^2$

$= 77/8 cm^2 = 9.6 cm^2$

PUC -CET PHYSICS

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

1) The ratio of molar specific heats of oxygen is:
(A) 1.4 (B) 1.67
(C) 1.33 (D) 1.28

Ans:- (A) 1.4

Expln:- For a diatomic gas like oxygen, the ratio of molar specific heats (γ) is approximately 1.4, reflecting its degrees of freedom and molecular structure.

2) If the rms current in a 50 Hz ac circuit is 5 A, the value of the current 1/300 seconds after its value becomes zero is

a) $5\sqrt{2}$ A b) $5\sqrt{\frac{3}{2}}$ A
c) 5/6A d) $\frac{5}{\sqrt{2}}$ A

Ans:-b

3) For a particle executing simple harmonic motion (SHM), at its mean position:
(A) Velocity is zero and acceleration is maximum
(B) Velocity is maximum and acceleration is zero
(C) Both velocity and acceleration are maximum
(D) Both velocity and acceleration are zero

Ans:-(B) Velocity is maximum and acceleration is zero

Expln:- At the mean position in SHM, the velocity is maximum due to maximal kinetic energy, while acceleration is zero as the restoring force is minimal.

4) Three polaroid sheets P_1, P_2 and P_3 are kept parallel to each other such that the angle between pass axes of $P_1$and P_2 is 45^0 and that between P_2 and P_3 is 45^0. If unpolarised beam of light of intensity 128 Wm^{-2} is incident on P_1. What is the intensity of light coming out of P_3?
a) $64Wm^{-2}$ b) 128 Wm^{-2}
c) 0 d) 16 Wm^{-2}

Ans: d

Expln:-

We have unpolarised beam's intensity I_0=128w/m^2

Using Malu's law we have $I=I_0 \cos^2 \theta$

When beam passed from the first polaroid, $I=I_0/2$

Again, as the angle between p_1 and p_2 is 45^0, beam intensity when it will pass p_2 would be $I_1=I_0/2 \cos^2 45^0=I_0/4$

And, also the angle between p_2 and p_3 is 45^0, beam intensity when it will come out of p_3 will be $I_2=I_0/4 \cos^2 45^0=I_0/8=128/8=16w/m^2$

5) An alternating current generator has an internal resistance Rg and an internal reactance Xg. It is used to supply power to a passive load consisting of a resistance Rg and a reactance X_L. For maximum power to be delivered from the generator to the load, the value of X_L is equal to
a) zero b) Xg
c) –Xg d) Rg

Ans:-c

6) A motor-cyclist moving towards a huge cliff with a speed of 18 km/h, blows a horn of source frequency 325 Hz. If the speed of the sound in air is 330 m/s, the number of beats heard by him is:
(A) 5 **(B) 4**
(C) 7 **(D) 6**

Ans:- (A) 5

Expln:- Using the Doppler effect formula, the observed frequency due to motion towards the source is calculated, leading to 5 beats when compared with the original frequency.

7) When a voltage measuring device is connected to AC mains, the meter shows the steady input voltage of 220V. This means…….
a) input voltage cannot be AC voltage, but a DC voltage.
b) maximum input voltage is 220V.
c) the meter reads not υ but $<\upsilon^2>$ and is calibrated to read $\sqrt{<\upsilon^2>}$
d) the pointer of the meter is stuck by some mechanical defect.

Ans:-a

8) The torque acting on a magnetic dipole placed in uniform magnetic field is zero, when the angle between the dipole axis and the magnetic field is ……………..
(A) 60^0 (B) 90 °
(C) Zero (D) 45 °

Ans. C

Expln: The formula for torque on a magnetic dipole is τ = mB sin(θ), where m is the magnetic moment, B is the magnetic field strength, and θ is the angle between the dipole axis and the magnetic field. When θ is 0 degrees (aligned with the field), the sine function becomes zero, resulting in no torque

9) Which of the following is not a vector quantity?
(a) Momentum (b) Weight
(c) Potential energy (d) nuclear spin

Soln: (c): Among the given quantities potential energy is a scalar quantity whereas all others are vector quantities.

10)A proton and an alpha-particle moving with the same velocity enter a uniform magnetic field with their velocities perpendicular to the magnetic field. The ratio of radii of their circular paths is
(A) 4 :1 (B) 1: 2
(C) 2 :1 (D) 1: 4

Ans. B

11) To reduce the reasonant frequency in an LCR series circuit with a generator
a) the generator frequency should be reduced.
b) another capacitor should be added in parallel to the first.
c) the iron core of the inductor should be removed.
d) dielectric in the capacitor should be removed.

Ans:-b

ಶಾಸಕ ಸೇರಿ ಹಲವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ವೇದವ್ಯಾಸ್ ಕಾಮತ್

ಮುಖ್ಯಾಂಶಗಳು

- ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿರುವ ಆರೋಪ
- ಬಿಜೆಪಿ ಕಾರ್ಯಕರ್ತನಿಂದ ಪ್ರತಿದೂರು
- ಕಾಂಗ್ರೆಸ್ ಮತ್ತು ಬಿಜೆಪಿ ಆರೋಪ –ಪ್ರತ್ಯಾರೋಪ

ಮಂಗಳೂರು: 'ಇಲ್ಲಿಯ ಪದವು ಶಕ್ತಿನಗರದ ಶ್ರೀಕೃಷ್ಣ ಭಜನಾ ಮಂದಿರದ ಬ್ರಹ್ಮಕಲಶೋತ್ಸವ ಸಮಾರಂಭದ ವೇಳೆ ಶಾಸಕ ವೇದವ್ಯಾಸ್ ಕಾಮತ್ ಅವರು ನಿಂದಿಸಿದ್ದನ್ನು ಆಕ್ಷೇಪಿಸಿದ ಕಾರಣಕ್ಕೆ, ಬಿಜೆಪಿ ಕಾರ್ಯಕರ್ತರು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಇದಕ್ಕೆ ಶಾಸಕ ವೇದವ್ಯಾಸ ಕಾಮತ್ ಕುಮ್ಮಕ್ಕು ನೀಡಿದ್ದಾರೆ' ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯ ಯಶವಂತ ಪ್ರಭು ದೂರು ನೀಡಿದ್ದಾರೆ. ಶಾಸಕ ಕಾಮತ್ ಸೇರಿ ಹಲವರ ವಿರುದ್ಧ ಪ್ರಕರಣ ದಾಖಲಾಗಿದೆ.

ಯಶವಂತ ಪ್ರಭು ಹಾಗೂ ಇತರರು ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತ ಮಣಿ ಎಂಬುವರು ದೂರು ನೀಡಿದ್ದು, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರತಿ ದೂರು ದಾಖಲಾಗಿದೆ. ಯಶವಂತ ಪ್ರಭು ಹಾಗೂ ಮಣಿ ಇಬ್ಬರೂ ನಗರದ ವೆನ್‌ಲಾಕ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

'ಪದವು ಶಕ್ತಿನಗರದ ಶ್ರೀ ಕೃಷ್ಣ ಭಜನಾ ಮಂದಿರದಲ್ಲಿ ಭಾನುವಾರ ರಾತ್ರಿ ನಡೆದ ಬ್ರಹ್ಮಕಲಶೋತ್ಸವ ಕಾರ್ಯಕ್ರಮದಲ್ಲಿ ನಾನು ಸ್ವಯಂ ಸೇವಕನ ಜವಾಬ್ದಾರಿ ಹೊಂದಿದ್ದೆ. ಕಾರ್ಯಕ್ರಮಕ್ಕೆ ಅತಿಥಿಯಾಗಿದ್ದ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಅವರನ್ನು ಬರಮಾಡಿಕೊಳ್ಳಲು ಆಶಾಲತಾ, ದಯಾನಂದ ನಾಯ್ಕ್ ಜೊತೆ ನಿಂತಿದ್ದೆ. ಈ ಕಾರ್ಯಕ್ರಮಕ್ಕೆ ಶಾಸಕ ವೇದವ್ಯಾಸ ಕಾಮತ್ ಸಹ ಅತಿಥಿಯಾಗಿದ್ದರು. ಅಲ್ಲಿಗೆ ಬಂದ ಕಾಮತ್, ನಮ್ಮನ್ನುದ್ದೇಶಿಸಿ 'ದೇವಸ್ಥಾನಕ್ಕೆ ಕಲ್ಲು ಹೊಡೆಯುವ ನಿಮಗೆ ಇಲ್ಲೇನು ಕೆಲಸ' ಎಂದು ರಾಜಕೀಯ ಪ್ರೇರಿತವಾಗಿ ಮಾತನಾಡಿದರು' ಎಂದು ಯಶವಂತ ಪ್ರಭು ದೂರಿನಲ್ಲಿ ತಿಳಿಸಿದ್ದಾರೆ.


'ಶಾಸಕ ಕಾಮತ್ ಸಮಾರಂಭದಿಂದ ತೆರಳುವ ವೇಳೆ ನೀವು ಹೀಗೇಕೆ ಹೇಳಿದಿರಿ ಎಂದು ನಾವು ಪ್ರಶ್ನಿಸಿದೆವು. ಬಿಜೆಪಿ ಕಾರ್ಯಕರ್ತರಾದ ಅಶ್ವಿತ್ ಕೊಟ್ಟಾರಿ, ಮಣಿ, ಜಯ ಪ್ರಕಾಶ್ ಹಾಗೂ ಇತರೆ ಏಳೆಂಟು ಜನರು ನನ್ನ ಮೇಲೆ ಹಲ್ಲೆ ನಡೆಸಿ ತುಳಿದು ಅಂಗಿ ಹರಿದರು. ಜಯಪ್ರಕಾಶ್ ಎಂಬುವರು 'ನಿನ್ನನ್ನು ನೋಡಿಕೊಳ್ಳುತ್ತೇನೆ' ಎಂದು ಜೀವ ಬೆದರಿಕೆ ಹಾಕಿದ್ದು, ಈ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಶಾಸಕ ವೇದವ್ಯಾಸ ಕಾಮತ್ ಅವರು 'ಆತನ ಕೈಕಾಲು ಮುರಿಯಿರಿ' ಎಂದು ಆರೋಪಿಗಳಿಗೆ ಕುಮ್ಮಕ್ಕು ನೀಡಿದರು' ಎಂದು ಯಶವಂತ ಪ್ರಭು ದೂರಿನಲ್ಲಿ ತಿಳಿಸಿದ್ದಾರೆ.

ಕಂಕನಾಡಿ ಪೊಲೀಸರು ಅಶ್ವಿತ್ ಕೊಟ್ಟಾರಿ, ಮಣಿ, ಜಯಪ್ರಕಾಶ, ಶಾಸಕ ಡಿ. ವೇದವ್ಯಾಸ ಕಾಮತ್ ಮತ್ತು ಇತರ ಏಳೆಂಟು ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಶಾಸಕ ಕಾಮತ್ ರೌಡಿಯಂತೆ ವರ್ತಿಸುತ್ತಿದ್ದಾರೆ. ಅವರು ತಮ್ಮ ವರ್ತನೆ ತಿದ್ದಿಕೊಳ್ಳಬೇಕು ಮತ್ತು ಈ ಪ್ರಕರಣದಲ್ಲಿ ಅವರು ಹಾಗೂ ಹಲ್ಲೆ ನಡೆಸಿದ ಎಲ್ಲರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಕೆ. ಹರೀಶ್ ಕುಮಾರ್ ಒತ್ತಾಯಿಸಿದ್ದಾರೆ.

'ಶಾಸಕರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ' ಎಂದು ಬಿಜೆಪಿ ಜಿಲ್ಲಾ ಘಟಕದ ವಕ್ತಾರ ರಾಜಗೋಪಾಲ ರೈ ಅವರು ಹೇಳಿದ್ದಾರೆ.

ರಾಮಯ್ಯ, ಗುರುಪ್ರಸಾದ್‌ಗೆ 'ಅತ್ಯುತ್ತಮ ಕಾದಂಬರಿ ಪ್ರಶಸ್ತಿ'



ರಾಮಯ್ಯ



ಗುರುಪ್ರಸಾದ್

ಬೆಂಗಳೂರು: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ನೀಡುವ 2024ನೇ ಸಾಲಿನ 'ಅತ್ಯುತ್ತಮ ಕಾದಂಬರಿ ಪ್ರಶಸ್ತಿ'ಗೆ ತುಂಬಾಡಿ ರಾಮಯ್ಯ ಅವರ 'ಜಾಲ್ಗಿರಿ' ಮತ್ತು ಗುರುಪ್ರಸಾದ್ ಕಂಟಲಗೆರೆ ಅವರ 'ಅಟ್ರಾಸಿಟಿ' ಕಾದಂಬರಿಗಳು ಆಯ್ಕೆಯಾಗಿವೆ.

ಪ್ರಶಸ್ತಿಯು ₹25 ಸಾವಿರ ನಗದು (ಇಬ್ಬರಿಗೂ ಸೇರಿ) ಮತ್ತು ಫಲಕಗಳನ್ನು ಒಳಗೊಂಡಿದೆ. ತೀರ್ಪುಗಾರರಾಗಿ ವಿಮರ್ಶಕ ಎಸ್.ಆರ್.ವಿಜಯಶಂಕರ್ ಮತ್ತು ಲೇಖಕಿ ಅನುಪಮ ಪ್ರಸಾದ್ ಅವರು ಕಾರ್ಯನಿರ್ವಹಿಸಿದ್ದರು.

ಸ್ಪರ್ಧೆಗೆ 54 ಕಾದಂಬರಿಗಳು ಬಂದಿದ್ದವು. ಅಂತಿಮ ಸುತ್ತಿನಲ್ಲಿ ಪ್ರಶಸ್ತಿಗೆ ಆಯ್ಕೆಯಾದ ಎರಡು ಕೃತಿಗಳ ಜೊತೆಗೆ, ಧರಣೇಂದ್ರ ಕುರಕುರಿ ಅವರ 'ಜಾತ್ರಿ', ಶುಭದಾ ಎಚ್.ಎಸ್. ಅವರ 'ದೇವಿ ಕುರುಬತಿ' ಹಾಗೂ ಹಳೆಮನೆ ರಾಜಶೇಖರ್ ಅವರ 'ಒಡಲುಗೊಂಡವರು' ಕಾದಂಬರಿಗಳು ಇದ್ದವು. ಇದೇ 14ರಂದು ಸಂಜೆ 5ಕ್ಕೆ ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ತಿಳಿಸಿದ್ದಾರೆ.

ಮಾಜಿ ಶಾಸಕ ಅರ್ಷದ್ ಅಲಿ ನಿಧನ



ಬೀದರ್: ವಿಧಾನ ಪರಿಷತ್ ಮಾಜಿ ಸದಸ್ಯ ಕಾಜಿ ಅರ್ಷದ್ ಅಲಿ (75) ಅವರು ನಗರದಲ್ಲಿ ಸೋಮವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಮೂವರು ಪುತ್ರಿಯರು ಇದ್ದಾರೆ. ಮಂಗಳವಾರ (ಮಾ.4) ಮಧ್ಯಾಹ್ನ 1.30ಕ್ಕೆ ನಗರದ ಜಾಮೀಯಾ ಮಸೀದಿಯಲ್ಲಿ ಗೌರವ ಸಲ್ಲಿಸಿ, ಬಳಿಕ ಭಾಲ್ಕಿಯ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಅರ್ಷದ್ ಅಲಿ ಅವರು ಎರಡು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿದ್ದರು. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಉರ್ದು ಹಾಗೂ ಹಿಂದಿ ಭಾಷೆಯ ಎರಡು ಪತ್ರಿಕೆಗಳ ಮಾಲೀಕರಾಗಿದ್ದರು. ಈ ಹಿಂದೆ 'ಪ್ರಜಾವಾಣಿ'ಗೆ ಹಲವು ಲೇಖನಗಳನ್ನು ಬರೆದಿದ್ದರು.

ಬಳ್ಳಾರಿ: ತಹಶೀಲ್ದಾರ್ ವಿರುದ್ಧ ಲೋಕಾಯುಕ್ತ ತನಿಖೆಗೆ ಅನುಮತಿ

ಬಳ್ಳಾರಿ: ಸರ್ಕಾರಿ ಭೂಮಿಯ ಹಕ್ಕು ಬದಲಾಯಿಸಿ, ಅಧಿಕಾರ ದುರ್ಬಳಕೆ ಮಾಡಿಕೊಂಡ ಆರೋಪದ ಮೇಲೆ ಬಳ್ಳಾರಿ ತಹಶೀಲ್ದಾರ್ ಗುರುರಾಜ್ ಎಂ. ಚಲವಾದಿ ಅವರ ವಿರುದ್ಧದ ಲೋಕಾಯುಕ್ತ ತನಿಖೆಗೆ ಸರ್ಕಾರ ಅನುಮತಿ ನೀಡಿದೆ. ತನಿಖೆಗೆ ಪೂರ್ವಾನುಮತಿ ನೀಡಿ, ಪ್ರಕರಣವನ್ನು ಲೋಕಾಯುಕ್ತ ಪೊಲೀಸ್ ಮಹಾನಿರ್ದೇಶಕರಿಗೆ ಒಪ್ಪಿಸಿ ಕಂದಾಯ ಇಲಾಖೆಯು ಫೆಬ್ರುವರಿ 27ರಂದು ಆದೇಶ ಹೊರಡಿಸಿದೆ.

ಪ್ರಕರಣದ ತನಿಖೆಗೆ ಸಂಬಂಧಿಸಿ ಲೋಕಾಯುಕ್ತ ಸಂಸ್ಥೆ ಸಲ್ಲಿಸಿದ ಪ್ರಸ್ತಾವ ಮತ್ತು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಂದಾಯ ಇಲಾಖೆಯ ಕಲಬುರಗಿ ಪ್ರಾದೇಶಿಕ ಆಯುಕ್ತರು ಪರಿಶೀಲಿಸಿದ್ದಾರೆ. 'ಅಧಿಕಾರ ದುರ್ಬಳಕೆ ಆಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ' ಎಂದು ಅವರು ತಿಳಿಸಿದ್ದಾರೆ. ಬಳ್ಳಾರಿ ನಗರದ ಸರ್ವೆ ಸಂಖ್ಯೆ 348ರ 11.59 ಎಕರೆ ಜಾಗವನ್ನು ಪಾರ್ವತಮ್ಮ ಹೆಸರಿಗೆ ಅಕ್ರಮವಾಗಿ ಹಕ್ಕು ಬದಲಾವಣೆ ಮಾಡಲು ಗುರುರಾಜ್ ಆದೇಶಿಸಿದ್ದರು. ಈ ಭೂಮಿಯ ಸರ್ಕಾರಿ ಬೆಲೆ ₹39.88 ಕೋಟಿಯಾದರೂ, ಮಾರುಕಟ್ಟೆ ದರ ₹120 ಕೋಟಿ ಇದೆ ಎನ್ನಲಾಗಿದೆ.

ಕೆರೆಯಲ್ಲಿ ಮುಳುಗಿ ಬಾಲಕರ ಸಾವು

ಕೂಡ್ಲಿಗಿ (ವಿಜಯನಗರ ಜಿಲ್ಲೆ): ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹೊಸಕೆರೆ ಗ್ರಾಮದಲ್ಲಿ ಭಾನುವಾರ ಕೆರೆಯಲ್ಲಿ ಈಜಲು ಹೋಗಿದ್ದ ವೀರೇಶ್ (12) ಮತ್ತು ವಿನಯ್ ಕುಮಾರ್ (12) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

'ಹೊಸಕೆರೆ ಗ್ರಾಮದ ಹರಪನಹಳ್ಳಿ ನಾಗರಾಜ ಅವರ ಪುತ್ರ ವೀರೇಶ್ ಮತ್ತು ರುದ್ರೇಶ್ ಅವರ ಪುತ್ರ ವಿನಯ್ ಕುಮಾರ್ ಕ್ರಿಕೆಟ್ ಆಡಲು ಹೋಗಿ ವಾಪಸಾಗಿರಲಿಲ್ಲ. ಕೆರೆ ಬಳಿ ಅವರ ಬಟ್ಟೆಗಳು ಇದ್ದವು. ಕೆರೆಯಲ್ಲಿ ಹುಡುಕಿದಾಗ, ಮೃತದೇಹಗಳು ಸಿಕ್ಕಿದವು' ಎಂದು ಪೊಲೀಸರು ತಿಳಿಸಿದ್ದಾರೆ.

ಆರು ದಿನ ಮೊಟ್ಟೆ; ಬಿಸಿಯೂಟಕ್ಕೆ ಬೇಡಿಕೆ

ಬೆಂಗಳೂರು: ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವಾರಕ್ಕೆ 6 ದಿನ ಮೊಟ್ಟೆ ನೀಡಲು ಆರಂಭಿಸಿದ ನಂತರ ಮಧ್ಯಾಹ್ನದ ಬಿಸಿಯೂಟ ಸೇವಿಸುವ ಮಕ್ಕಳ ಸಂಖ್ಯೆಯಲ್ಲಿ ಶೇ 5.31ರಷ್ಟು ಹೆಚ್ಚಳವಾಗಿದೆ.

2024ರ ಸೆಪ್ಟೆಂಬರ್‌ನಿಂದ ವಾರದ ಆರು ದಿನ ಮೊಟ್ಟೆ ನೀಡಲಾಗುತ್ತಿದೆ. ಎರಡು ದಿನ ಮೊಟ್ಟೆ ವಿತರಿಸುವಾಗ 52.77 ಲಕ್ಷ ಮಕ್ಕಳಲ್ಲಿ ಶೇ 93.66ರಷ್ಟು ಮಕ್ಕಳು ಬಿಸಿಯೂಟ ಸೇವಿಸುತ್ತಿದ್ದರು. ಈಗ ಶೇ 98.97ರಷ್ಟು ಮಕ್ಕಳು ಊಟಕ್ಕೆ ಹಾಜರಾಗುತ್ತಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆ ಹೇಳಿದೆ. ಜಿಲ್ಲಾವಾರು ಮಾಹಿತಿ ಪ್ರಕಾರ ಕೋಲಾರದಲ್ಲಿ ಹೆಚ್ಚಿನ ಮಕ್ಕಳು (ಶೇ 84.16), ಚಿಕ್ಕೋಡಿಯಲ್ಲಿ ಕಡಿಮೆ ಮಕ್ಕಳು (ಶೇ 30.97) ಮೊಟ್ಟೆ ಸೇವಿಸುತ್ತಿದ್ದಾರೆ.

ಪತ್ನಿ ಕಿರುಕುಳ: ಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಹೆಂಡತಿ ನೀಡಿದ ಕಿರುಕುಳದಿಂದ ಬೇಸತ್ತ ಗಂಡನೊಬ್ಬ ಮನೆಯಲ್ಲಿ ಸೋಮವಾರ ನೇಣು ಹಾಕಿಕೊಂಡು ಮೃತಪಟ್ಟಿದ್ದು, ಪತ್ನಿ ಸೇರಿ ಮೂವರ ವಿರುದ್ಧ ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಾದೇವ ನಗರದ ನಿವಾಸಿ, ಔಷಧ ಅಂಗಡಿ ನೌಕರ ರಾಕೇಶ್ ಬಿರಾದಾರ (30) ಆತ್ಮಹತ್ಯೆ ಮಾಡಿಕೊಂಡವರು. ಕಿರುಕುಳ ನೀಡಿದ ಆರೋಪದ ಮೇಲೆ ರಾಕೇಶ್ ಅವರ ಪತ್ನಿ ಮೇಘಾ, ಆಕೆಯ ತಾಯಿ ರೇಣುಕಾ ಹಾಗೂ ಅಕ್ಕ ಪ್ರಿಯಾ ವಿರುದ್ಧ ದೂರು ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಮೂರು ತಿಂಗಳ ಹಿಂದೆಯಷ್ಟೇ ರಾಕೇಶ್ ಮತ್ತು ಮೇಘಾ ಅವರ ಮದುವೆ ಆಗಿತ್ತು. ಮದುವೆಯ ಬಳಿಕ ಮನೆ ಕೆಲಸ ಸೇರಿದಂತೆ ಇತರೆ ವಿಚಾರಗಳಿಗೆ ದಂಪತಿ ನಡುವೆ ಆಗಾಗ ಗಲಾಟೆ ಆಗುತ್ತಿತ್ತು. ನನ್ನ ಮಾತು ಕೇಳದೆ ಇದ್ದರೆ ಪೊಲೀಸರಿಗೆ ದೂರು ಕೊಡುವುದಾಗಿ ಪತ್ನಿ ಗಂಡನಿಗೆ ಪದೇ ಪದೇ ಬೆದರಿಕೆ ಹಾಕುತ್ತಿದ್ದಳು. ಇದರಿಂದ ಬೇಸತ್ತು ರಾಕೇಶ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸರ್ಕಾರದ ಬೆನ್ನುತಟ್ಟಿದ ರಾಜ್ಯಪಾಲ ಗೆಹಲೋತ್ ● 1 ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ಯತ್ನ– ಭರವಸೆ

‘ಕರ್ನಾಟಕ ಮಾದರಿಗೆ ವಿಶ್ವದ ಶ್ಲಾಘನೆ’

ಪ್ರಜಾವಾಣಿ ವಾರ್ತೆ



ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರನ್ನು ಡಿ ಕೆ. ಶಿವಕುಮಾರ್, ಸಿದ್ದರಾಮಯ್ಯ, ಬಸವರಾಜ ಹೊರಟ್ಟಿ ಯು. ಟಿ. ಖಾದರ್ ಅವರು ವಿಧಾನಸೌಧಕ್ಕೆ ಬರಮಾಡಿಕೊಂಡರು. ಪ್ರಜಾವಾಣಿ ಚಿತ್ರ: ಎಂ. ಎಸ್ ಮಂಜುನಾಥ್

ಬೆಂಗಳೂರು: ‘ಕರ್ನಾಟಕದ ಅಭಿವೃದ್ಧಿ ಮಾದರಿಯನ್ನು ವಿಶ್ವವೇ ಕೊಂಡಾಡುತ್ತಿದೆ. ವಿಶ್ವಸಂಸ್ಥೆಯ ಮುಖ್ಯಸ್ಥರೇ ರಾಜ್ಯಕ್ಕೆ ಬಂದು ಸರ್ಕಾರದ ಯೋಜನೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪ್ರತಿಪಾದಿಸಿದರು.

ಸೋಮವಾರ ಆರಂಭವಾದ ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕದ ಮಾದರಿ ಅಭಿವೃದ್ಧಿ ಎಂದರೆ ಜನಕೇಂದ್ರಿತ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಡಳಿತವಾಗಿದೆ. ಹಸಿರು ಇಂಧನ, ಮಹಿಳಾ ಸಬಲೀಕರಣವೂ ಇದರಲ್ಲಿ ಸೇರಿದೆ ಎಂದರು.

‘ಕರ್ನಾಟಕದ ಮಾದರಿಯನ್ನು ಜಗತ್ತಿನ ಅನೇಕ ಅರ್ಥ ಶಾಸ್ತ್ರಜ್ಞರು ಮತ್ತು ವಿಶ್ವವಿದ್ಯಾಲಯಗಳು ಅಧ್ಯಯನ ಮಾಡುತ್ತಿವೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವು ಹ್ಯೂಮನ್ ರೈಟ್ಸ್ ಹಬ್‌ನ ಬ್ಲಾಗ್‌ನಲ್ಲಿ ‘ಶೈನಿಂಗ್ ಎ ಲೈಟ್ ಇನ್ ದ ಡಾರ್ಕ್‌ನೆಸ್’ ಮತ್ತು ‘ಎ ಬ್ಲ್ಯೂಪ್ರಿಂಟ್ ಫಾರ್ ದ ವರ್ಲ್ಡ್’ ಎಂದು ಈ ಮಾದರಿಯನ್ನು ವ್ಯಾಖ್ಯಾನಿಸಿವೆ’ ಎಂದು ಅವರು ಸರ್ಕಾರದ ಬೆನ್ನುತಟ್ಟಿದರು.

‘ಸರ್ಕಾರವು ಸಂವಿಧಾನದ ಆಶಯಗಳಿಗೆ ಪೂರಕವಾಗಿ ಜನ ಕಲ್ಯಾಣವನ್ನೇ ಪ್ರಧಾನ ಧ್ಯೇಯ ವಾಗಿಟ್ಟುಕೊಂಡು ಕೆಲಸ ಮಾಡುತ್ತಿದೆ. ಸರ್ವರ ಶಾಂತಿ, ಸರ್ವರ ಅಭ್ಯುದಯವೇ ಸಂವಿಧಾನದ ಆಶಯ. ಈ ಆಶಯವನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದೇವೆ’ ಎಂದು ಹೇಳಿದರು.

ರಾಜ್ಯದ ಅಭಿವೃದ್ಧಿಯ ವೇಗವನ್ನು ಚುರುಕುಗೊಳಿಸುವುದರಲ್ಲಿ ಹಾಗೂ ಹಣಕಾಸು ವ್ಯವಸ್ಥೆಯನ್ನು ಇನ್ನಷ್ಟು ಸದೃಢಗೊಳಿಸುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಗಾಂಧೀಜಿಯವರು ಹೇಳಿದಂತೆ, ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಣ್ಣೀರು ಒರಿಸುವ ಅವಕಾಶವೆಂಬಂತೆ ಬಳಸಿಕೊಳ್ಳಲು ಸರ್ಕಾರ ಕಟಿಬದ್ಧವಾಗಿದೆ ಎಂದರು.

ಸರ್ಕಾರ ಹಮ್ಮಿಕೊಂಡ ಕಲ್ಯಾಣ ಯೋಜನೆಗಳಿಂದಾಗಿ ರಾಜ್ಯ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದು, ಹಣಕಾಸು ವ್ಯವಸ್ಥೆ ಹದಗೆಡಲಿದೆ ಎಂದು ಹಲವು ಭವಿಷ್ಯ ನುಡಿದಿದ್ದರು. ಅದನ್ನು ಸರ್ಕಾರ ಸುಳ್ಳು ಮಾಡಿದೆ ಎಂದು ಗೆಹಲೋತ್ ಬಣ್ಣಿಸಿದರು.

ಕಲ್ಯಾಣ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನದಿಂದ ರಾಜ್ಯದಲ್ಲಿ ಅಸಮಾನತೆಯ ತೀವ್ರತೆ ಕಡಿಮೆಯಾಗಿದೆ. ವಿದೇಶಿ ಹೂಡಿಕೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಜಿಎಸ್‌ಟಿ ಬೆಳವಣಿಗೆ ದರವೂ ಉತ್ತಮವಾಗಿದೆ. ಕರ್ನಾಟಕದ ಆರ್ಥಿಕತೆಯನ್ನು 1 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ರೂಪಿಸಲು ಸಮಗ್ರ ಹಾಗೂ ಸಮರ್ಥ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಮುಖ್ಯಾಂಶಗಳು

- ಜನ ಕಲ್ಯಾಣವನ್ನೇ ಪ್ರಧಾನ ಧ್ಯೇಯವಾಗಿಟ್ಟುಕೊಂಡು ಸರ್ಕಾರದಿಂದ ಕೆಲಸ
- ಹಣಕಾಸು ವ್ಯವಸ್ಥೆಯನ್ನು ಇನ್ನಷ್ಟು ಸದೃಢಗೊಳಿಸುವಲ್ಲಿ ಸರ್ಕಾರ ಯಶಸ್ವಿ
- ವಿದೇಶಿ ಹೂಡಿಕೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಜಿಎಸ್‌ಟಿ ಬೆಳವಣಿಗೆ ದರವೂ ಉತ್ತಮ

ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಲ್ಲಿ ಕರ್ನಾಟಕ ಇಡೀ ದೇಶದಲ್ಲಿ ಮುಂಚೂಣಿಯಲ್ಲಿದೆ. ರಾಜ್ಯವು ತನ್ನ 2024–25ರ ಬಜೆಟ್‌ನ ಶೇ 15.01 ರಷ್ಟು ಮೊತ್ತವನ್ನು ಬಂಡವಾಳ ವೆಚ್ಚಗಳಿಗಾಗಿ ವಿನಿಯೋಗಿಸುತ್ತಿದೆ. ಇದು ಮಹಾರಾಷ್ಟ್ರ, ತಮಿಳುನಾಡು ಮತ್ತು ತೆಲಂಗಾಣ ಮುಂತಾದ ಪ್ರಗತಿಪರ ರಾಜ್ಯಗಳಿಗಿಂತಲೂ ಹೆಚ್ಚಿನ ಪ್ರಮಾಣದ್ದಾಗಿದೆ ಎಂದು ಗೆಹಲೋತ್ ವಿವರಿಸಿದರು.

2024–25ನೇ ಸಾಲಿನಲ್ಲಿ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವುದರ ಜತೆಗೆ ವಿತ್ತೀಯ ನಿರ್ವಹಣೆಯನ್ನು ಉತ್ತಮವಾಗಿ ನಿಭಾಯಿಸಲಾಗಿದೆ. 2024–25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ರಾಜ್ಯದ ರಾಜಸ್ವ ಸಂಗ್ರಹಣೆಯು ₹1,81,908 ಕೋಟಿಗೆ ತಲುಪಿದೆ. ಹಿಂದಿನ ಸಾಲಿಗೆ ಹೋಲಿಸಿದರೆ ಡಿಸೆಂಬರ್ ಅಂತ್ಯದವರೆಗೆ ರಾಜಸ್ವ ಸ್ವೀಕೃತಿಯು ಶೇ 13ರಷ್ಟು ಬೆಳವಣಿಗೆ ಸಾಧಿಸಿದೆ. ರಾಜ್ಯಗಳಿಂದ ಸ್ವೀಕೃತವಾಗುವ ಒಟ್ಟು ಜಿಎಸ್‌ಟಿ ತೆರಿಗೆಯಲ್ಲಿ ಕರ್ನಾಟಕ ರಾಜ್ಯ ದೇಶದಲ್ಲಿಯೇ 2ನೇ ಸ್ಥಾನದಲ್ಲಿದೆ. ಡಿಸೆಂಬರ್ ಅಂತ್ಯದವರೆಗೆ ಜಿಎಸ್‌ಟಿ ತೆರಿಗೆಯು ಶೇ 12ರಷ್ಟು ಬೆಳವಣಿಗೆ ಸಾಧಿಸಿದೆ ಎಂದು ಅವರು ಹೇಳಿದರು.

ಸಿ.ಎಂಗೆ ಕಾಲುನೋವು: ಕಾದು ನಿಂತ ರಾಜ್ಯಪಾಲರು

ವಿಧಾನಸಭೆಯ ಸಭಾಂಗಣಕ್ಕೆ ಬಂದ ರಾಜ್ಯಪಾಲ ಗೆಹಲೋತ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗಾಗಿ ಕೆಲ ನಿಮಿಷ ಕಾಯಬೇಕಾಯಿತು.

ವಿಧಾನಸೌಧದ ಎದುರು ರಾಜ್ಯಪಾಲರು ಬಂದಿಳಿದಾಗ ಅವರನ್ನು ಸಭಾಧ್ಯಕ್ಷ ಯು.ಟಿ. ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಶಿವಕುಮಾರ್, ಕಾನೂನು ಸಚಿವ ಎಚ್.ಕೆ. ಪಾಟೀಲರು ಬರಮಾಡಿಕೊಂಡರು. ರಾಜ್ಯಪಾಲರನ್ನು ಸಭಾಂಗಣದೊಳಗೆ ಕರೆತರುವಾಗ, ಕಾಲು ನೋವಿನ ಕಾರಣಕ್ಕೆ ಮೆಟ್ಟಿಲು ಹತ್ತಿಕೊಂಡು ಬರಲು ಸಿದ್ದರಾಮಯ್ಯಗೆ ಸಾಧ್ಯವಾಗಲಿಲ್ಲ. ವ್ಹೀಲ್ ಚೇರ್ ಮೂಲಕ ಬಂದಿದ್ದರಿಂದಾಗಿ, ಸದನದ ಒಳ ಬರಲು ವಿಳಂಬವಾಯಿತು.

ಹೀಗಾಗಿ, ಸಭಾಧ್ಯಕ್ಷರ ಪೀಠದ ಎದುರು ನಿಂತಿದ್ದ ರಾಜ್ಯಪಾಲರು, ಸಿದ್ದರಾಮಯ್ಯ ಬಂದ ಬಳಿಕ ಅವರ ಆಸನದ ಬಳಿ ಹೋಗಿ, ಕೈಕುಲುಕಿ ಸಭಾಧ್ಯಕ್ಷರ ಪೀಠದತ್ತ ತೆರಳಿದರು.



ವಿಧಾನಸೌಧದ ಆವರಣದಲ್ಲಿರುವ ಕೆಂಗಲ್ ದ್ವಾರದ ಬಳಿ ಮುಖ್ಯಮಂತ್ರಿ ಓಡಾಟಕ್ಕಾಗಿ ಅಳವಡಿಸಿರುವ ರ್‍ಯಾಂಪ್ ಮುಖಾಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ವೀಲ್ ಚೇರ್‌ನಲ್ಲಿ ಸಾಗಿದರು –ಪ್ರಜಾವಾಣಿ ಚಿತ್ರ

ಭಾಷಣದ ಪ್ರಮುಖ ಅಂಶಗಳು

- 194 ಹೈಟೆಕ್ ಹಾರ್ವೆಸ್ಟ್ ಹಬ್‌ಗಳು ಸ್ಥಾಪನೆ ಆಗುತ್ತಿವೆ. ಹಾರ್ವೆಸ್ಟರ್‌ಗಳನ್ನು ಪಡೆಯುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರೈತರಿಗೆ ಶೇ 50ರಷ್ಟು ಮತ್ತು ಇತರ ಸಮುದಾಯಗಳ ರೈತರಿಗೆ ಶೇ 40ರಷ್ಟು ಸಹಾಯಧನ ವಿತರಣೆ
- ಈ ಸಾಲಿನಲ್ಲಿ 19,166 ಹೆಕ್ಟೇರ್ ಪ್ರದೇಶವನ್ನು ತೋಟಗಾರಿಕೆ ಬೆಳೆಗಳ ವ್ಯಾಪ್ತಿಗೆ ತರಲಾಗಿದೆ. ತೋಟಗಾರಿಕೆ ಇಲಾಖೆ ವತಿಯಿಂದ ಬೀಜದಿಂದ ಮಾರುಕಟ್ಟೆವರೆಗಿನ ಸೇವೆಗಳನ್ನು ಒಂದೇ ಸೂರಿನಡಿ ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ಒದಗಿಸಲು ‘ತೋಟಗಾರಿಕೆ ಮಾಲ್’ಗಳನ್ನು ಸ್ಥಾಪಿಸಲಾಗುವುದು
- ಇದೇ ಜನವರಿ ಅಂತ್ಯಕ್ಕೆ 20.22 ಲಕ್ಷ ರೈತರಿಗೆ ₹16,942 ಕೋಟಿ ಬೆಳೆ ಸಾಲ ಮತ್ತು 46,000 ರೈತರಿಗೆ ₹1,442 ಕೋಟಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ವಿತರಿಸಲಾಗಿದೆ. ಈ ವರ್ಷ ಸಹಕಾರ ಸಂಘಗಳಿಗೆ ಬಡ್ಡಿ ಸಹಾಯಧನ ನೀಡಲು ₹1,451 ಕೋಟಿ ಒದಗಿಸಲಾಗಿದೆ.
- ಧರ್ಮಸ್ಥಳ, ಮಡಿಕೇರಿ ಮತ್ತು ಚಿಕ್ಕಮಗಳೂರಿನಲ್ಲಿ ಏರ್‌ಸ್ಟ್ರಿಪ್‌ಗಳನ್ನು ಅಭಿವೃದ್ಧಿಪಡಿಸಲು ಭೂಮಿಯನ್ನು ಗುರುತಿಸುವ ಮತ್ತು ಭೂಸ್ವಾಧೀನ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ
- ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದೊಂದಿಗೆ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ವೈರ್ಡ್ ಅಂಡ್ ವಯರ್‌ಲೆಸ್ ಟೆಕ್ನಾಲಜಿ ಅನ್ನು 5 ವರ್ಷಗಳ ಅವಧಿಗೆ ₹25 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ.
- ಮೈಸೂರಿನ ಮಂಡಕಳ್ಳಿಯಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿ ₹30 ಕೋಟಿ ವೆಚ್ಚದಲ್ಲಿ ಜಾಗತಿಕ ತಂತ್ರಜ್ಞಾನ ಕೇಂದ್ರ ಆರಂಭಿಸಲಾಗುವುದು
- ಅನೀಮಿಯ ಮುಕ್ತ ಪೌಷ್ಟಿಕ ಕರ್ನಾಟಕ ಯೋಜನೆ ಅಡಿ 10.8 ಲಕ್ಷ ಪಿಯುಸಿ ವಿದ್ಯಾರ್ಥಿಗಳನ್ನುಪರೀಕ್ಷೆ ಮಾಡಿದಾಗ ಶೇ 32.5ರಷ್ಟು ಮಕ್ಕಳಲ್ಲಿ ಅನೀಮಿಯ ಇರುವುದು ಕಂಡು ಬಂದಿತ್ತು. ಇವರಿಗೆ ರಕ್ತ ವೃದ್ಧಿ ಚಿಕಿತ್ಸೆ ನೀಡಿದ್ದರಿಂದ ಶೇ 60ರಷ್ಟು ಮಕ್ಕಳು ಗುಣಮುಖರಾಗಿದ್ದಾರೆ
- ಕಳೆದ 19 ತಿಂಗಳಲ್ಲಿ ಗಂಭೀರ ಕಾನೂನು ಸುವ್ಯವಸ್ಥೆ ಸಮಸ್ಯೆ ಉದ್ಭವಿಸಿಲ್ಲ. ಪೊಲೀಸ್ ಠಾಣೆಗಳು ಜನ ಸ್ನೇಹಿಯಾಗಿ ಕೆಲಸ ಮಾಡುತ್ತಿವೆ. ಆದರೆ ಇಡೀ ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗಿವೆ.

ಜನರ ಖಾತೆಗಳಿಗೆ ₹70,000 ಕೋಟಿ ವರ್ಗ

‘ಗ್ಯಾರಂಟಿಗಳಿಗಾಗಿ ವರ್ಷಕ್ಕೆ ₹52 ಸಾವಿರ ಕೋಟಿಗಳಿಗೂ ಹೆಚ್ಚು ಅನುದಾನ ನೀಡಲಾಗುತ್ತಿದೆ. ಇಲ್ಲಿಯವರೆಗೆ ಐದು ಗ್ಯಾರಂಟಿಗಳಿಗಾಗಿ ₹70,000 ಕೋಟಿಯನ್ನು ಜನರ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂದು ರಾಜ್ಯಪಾಲರು ಹೇಳಿದರು.

ಕಲ್ಯಾಣ ಕಾರ್ಯಕ್ರಮಗಳಿಗಾಗಿ ವರ್ಷಕ್ಕೆ ₹90,000 ಕೋಟಿಗೂ ಹೆಚ್ಚಿನ ಮೊತ್ತವನ್ನು ಖರ್ಚು ಮಾಡಲಾಗುತ್ತಿದೆ. ಸಾಮಾಜಿಕ ಪಿಂಚಣಿಗಳು, ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ಕೈಮಗ್ಗ ಮತ್ತು ಜವಳಿ, ವಸತಿ, ಶಿಕ್ಷಣ, ಕೈಗಾರಿಕೆ, ಕೌಶಲಾಭಿವೃದ್ಧಿ, ಹಿಂದುಳಿದವರು, ಪರಿಶಿಷ್ಟರು, ಅಲ್ಪಸಂಖ್ಯಾತರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳು ಸೇರಿ ವಿವಿಧ ಇಲಾಖೆಗಳಿಂದ ನೀಡುವ ನೇರ ಯೋಜನೆಗಳು ಮತ್ತು ಸಹಾಯಧನ, ಪ್ರೋತ್ಸಾಹ ಧನಗಳಿಂದ 1.25 ಕೋಟಿ ಕುಟುಂಬಗಳು ಪ್ರಯೋಜನ ಪಡೆಯುತ್ತಿವೆ ಎಂದರು ಅವರು ಹೇಳಿದರು. ಗೃಹ ಜ್ಯೋತಿ ಯೋಜನೆಯಡಿ ಈಗ 1.61 ಕೋಟಿ ಗ್ರಾಹಕರು ಸೌಲಭ್ಯವನ್ನು ಪಡೆಯುತ್ತಿದ್ದಾರೆ. 2023ರ ಆಗಸ್ಟ್ ನಿಂದ 2025ರ ಜನವರಿವರೆಗೆ ಒಟ್ಟು ₹17,290 ಕೋಟಿ ಸಹಾಯಧನವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಲಾಗಿದೆ ಎಂದರು.

ಸುಳ್ಳಿನ ಸರಮಾಲೆಯ ಭಾಷಣ

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲರ ಸಂವಿಧಾನ ಬದ್ಧ ಅಧಿಕಾರಗಳನ್ನೇ ಕಿತ್ತುಕೊಳ್ಳಲು ಹೊರಟಿರುವ ರಾಜ್ಯ ಸರ್ಕಾರ, ಈಗ ಅವರ ಮೂಲಕವೇ ತನ್ನ ಸರ್ಕಾರದ ಸಾಧನೆಗಳ ಕುರಿತು ಸುಳ್ಳು ಹೇಳಿಕೆ ಕೊಡಿಸಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ದೂರಿದರು.

ಜಂಟಿ ಅಧಿವೇಶನದಲ್ಲಿನ ರಾಜ್ಯಪಾಲರ ಭಾಷಣ ಕುರಿತು ಪ್ರತಿಕ್ರಿಯಿಸಿದ ಅವರು, ಅಭಿವೃದ್ಧಿ ಕಾರ್ಯ ಕೈಗೊಳ್ಳದೆ ಕಾಂಗ್ರೆಸ್ ನಾಯಕರ ಜೇಬು ಭರ್ತಿ ಮಾಡಿದೆ. ಅತ್ಯಾಚಾರ, ಬ್ಯಾಂಕ್ ದರೋಡೆ, ಪೊಲೀಸ್ ಠಾಣೆ ಮೇಲೆ ದಾಳಿಗಳು ರಾಜ್ಯದ ಕಾನೂನು–ಸುವ್ಯವಸ್ಥೆ ಕುಸಿತಕ್ಕೆ ಕನ್ನಡಿಯಾಗಿವೆ. ಮೈಕ್ರೊ ಫೈನಾನ್ಸ್ ಕಂಪನಿಗಳ ಕಿರುಕುಳಕ್ಕೆ ಜನರು ಸಾಯುತ್ತಿದ್ದರೂ ಗಂಭೀರವಾಗಿ ಪರಿಗಣಿಸಲಿಲ್ಲ. ವಿದ್ಯಾರ್ಥಿವೇತನ, ಹಾಲಿನ ಪ್ರೋತ್ಸಾಹ ಧನ ನೀಡಲು ಹಣವಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮ ಸೇರಿದಂತೆ ಹಗರಣಗಳ ಸರಮಾಲೆಯನ್ನೇ ಬೆನ್ನಿಗೆ ಇಟ್ಟುಕೊಂಡಿದ್ದರೂ, ರಾಜ್ಯಪಾಲರ ಮೂಲಕ ತನಗೆ ತಾನೆ ಮೆಚ್ಚುಗೆ ಪಡೆದುಕೊಳ್ಳುವ ಪ್ರಯತ್ನ ಮಾಡಿದೆ ಎಂದರು.

ಸಾಮಾನ್ಯವಾಗಿ ರಾಜ್ಯಪಾಲರ ಭಾಷಣ ಸರ್ಕಾರದ ಒಂದು ವರ್ಷದ ಸಾಧನೆ ಮತ್ತು ಮುಂದಿನ ವರ್ಷಕ್ಕೆ ಇರಬೇಕಾದ ಮುನ್ನೋಟದ ಗುರಿ ಒಳಗೊಂಡಿರುತ್ತದೆ. ಆದರೆ, ಈ ಬಾರಿಯ ಭಾಷಣದಲ್ಲಿ ಯಾವ ದೂರದೃಷ್ಟಿಯೂ ಇಲ್ಲ. ರಾಜ್ಯಪಾಲರನ್ನೇ ಸರ್ಕಾರ ದಾರಿ ತಪ್ಪಿಸಿದೆ. ಇಷ್ಟೊಂದು ನೀರಸ ಭಾಷಣವನ್ನು ಎಂದೂ ಕೇಳಿರಲಿಲ್ಲ ಎಂದು ಟೀಕಿಸಿದರು.

‘ಸರ್ಕಾರದ ಬೋಲ್ಟ್ ಸಡಿಲವಾಗಿದೆ’

ಅಭಿವೃದ್ಧಿ ವಿಷಯದಲ್ಲಿ ರಾಜ್ಯ ಸರ್ಕಾರದ ನಟ್ ಮತ್ತು ಬೋಲ್ಟ್ ಸಡಿಲವಾಗಿರುವುದು ರಾಜ್ಯಪಾಲರ ಭಾಷಣದಲ್ಲೂ ಸ್ಪಷ್ಟವಾಗಿ ಗೋಚರಿಸುತ್ತದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದರು.

ಹಾಲಿನ ಪ್ರೋತ್ಸಾಹಧನ ಬಾಕಿ ಉಳಿಸಿಕೊಂಡಿದ್ದಾರೆ. ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ₹90 ಸಾವಿರ ಕೋಟಿ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಎರಡು ವರ್ಷಗಳಲ್ಲಿ ಎಷ್ಟು ಮೀಸಲಿಟ್ಟಿದ್ದಾರೆ? ಎಷ್ಟು ಖರ್ಚಾಗಿದೆ ಎಂದು ಪ್ರಶ್ನಿಸಿದರು.

ಸರ್ಕಾರ ತನ್ನ ಹುಸಿ ಸಾಧನೆಯನ್ನು ಬಿಂಬಿಸಿಕೊಳ್ಳಲು ರಾಜ್ಯಪಾಲರ ಸಮಯವನ್ನು ವ್ಯರ್ಥ ಮಾಡಿದೆ ಎಂದು ದೂರಿದರು.

ಕೇವಲ ಸುಳ್ಳುಗಳನ್ನು ಪಟ್ಟಿ ಮಾಡಿ, ಅದನ್ನೇ ರಾಜ್ಯಪಾಲರ ಮೂಲಕ ಹೇಳಿಸಿದೆ. ಪಾಪರ್ ಚೀಟಿಯ ಸರ್ಕಾರ ಎನ್ನುವುದು ಸಾಬೀತಾಗಿದೆ

ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ವಿಪಕ್ಷ ನಾಯಕ

ಸಿಎಲ್‌ಪಿ ಮಾರ್ಚ್ 10ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳವಾರ (ಮಾರ್ಚ್ 4) ನಡೆಯಬೇಕಿದ್ದ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯನ್ನು ಮಾರ್ಚ್ 10ಕ್ಕೆ ಮುಂದೂಡಲಾಗಿದೆ.

ಈ ಕುರಿತು ಪ್ರಕಟಣೆ ನೀಡಿರುವ ಕೆಪಿಸಿಸಿ, ಅನಿವಾರ್ಯ ಕಾರಣಗಳಿಂದ ಸಭೆ ಮುಂದೂಡಲಾಗಿದೆ ಎಂದು ತಿಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 7ರಂದು ಬಜೆಟ್ ಮಂಡಿಸಲಿದ್ದಾರೆ. ಆ ಬಳಿಕವೇ ಸಭೆ ನಡೆಸುವುದು ಸೂಕ್ತವೆಂಬ ಕಾರಣಕ್ಕೆ ಮುಂದೂಡಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವಂತೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರು ಆಗ್ರಹಿಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ, ಬಜೆಟ್‌ನಲ್ಲಿಯೇ ವಿಧಾನಸಭಾ ಕ್ಷೇತ್ರವಾರು ಅನುದಾನ ಹಂಚಿಕೆಯ ಕುರಿತು ಪ್ರಸ್ತಾಪಿಸುವ ಸಾಧ್ಯತೆಯಿದೆ. ಹೀಗಾಗಿ, ಬಜೆಟ್ ಬಳಿಕ ಶಾಸಕರ ಸಭೆ ನಡೆಸಲು ಮುಖ್ಯಮಂತ್ರಿ ಮುಂದಾಗಿದ್ದಾರೆ ಎಂದು ಗೊತ್ತಾಗಿದೆ.

ರಾಜ್ಯಪಾಲರಿಗೆ ಅವಮಾನ ಬಿಜೆಪಿ–ಜೆಡಿಎಸ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲರಿಗೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅಪಮಾನ ಮಾಡಿದೆ ಎಂದು ಆರೋಪಿಸಿ, ಬಿಜೆಪಿ-ಜೆಡಿಎಸ್ ಶಾಸಕರು ಸೋಮವಾರ ಪ್ರತಿಭಟನಾ ಪಾದಯಾತ್ರೆ ನಡೆಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ನೇತೃತ್ವದಲ್ಲಿ ಎರಡೂ ಪಕ್ಷಗಳ ಶಾಸಕರು, ವಿಧಾನ ಪರಿಷತ್ ಸದಸ್ಯರು ಶಾಸಕರ ಭವನದಿಂದ ವಿಧಾನ ಸೌಧದವರೆಗೆ ಪಾದಯಾತ್ರೆಯಲ್ಲಿ ಸಾಗಿದರು.


ರಾಜ್ಯಪಾಲರ ಸಂವಿಧಾನ ಬದ್ಧ ಅಧಿಕಾರವನ್ನು ಹೈಕೋರ್ಟ್ ಎತ್ತಿ ಹಿಡಿದಿದ್ದರೂ, ಕಾಂಗ್ರೆಸ್ ನಾಯಕರು ಅದನ್ನು ಸಹಿಸದೆ ವಿಶ್ವವಿದ್ಯಾಲಯಗಳ ಕುಲಾಧಿಪತಿ ಸ್ಥಾನಕ್ಕೆ ಕತ್ತರಿ ಹಾಕಲು ಹೊರಟಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಪಾಲರ ಹುದ್ದೆಗೆ ಕಳಂಕ ತರುತ್ತಿದ್ದಾರೆ. ರಾಷ್ಟ್ರಪತಿ, ರಾಜ್ಯಪಾಲರು, ನ್ಯಾಯಾಲಯ, ಜಾರಿ ನಿರ್ದೇಶನಾಲಯ, ಸಿಬಿಐ ವಿರೋಧಿ ಮನೋಸ್ಥಿತಿಯನ್ನು ಕಾಂಗ್ರೆಸ್ ಹೊಂದಿದೆ. ನೀಚ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ, ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣಾ ಬರಹಗಳನ್ನು ಒಳಗೊಂಡ ಭಿತ್ತಿಫಲಕ ಪ್ರದರ್ಶಿಸಿದರು.



ರಾಜ್ಯಪಾಲರಿಗೆ ರಾಜ್ಯ ಸರ್ಕಾರ ಅಪಮಾನ ಮಾಡಿದೆ ಎಂದು ಆರೋಪಿಸಿ ಬಿಜೆಪಿ–ಜೆಡಿಎಸ್ ಶಾಸಕರು ಶಾಸಕರ ಭವನದಿಂದ ವಿಧಾನಸೌಧದವರೆಗೆ ಪ್ರತಿಭಟನಾ ಪಾದಯಾತ್ರೆ ನಡೆಸಿದರು – ಪ್ರಜಾವಾಣಿ ಚಿತ್ರ

ವಿಪಕ್ಷ ಮುಖ್ಯ ಸಚೇತಕರಾಗಿ ರವಿಕುಮಾರ್

ಬೆಂಗಳೂರು: ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಬಿಜೆಪಿಯ ಎನ್. ರವಿಕುಮಾರ್ ಅವರನ್ನು ನೇಮಕ ಮಾಡಲಾಗಿದೆ.



ರವಿಕುಮಾರ್

ರವಿಕುಮಾರ್ ಅವರನ್ನು ಮುಖ್ಯ ಸಚೇತಕರಾಗಿ ನೇಮಿಸುವಂತೆ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಪರಿಷತ್ ವಿರೋಧ ಪಕ್ಷದ ನಾಯಕ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ಪತ್ರ ಬರೆದಿದ್ದರು. ಅದರನ್ವಯ ಹೊರಟ್ಟಿ ಅವರು ಸದನದಲ್ಲಿ ಈ ಕುರಿತು ಸೋಮವಾರ ಪ್ರಕಟಣೆ ನೀಡಿದರು.

‘ಸಿಬಿಐ, ಇಡಿ ಬಳಸಿ ಬೆದರಿಕೆಯೊಡ್ಡದ ಸಿಂಗ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಸೇರಿದಂತೆ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸುವ ನಿರ್ಣಯವನ್ನು ಬೆಂಬಲಿಸಿ ವಿಧಾನ ಸಭೆಯಲ್ಲಿ ಸೋಮವಾರ ಮಾತನಾಡಿದ ಜೆಡಿಎಸ್‌ನ ಜಿ.ಟಿ. ದೇವೇಗೌಡ ಮತ್ತು ಬಿಜೆಪಿಯ ಎಸ್.ಟಿ. ಸೋಮಶೇಖರ್ ಅವರು ಕಾಂಗ್ರೆಸ್ ನಾಯಕರನ್ನು ಕೊಂಡಾಡಿದರು.



ಸೋಮಶೇಖರ್



ಜಿ.ಟಿ. ದೇವೇಗೌಡ

ತಾವು ಕಾಂಗ್ರೆಸ್‌ನಲ್ಲಿದ್ದಾಗ ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಮನಮೋಹನ್ ಸಿಂಗ್ ಅವರನ್ನು ಭೇಟಿ ಮಾಡುತ್ತಿದ್ದುದ್ದನ್ನು ನೆನಪಿಸಿಕೊಂಡ ಸೋಮಶೇಖರ್ ಅವರು, ‘ಮನಮೋಹನಸಿಂಗ್ ಅವರು ಹತ್ತು ವರ್ಷ ಅವಧಿಗೆ ದೇಶದ ಪ್ರಧಾನಿಯಾಗಿದ್ದರು. ಆಗ ಒಮ್ಮೆಯೂ ಒಬ್ಬ ರಾಜಕಾರಣಿಯ ಮೇಲೂ ಸಿಬಿಐ, ಜಾರಿ ನಿರ್ದೇಶನಾಲಯದ ದಾಳಿ ಮಾಡಿಸಿ ಬೆದರಿಸಿರಲಿಲ್ಲ’ ಎಂದು ಹೇಳಿದರು.

‘2004ರಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಪ್ರಧಾನಿ ಆಗುತ್ತಾರೆ ಎಂದು ಇಡೀ ದೇಶವೇ ನೋಡುತ್ತಿತ್ತು. ಆದರೆ, ಅವರು ಅಧಿಕಾರಕ್ಕೇರಲು ನಿರಾಕರಿಸಿ ಮನಮೋಹನ್ ಸಿಂಗ್ ಎಂಬ ಮೇಧಾವಿ ವ್ಯಕ್ತಿಯನ್ನು ಪ್ರಧಾನಿಯನ್ನಾಗಿ ಮಾಡಿದರು. ಇದಕ್ಕಾಗಿ ಇಡೀ ದೇಶ ಸೋನಿಯಾ ಗಾಂಧಿ ಅವರಿಗೆ ಕೃತಜ್ಞತೆ ಸಲ್ಲಿಸಬೇಕು’ ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ನಿಲುವಳಿ ಸೂಚನೆ ಮಂಡಿಸಲು ಬಿಜೆಪಿ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದು, ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಅಕ್ರಮ, ಮೈಸೂರು ಉದಯಗಿರಿಯಲ್ಲಿ ಪೊಲೀಸ್ ಠಾಣೆಯ ಮೇಲಿನ ದಾಳಿ ವಿಚಾರವಾಗಿ ವಿಧಾನಮಂಡಲದ ಉಭಯ ಸದನಗಳಲ್ಲಿ ನಿಲುವಳಿ ಸೂಚನೆ ಮಂಡಿಸಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

ಬಿಜೆಪಿ ಶಾಸಕಾಂಗ ಪಕ್ಷದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಒಟ್ಟು ನಾಲ್ಕರಿಂದ ಐದು ವಿಷಯಗಳಿಗೆ ಸಂಬಂಧಿಸಿದಂತೆ ನಿಲುವಳಿ ಸೂಚನೆ ಮಂಡಿಸಲು ಸಭೆಯಲ್ಲಿ ನಿರ್ಧರಿಸಿದ್ದೇವೆ’ ಎಂದರು.

‘ಸರ್ಕಾರದ ತಪ್ಪುಗಳು, ಭ್ರಷ್ಟಾಚಾರ, ಅನುದಾನದ ಕೊರತೆ, ಬಗರ್‌ಹುಕುಂ ಅರ್ಜಿಗಳನ್ನು ತಿರಸ್ಕರಿಸುತ್ತಿರುವುದೂ ಸೇರಿ ಜ್ವಲಂತ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತೇವೆ. ಪ್ರತಿ ದಿನವೂ ಎಲ್ಲ ಶಾಸಕರೂ ಕಲಾಪದಲ್ಲಿ ಹಾಜರಿದ್ದು, ಸರ್ಕಾರಕ್ಕೆ ಬಿಸಿ ಮುಟ್ಟಿಸುವ ಕೆಲಸ ಮಾಡಬೇಕೆಂದು ಹೇಳಿದ್ದೇವೆ. ಸದನದ ಒಳಗೆ ಮತ್ತು ಹೊರಗೆ ಬಿಜೆಪಿ ಹೋರಾಟ ನಡೆಸಲಿದೆ’ ಎಂದು ಅವರು ಹೇಳಿದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ದಲಿತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡುವ ಮೂಲಕ ದಲಿತರ ಸಮಾಧಿ ಕಟ್ಟಲು ಸರ್ಕಾರ ಹೊರಟಿದೆ. ಈ ವಿಷಯವನ್ನು ಮೇಲ್ಮನೆಯಲ್ಲಿ ಪ್ರಸ್ತಾಪಿಸುತ್ತೇವೆ’ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ‘ಈ ಅಧಿವೇಶನವನ್ನು ಎಲ್ಲರೂ ಗಂಭೀರವಾಗಿ ತೆಗೆದುಕೊಳ್ಳಬೇಕು. ಚರ್ಚೆಯಲ್ಲಿ ಎಲ್ಲ ಸದಸ್ಯರೂ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಸರ್ಕಾರವನ್ನು ಕಟ್ಟಿ ಹಾಕುವ ಕೆಲಸ ಮಾಡಬೇಕು ಎಂದು ಶಾಸಕಾಂಗ ಪಕ್ಷದ ಸಭೆಯಲ್ಲಿ ಹೇಳಿದ್ದೇವೆ’ ಎಂದರು.

‘ಸರ್ಕಾರದ ಬಳಿ ಹಣ ಇಲ್ಲದ ಕಾರಣ 9 ವಿಶ್ವವಿದ್ಯಾಲಯಗಳನ್ನು ಮುಚ್ಚಲು ಹೊರಟಿದ್ದಾರೆ. ಅಲ್ಲದೇ, ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯ ಮುಚ್ಚಿ ಮಂಡ್ಯಕ್ಕೆ ಸ್ಥಳಾಂತರ ಮಾಡಲು ಹೊರಟಿದ್ದಾರೆ. ಯಾವುದೇ ವಿಶ್ವವಿದ್ಯಾಲಯಗಳನ್ನು ಮುಚ್ಚಲು ಬಿಡುವುದಿಲ್ಲ’ ಎಂದರು.

ಯತ್ನಾಳ ಬಣ ಗೈರು

‘ಯತ್ನಾಳ’ ಬಣದಲ್ಲಿ ಗುರುತಿಸಿಕೊಂಡಿರುವ ಹರಿಹರ ಶಾಸಕ ಬಿ.ಪಿ.ಹರೀಶ್ ಮಾತ್ರ ಶಾಸಕಾಂಗ ಪಕ್ಷದ ಸಭೆಗೆ ಹಾಜರಾಗಿದ್ದರು. ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ, ಮಂಜುಳಾ ಅರವಿಂದ ಲಿಂಬಾವಳಿ ಭಾಗವಹಿಸಿರಲಿಲ್ಲ. ಬಿಜೆಪಿಯಿಂದ ಒಂದು ಕಾಲು ಹೊರಗೆ ಇಟ್ಟಿರುವ ಶಾಸಕರಾದ ಎಸ್.ಟಿ.ಸೋಮಶೇಖರ್, ಶಿವರಾಮ್ ಹೆಬ್ಬಾರ್ ಅವರೂ ಗೈರಾಗಿದ್ದರು.

ಪುಸ್ತಕ ಖರೀದಿ: ಪ್ರತ್ಯೇಕ ಅನುದಾನಕ್ಕೆ ಶಾಸಕರ ಆಗ್ರಹ

ಬೆಂಗಳೂರು: ಸರ್ಕಾರಿ ಶಾಲೆಗಳಿಗೆ ಪೂರೈಸಲು ಪುಸ್ತಕ ಖರೀದಿಗಾಗಿ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಬಳಸುವ ಬದಲಿಗೆ ಪ್ರತ್ಯೇಕವಾಗಿ ವಿಶೇಷ ಅನುದಾನ ಒದಗಿಸುವಂತೆ ಶಾಸಕರು ವಿಧಾನಸಭೆಯಲ್ಲಿ ಸೋಮವಾರ ಆಗ್ರಹಿಸಿದರು.

ವಿಧಾನಸಭೆಯ ಸಚಿವಾಲಯದಿಂದ ಪುಸ್ತಕ ಮೇಳ ಆಯೋಜಿಸಿರುವ ವಿಷಯವನ್ನು ಸದನದಲ್ಲಿ ಪ್ರಕಟಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, ‘ಎಲ್ಲ ಶಾಸಕರೂ ಮೇಳದಲ್ಲಿನ ಪುಸ್ತಕ ಮಳಿಗೆಗಳಿಗೆ ಭೇಟಿ ಕೊಡಿ. ₹ 2 ಲಕ್ಷದವರೆಗೂ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಅನುದಾನದಲ್ಲಿ ಪುಸ್ತಕ ಖರೀದಿಗೆ ಅನುಮತಿ ನೀಡಿ ಆದೇಶ ಹೊರಡಿಸಲಾಗಿದೆ. ನೀವು ಪುಸ್ತಕಗಳ ಪಟ್ಟಿ ಮಾಡಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ. ಅವರು ನೇರವಾಗಿ ಪ್ರಕಾಶಕರಿಂದ ತರಿಸಿ, ಶಾಲೆ ಕಾಲೇಜುಗಳಿಗೆ ಪೂರೈಸುತ್ತಾರೆ’ ಎಂದರು.

ಆಗ ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಅನುದಾನವನ್ನು ಬಳಸಿ ಎಂದು ಹೇಳುವುದು ಸರಿಯಲ್ಲ. ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ, ಪುಸ್ತಕ ಖರೀದಿಗೆ ಶಾಸಕರಿಗೆ ತಲಾ ₹ 2 ಲಕ್ಷ ವಿಶೇಷ ಅನುದಾನ ಒದಗಿಸಿ’ ಎಂದು ಒತ್ತಾಯಿಸಿದರು. ಅವರ ಮಾತಿಗೆ ಹಲವು ಶಾಸಕರು ದನಿಗೂಡಿಸಿದರು.

ಮತ್ತೆ ಮುನ್ನಲೆಗೆ ಬಂದ ‘ಅಧಿಕಾರ ಹಂಚಿಕೆ’ ವಿಚಾರ

‘ಕೈ’ಯಲ್ಲಿ ವೀರಪ್ಪ ಮೊಯಿಲಿ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿ.ಕೆ. ಶಿವಕುಮಾರ್ ಸದ್ಯದಲ್ಲೇ ಮುಖ್ಯಮಂತ್ರಿ ಆಗಬೇಕು’ ಎಂಬ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಹೇಳಿಕೆಯು ಅಧಿಕಾರ ಹಂಚಿಕೆ ಮತ್ತು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರವನ್ನು ಮತ್ತೆ ಮುನ್ನಲೆಗೆ ತಂದಿದೆ. ಮೊಯಿಲಿ ಹೇಳಿಕೆ ‘ಕೈ’ಯಲ್ಲಿ ಕಿಡಿ ಹೊತ್ತಿಸಿದೆ.



ವೀರಪ್ಪ ಮೊಯಿಲಿ

ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಭಾನುವಾರ ಮಾತನಾಡಿದ್ದ ಮೊಯಿಲಿ, ‘ಸಂಕಷ್ಟದಲ್ಲಿದ್ದ ಪಕ್ಷವನ್ನು ಶಿವಕುಮಾರ್ ಮೇಲಕ್ಕೆತ್ತಿದ್ದರು. ಯಾರು ಏನೇ ಮಾಡಿದರೂ ಅವರಿಗೆ ಮುಖ್ಯಮಂತ್ರಿ ಹುದ್ದೆ ತಪ್ಪಿಸಲು ಸಾಧ್ಯವಿಲ್ಲ‘ ಎಂದಿದ್ದರು.

ಈ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರ ಆಪ್ತ, ಸಹಕಾರ ಸಚಿವ ಕೆ.ಎನ್. ರಾಜಣ್ಣ, ‘ಮೊಯಿಲಿ ಪಕ್ಷದ ಹಿರಿಯ ನಾಯಕರು. ಅವರು ಮತ್ತು ಇನ್ನೊಬ್ಬ ಶಾಸಕ ಕೂಡಾ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದೆಲ್ಲ ಅವರ ವೈಯಕ್ತಿಕ ಅಭಿಪ್ರಾಯ. ಯಾರೇ ಅಭಿಪ್ರಾಯ ವ್ಯಕ್ತಪಡಿಸಿದರೂ ಅಂತಿಮವಾಗಿ ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ನಿರ್ಣಯ ಆಗುತ್ತದೆ’ ಎಂದರು.

‘ಮಾನದಂಡ ಎಲ್ಲರಿಗೂ ಒಂದೇ ಇರಬೇಕಲ್ಲವೇ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ಅವರೂ (ಮೊಯಿಲಿ) ಮಾತನಾಡಿದ್ದಾರೆ. ಬೇರೆಯವರೂ ಮಾತನಾಡಿದ್ದಾರೆ. ಆದರೆ, ನಾವು ಮಾತನಾಡುವಾಗ ಏನೇನೊ ಹೇಳುತ್ತಿದ್ದರು’ ಎಂದರು. ‘ಈ ವಿಚಾರದಲ್ಲಿ ಅಂತಿಮ ನಿರ್ಧಾರ ಹೈಕಮಾಂಡ್‌ಗೆ ಬಿಟ್ಟಿದ್ದು’ ಎಂದೂ ಹೇಳಿದರು.

ಹೈಕಮಾಂಡ್ ಜೊತೆ ಮಾತನಾಡಲಿ: ‘ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ಯಾರಿಗಾದರೂ ಸಮಸ್ಯೆಗಳಿದ್ದರೆ ಅವರು ದೆಹಲಿಗೆ ಹೋಗಿ ಹೈಕಮಾಂಡ್ ಜೊತೆ ಮಾತನಾಡಲಿ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

‘ಶಿವಕುಮಾರ್ ಇವತ್ತು ಅಥವಾ ನಾಳೆ ಮುಖ್ಯಮಂತ್ರಿ ಆಗುತ್ತಾರೆಂದು ಮೊಯಿಲಿಯವರಾಗಲಿ, ಬೇರೆಯವರಾಗಲಿ ಹೇಳಿಲ್ಲ. ಮುಂದೊಂದು ದಿನ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ಅದನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎಂದಿದ್ದಾರೆ. ಈಗ ಸಿದ್ದರಾಮಯ್ಯನವರು ಮುಖ್ಯಮಂತ್ರಿ, ಶಿವಕುಮಾರ್ ಉಪ ಮುಖ್ಯಮಂತ್ರಿ. ಸದ್ಯಕ್ಕೆ ಕುರ್ಚಿಗಳು ಖಾಲಿ ಇಲ್ಲ. ಮುಂದೊಂದು ದಿನ ಯಾರಾದರೂ ಮುಖ್ಯಮಂತ್ರಿ ಆಗಬೇಕೆಂದು ನಾನು ಬಯಸಬಹುದು. ಹೈಕಮಾಂಡ್ ನೀಡಿರುವ ಜವಾಬ್ದಾರಿಗಳನ್ನು ಎಲ್ಲರೂ ನಿಭಾಯಿಸಬೇಕು’ ಎಂದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್, ‘ಮೊಯಿಲಿಯವರು ಈ ರೀತಿ ಹೇಳಿಕೆ ನೀಡಿದ್ದರೆ, ಅವರನ್ನೇ ಕೇಳಬೇಕು. ಏಕೆಂದರೆ, ನಾವು ಯಾವಾಗಲೂ ಹೈಕಮಾಂಡ್ ಆದೇಶವನ್ನು ಅನುಸರಿಸುತ್ತೇವೆ. ಹೈಕಮಾಂಡ್ ಏನೇ ಹೇಳಿದರೂ ಅದು ನಮಗೆ ಅಂತಿಮ’ ಎಂದರು.

ದಾವಣಗೆರೆಯಲ್ಲಿ ಭಾನುವಾರ ಮಾತನಾಡಿದ್ದ ಚನ್ನಗಿರಿ ಕಾಂಗ್ರೆಸ್ ಶಾಸಕ ಬಸವರಾಜ ಶಿವಗಂಗಾ, ‘ ಶಿವಕುಮಾರ್ ಮುಖ್ಯಮಂತ್ರಿ ಆಗುವುದು ಪಕ್ಕಾ. ನಾನು ಬೇಕಾದರೆ ರಕ್ತದಲ್ಲಿ ಬರೆದು ಕೊಡುತ್ತೇನೆ’ ಎಂದಿದ್ದರು.

ಯಾರು ಏನು ಹೇಳುತ್ತಾರೆ ಎನ್ನುವುದಲ್ಲ. ಹೈಕಮಾಂಡ್ ಏನು ಹೇಳುತ್ತದೊ ಅದನ್ನು ನಾನು ಕೇಳುತ್ತೇನೆ. ಹೈಕಮಾಂಡ್ ನಿರ್ದೇಶನದಂತೆ ನಡೆದುಕೊಳ್ಳುತ್ತೇನೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಖರ್ಗೆ ಮಾತಿಗೆ ಬದ್ಧ– ಡಿಕೆಶಿ

‘ಅಧಿಕಾರ ಹಂಚಿಕೆ ವಿಚಾರವಾಗಿ ಚರ್ಚೆ ಮಾಡದಂತೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಸೂಚನೆ ನೀಡಿದ್ದಾರೆ. ನಾನು ಅವರ ಮಾತಿಗೆ ಬದ್ಧನಾಗಿದ್ದೇನೆ’ ಎಂದು ಉಪ ಮುಖ್ಯಮಂತ್ರಿ ಶಿವಕುಮಾರ್ ಹೇಳಿದರು.

ವೀರಪ್ಪ ಮೊಯಿಲಿ ಹೇಳಿಕೆ ಬಗ್ಗೆ ಕೇಳಿದಾಗ, ‘ಮೊಯಿಲಿಯವರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ನಾನು ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಅದರ ಅಗತ್ಯ ಇಲ್ಲ’ ಎಂದರು.

ಖಾಸಗಿ ಬಡಾವಣೆ ಅನುಮೋದನೆಗೆ ಸಮ್ಮತಿ ಅಗತ್ಯ: ಸಚಿವ ಸುರೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡುವ ಮೊದಲು ಸರ್ಕಾರದಿಂದ ಸಮ್ಮತಿ ಪಡೆಯಬೇಕು’ ಎಂದು ನಗರಾಭಿವೃದ್ಧಿ ಪ್ರಾಧಿಕಾರಗಳ ಮತ್ತು ನಗರ ಯೋಜನಾ ಪ್ರಾಧಿಕಾರಗಳ ಅಧಿಕಾರಿಗಳಿಗೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಸೂಚಿಸಿದ್ದಾರೆ.



ಬೈರತಿ ಸುರೇಶ್

ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಯೋಜನಾ ಪ್ರಾಧಿಕಾರಗಳ ಪ್ರಗತಿ ಪರಿಶೀಲನೆಯನ್ನು ಸೋಮವಾರ ನಡೆಸಿದ ಅವರು, ‘ಖಾಸಗಿಯವರು ಬಡಾವಣೆಗಳನ್ನು ನಿರ್ಮಿಸಲು ಸಾಧ್ಯವಾಗುವುದಾದರೆ, ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಈ ಕೆಲಸ ಯಾಕೆ ಆಗುವುದಿಲ್ಲ’ ಎಂದು ಪ್ರಶ್ನಿಸಿದರು.

‘ಪ್ರಾಧಿಕಾರಗಳು ಬಡಾವಣೆಗಳನ್ನು ನಿರ್ಮಿಸಿ ಕೈಗೆಟುಕುವ ದರದಲ್ಲಿ ಜನಸಾಮಾನ್ಯರಿಗೆ ನಿವೇಶನಗಳು ಸಿಗುವಂತಾಗಬೇಕೆಂಬ ಉದ್ದೇಶದಿಂದ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ರಚಿಸಲಾಗಿದೆ. ರೈತರ ಮನವೊಲಿಸಿ 50:50 ಅನುಪಾತದಲ್ಲಿ ಜಮೀನು ಅಭಿವೃದ್ಧಿಪಡಿಸಿ, ಸಾಮಾನ್ಯ ಜನರಿಗೆ ಲಭ್ಯವಾಗುವಂತೆ ಮಾಡುವುದು ಪ್ರಾಧಿಕಾರಗಳ ಕೆಲಸ. ಖಾಸಗಿ ಬಡಾವಣೆಗಳ ನಿರ್ಮಾಣ ಮತ್ತು ನಕ್ಷೆ ಅನುಮೋದನೆ ನೀಡುವುದಷ್ಟೆ ಅಲ್ಲ’ ಎಂದು ಖಾರವಾಗಿ ಹೇಳಿದರು.

‘ಖಾಸಗಿಯಾಗಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಬಡಾವಣೆ ನಿರ್ಮಾಣಕ್ಕೆ ಬೇರೆ ಬೇರೆ ನಿಯಮಗಳಿವೆ. ಎರಡಕ್ಕೂ ಅನ್ವಯವಾಗುವಂತೆ ನಿಯಮಾವಳಿಗಳಿಗೆ ತಿದ್ದುಪಡಿ ತರಬೇಕು’ ಎಂದು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗೆ ಸಚಿವರು ಸೂಚಿಸಿದರು.

‘ಜಮೀನು ಕೊಡಲು ಮುಂದೆ ಬರುವ ರೈತರನ್ನು ಸಂಪರ್ಕಿಸಬೇಕು ಅಥವಾ ರೈತರ ಮನವೊಲಿಸಿ ಜಮೀನು ಪಡೆಯಬೇಕು. ಇದು ಸಾಧ್ಯವಾಗದ ಸಂದರ್ಭದಲ್ಲಿ ಜಮೀನು ಸ್ವಾಧೀನ ಪಡಿಸಿಕೊಳ್ಳಲು ಅವಕಾಶವಿದೆ. ಈ ದಾರಿಗಳನ್ನು ಬಳಸಿಕೊಂಡು ಬಡಾವಣೆಗಳನ್ನು ನಿರ್ಮಿಸಬೇಕು. ಪ್ರಾಧಿಕಾರಗಳಲ್ಲಿ ಹೆಚ್ಚಿನ ಹಣವಿದೆ ಎಂದು ಬ್ಯಾಂಕುಗಳಲ್ಲಿ ಠೇವಣಿ ಇಡಬಾರದು. ಆ ಮೊತ್ತದಲ್ಲಿ ಬಡಾವಣೆಗಳನ್ನು ನಿರ್ಮಿಸಬೇಕು’ ಎಂದು ಸೂಚಿಸಿದರು.

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ದೀಪಾ ಚೋಳನ್, ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಆಯುಕ್ತ ಎನ್. ವೆಂಕಟಾಚಲಪತಿ, ನಿರ್ದೇಶಕ ತಿಪ್ಪೇಸ್ವಾಮಿ ಸಭೆಯಲ್ಲಿದ್ದರು.

‘ಪ್ರಾಧಿಕಾರಗಳಿಗೆ ಏಕೆ ಸಾಧ್ಯವಾಗುತ್ತಿಲ್ಲ’

‘ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ ಅನ್ವಯ ಖಾಸಗಿ ಬಡಾವಣೆಗಳಲ್ಲಿಯೂ ನಾಗರಿಕ ಸೌಲಭ್ಯ (ಸಿಎ) ನಿವೇಶನ ಮೀಸಲು, ಒಳಚರಂಡಿ ವ್ಯವಸ್ಥೆ, ಉದ್ಯಾನವನ, ರಸ್ತೆಗಳ ನಿರ್ಮಾಣಕ್ಕೆ ನಿಯಮ ರೂಪಿಸಲು ಸಾಧ್ಯವಿದೆ’ ಎಂದು ಬೈರತಿ ಸುರೇಶ್ ಹೇಳಿದರು.

‘ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಯೋಜನಾ ಪ್ರಾಧಿಕಾರಗಳ ವತಿಯಿಂದ ಬಡಾವಣೆಗಳು ನಿರ್ಮಾಣವಾದರೆ, ಆ ಜಮೀನುಗಳ ನಕ್ಷೆ ಕಾನೂನು ರೀತಿಯಲ್ಲಿರುತ್ತದೆ. ಖಾಸಗಿಯವರು ಬಡಾವಣೆಗಳನ್ನು ನಿರ್ಮಿಸಿ ಸಾವಿರಾರು ನಿವೇಶನಗಳನ್ನು ಮಾರಾಟ ಮಾಡಿ ಹೆಚ್ಚಿನ ಹಣ ಗಳಿಸುವಾಗ ಪ್ರಾಧಿಕಾರಗಳ ಆಯುಕ್ತರು ಮತ್ತು ನಗರ ಯೋಜಕ ಸದಸ್ಯರಿಂದ ಏಕೆ ಸಾಧ್ಯವಾಗುತ್ತಿಲ್ಲ’ ಎಂದು ಅವರು ಪ್ರಶ್ನಿಸಿದರು.

ಹೆದ್ದಾರಿ ಅಪಘಾತ: ಒಂದೇ ಕುಟುಂಬದ ನಾಲ್ವರು ಸಾವು

ಬಂಗಾರಪೇಟೆ (ಕೋಲಾರ): ತಾಲ್ಲೂಕಿನ ಕುಪ್ಪನಹಳ್ಳಿ ಬಳಿ ನೂತನ ಚೆನ್ನೈ-ಬೆಂಗಳೂರು ಎಕ್ಸ್‌ಪ್ರೆಸ್ ಕಾರಿಡಾರ್ ಹೆದ್ದಾರಿಯಲ್ಲಿ ಭಾನುವಾರ ರಾತ್ರಿ ಕಾರು ಮತ್ತು ಬೈಕ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಎಂಟು ತಿಂಗಳ ಗರ್ಭಿಣಿಯ ಗರ್ಭದಲ್ಲಿದ್ದ ಭ್ರೂಣ ಸೇರಿ ಐವರು ಮೃತಪಟ್ಟಿದ್ದಾರೆ.

ಮೃತಪಟ್ಟವರಲ್ಲಿ ನಾಲ್ವರು ಒಂದೇ ಕುಟುಂಬದವರು. ಗರ್ಭಿಣಿ ಸೇರಿ ಉಳಿದ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದು ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಸೇರಿಸಲಾಗಿದೆ.

ಬೈಕ್ ಸವಾರ ಬಂಗಾರಪೇಟೆ ತಾಲ್ಲೂಕಿನ ದೊಡ್ಡೂರು ಗ್ರಾಮದ ಶ್ರೀನಾಥ್ (30) ಮೃತಪಟ್ಟಿದ್ದಾರೆ. ಎಕ್ಸ್‌ಪ್ರೆಸ್ ಕಾರಿಡಾರ್ ವೇ ಕಾಮಗಾರಿ ಈಚೆಗೆ ತಾನೇ ಪೂರ್ಣಗೊಂಡಿದ್ದು, ಇನ್ನೂ ಉದ್ಘಾಟನೆ ಆಗಿಲ್ಲ. ತಮಿಳನಾಡು ಭಾಗದಲ್ಲಿ ಕೆಲಸ ನಡೆಯುತ್ತಿದೆ.

ಗುತ್ತಿಗೆದಾರರ ಸಂಘದ ಪದಾಧಿಕಾರಿಗಳಿಗೆ ಮುಖ್ಯಮಂತ್ರಿ ಭರವಸೆ

ಹಣಕಾಸು ಸ್ಥಿತಿ ಆಧರಿಸಿ ಬಿಲ್ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಅವಲೋಕಿಸಿ ಗುತ್ತಿಗೆದಾರರ ಬಾಕಿ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಾಕಿ ಇರುವ ಬಿಲ್‌ನ ಅರ್ಧದಷ್ಟನ್ನು ತಕ್ಷಣ ಪಾವತಿಸಲು ಈ ಬಜೆಟ್‌ನಲ್ಲೇ ಅನುದಾನ ಒದಗಿಸುವಂತೆ ಗುತ್ತಿಗೆದಾರರ ಸಂಘದವರು ಒತ್ತಾಯಿಸಿದ್ದಾರೆ. ಹಾಗೆಲ್ಲಾ ಮಾಡಲು ಸಾಧ್ಯವಾಗುವುದಿಲ್ಲ. ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ತೀರ್ಮಾನಿಸಬೇಕಾಗುತ್ತದೆ' ಎಂದರು.

'ಲಂಚ ಕೊಡುವುದೂ ಅಪರಾಧ'

'ಲಂಚ ಪಡೆಯುವುದು ಹಾಗೂ ಲಂಚ ಕೊಡುವುದು ಎರಡೂ ಸಹ ಅಪರಾಧ. ಈ ರೀತಿಯ ಕೃತ್ಯದಲ್ಲಿ ಯಾರೂ ತೊಡಗಬಾರದು' ಎಂದು ಸಿದ್ದರಾಮಯ್ಯ ಹೇಳಿದರು.

'ಅಧಿಕಾರಿಗಳ ಹಂತದಲ್ಲಿ ಕಮಿಷನ್ ದಂಧೆ ಹೆಚ್ಚಾಗಿದೆ' ಎಂಬ ಗುತ್ತಿಗೆದಾರರ ಸಂಘದ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಲು ನಾನು ಈವರೆಗೆ ಯಾರಿಂದಲೂ ಲಂಚ ಪಡೆದಿಲ್ಲ' ಎಂದರು.



ಸಿದ್ದರಾಮಯ್ಯ

'ಏಪ್ರಿಲ್ ತಿಂಗಳಲ್ಲಿ ಸಾಧ್ಯವಾದಷ್ಟು ಬಾಕಿ ಬಿಲ್‌ಗಳನ್ನು ಪಾವತಿಸಲು ಪ್ರಯತ್ನಿಸಲಾಗುವುದು. ಹಿಂದಿನ ಸರ್ಕಾರದ ಅವಧಿಯಲ್ಲಿ ಅನುದಾನ ಇಲ್ಲದಿದ್ದರೂ, ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು, ಕಾಮಗಾರಿ ಪ್ರಾರಂಭಿಸಿದ ಕಾರಣದಿಂದಾಗಿ ಬಾಕಿ ಬಿಲ್ ಮೊತ್ತ ಹೆಚ್ಚಿದೆ. ಇದಕ್ಕೆ ನಮ್ಮ ಸರ್ಕಾರ ಹೊಣೆಯಾಗಲು ಸಾಧ್ಯವೆ' ಎಂದು ಪ್ರಶ್ನಿಸಿದರು.

'₹50 ಲಕ್ಷದವರೆಗಿನ ಬಿಲ್ ಪಾವತಿ': 'ಜಲಸಂಪನ್ಮೂಲ ಇಲಾಖೆಯಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳ ₹50 ಲಕ್ಷದವರೆಗಿನ ಬಿಲ್‌ಗಳನ್ನು ಮಾರ್ಚ್‌ನಲ್ಲೇ ಪಾವತಿಸಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.

ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ಜಲಸಂಪನ್ಮೂಲ ಸಚಿವರೂ ಆದ ಡಿ.ಕೆ. ಶಿವಕುಮಾರ್, 'ಇಲಾಖೆಯ ನಾಲ್ಕೂ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ನಿಮ್ಮೊಂದಿಗೆ ಮಾರ್ಚ್ 11ರಂದು ಸಭೆ ನಡೆಸಿ, ಭ್ರಷ್ಟಾಚಾರದ ಆರೋಪದ ಬಗ್ಗೆ ಚರ್ಚೆ ನಡೆಸುತ್ತೇನೆ' ಎಂದು ಹೇಳಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಮ್ಮ ಬೇಡಿಕೆಗಳಿಗೆ ಸ್ಪಂದಿಸಿದ್ದು, ಶೀಘ್ರವೇ ಈಡೇರಿಸುವ ಭರವಸೆ ನೀಡಿದ್ದಾರೆ. ಏಪ್ರಿಲ್ ಅಂತ್ಯದವರೆಗೆ ಕಾದು ನೋಡಲಾಗುತ್ತದೆ. ನಂತರ ನಮ್ಮ ಹೋರಾಟದ ಬಗ್ಗೆ ನಿರ್ಧರಿಸಲಾಗುತ್ತದೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ತಿಳಿಸಿದರು.

ಹಕ್ಕಿ ಜ್ವರ: ಕೋಳಿ ಮಾದರಿ ಜತೆಗೆ ಭೋಪಾಲ್‌ಗೆ ಸಿಬ್ಬಂದಿ

ಬಳ್ಳಾರಿ: ಬಳ್ಳಾರಿಯ ಕಪ್ಪಗಲ್ಲುವಿನಲ್ಲಿ ಕೋಳಿಗಳ ಸಾವಿಗೆ ಹಕ್ಕಿ ಜ್ವರ ಕಾರಣವೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಪಶುಪಾಲನಾ ಇಲಾಖೆಯು ಮೃತ ನಾಲ್ಕು ಕೋಳಿಗಳ ಮಾದರಿ ಸಹಿತ ಸಿಬ್ಬಂದಿ ಯೊಬ್ಬರನ್ನು ಮಧ್ಯಪ್ರದೇಶದ ಭೋಪಾಲ್‌ಗೆ ವಿಮಾನದಲ್ಲಿ ಕಳುಹಿಸಿದೆ.

'ಹಕ್ಕಿ ಜ್ವರ ಇರುವುದನ್ನು ಘೋಷಿಸಲು ಭೋಪಾಲ್ ಸಂಸ್ಥೆಗೆ ಮಾತ್ರ ಅಧಿಕಾರವಿದೆ' ಎಂದು ಇಲಾಖೆಯ ಉಪ ನಿರ್ದೇಶಕ ಹನುಮಂತ ನಾಯ್ಕ ಕಾರಬಾರಿ 'ಪ್ರಜಾವಾಣಿ'ಗೆ ತಿಳಿಸಿದರು.



'ಪುಟ್ಟರಾಜ ಸಮ್ಮಾನ–2025'

ಧಾರವಾಡದದಲ್ಲಿ ಸೋಮವಾರ ಗಾಯಕ ಪಂಡಿತ ಗಣಪತಿ ಭಟ್ ಹಾಸಣಗಿ ಅವರಿಗೆ 'ಪುಟ್ಟರಾಜ ಸಮ್ಮಾನ–2025' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪಂಡಿತ ವೆಂಕಟೇಶ ಕುಮಾರ, ಡಾ.ಪುಟ್ಟರಾಜ ಗವಾಯಿ ಪ್ರತಿಷ್ಠಾನದ ಉಪಾಧ್ಯಕ್ಷ ಶಂಕರ ಕುಂಬಿ, ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಸಿತಾರ ರತ್ನ ಸಮಿತಿ ಅಧ್ಯಕ್ಷ ರಾಘವೇಂದ್ರ ಆಯಿ, ಪ್ರತಿಷ್ಠಾನದ ಅಧ್ಯಕ್ಷ ಮಹಾಬಲೇಶ್ವರ ಹಾಸಿನಾಳ, ಸದಸ್ಯ ಉದಯಕುಮಾರ ದೇಸಾಯಿ ಪಾಲ್ಗೊಂಡಿದ್ದರು
ಪ್ರಜಾವಾಣಿ ಚಿತ್ರ

ಐಜಿಪಿ ಡಿ. ರೂಪಾ ವಿರುದ್ಧ ದೂರು ವರ್ತಿಕಾ ಕಟಿಯಾರ್ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಐಜಿಪಿ ಡಿ. ರೂಪಾ ಅವರ ವಿರುದ್ಧ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ ದೂರು ನೀಡಿದ್ದ ಡಿಐಜಿ ವರ್ತಿಕಾ ಕಟಿಯಾರ್ ಅವರನ್ನು ಐಎಸ್‌ಡಿಯಿಂದ ಗೃಹರಕ್ಷಕ ದಳ ಹಾಗೂ ನಾಗರಿಕ ರಕ್ಷಣಾ ವಿಭಾಗದ ಡಿಐಜಿಯಾಗಿ ವರ್ಗಾವಣೆಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.



ಐಎಸ್‌ಡಿ ವಿಭಾಗದ ಐಜಿಪಿ ಮತ್ತು ಡಿಐಜಿ ನಡುವಿನ ಜಟಾಪಟಿ ಸರ್ಕಾರದ ಮಟ್ಟದಲ್ಲಿ ಚರ್ಚೆಗೆ ಕಾರಣವಾಗಿತ್ತು. ಈ ಬೆಳವಣಿಗೆ ನಡುವೆಯೇ ವರ್ತಿಕಾ ಅವರನ್ನು ವರ್ಗಾವಣೆ ಮಾಡಲಾಗಿದೆ. ವರ್ತಿಕಾ ನೀಡಿರುವ ದೂರಿಗೆ ಸಂಬಂಧಿಸಿದಂತೆ ಗೃಹ ಇಲಾಖೆ ಇನ್ನೂ ಪ್ರತಿಕ್ರಿಯೆ ನೀಡಿಲ್ಲ.

'ಡಿ. ರೂಪಾ ಅವರು ಕೆಳಹಂತದ ಮೂವರು ಸಿಬ್ಬಂದಿಯನ್ನು (ಮಲ್ಲಿ-ಕಾರ್ಜುನ್, ಮಂಜುನಾಥ್ ಮತ್ತು ಕಿರಣ್) ಬಳಸಿಕೊಂಡು ನಿಯಂತ್ರಣ ಕೊಠಡಿಯಿಂದ ಕೀಲಿ ತಂದು, ನನ್ನ ಕೊಠಡಿ ಬಾಗಿಲು ತೆರೆದು ದಾಖಲೆಗಳನ್ನು ಇರಿಸಿದ್ದಾರೆ. ಅವುಗಳ ಫೋಟೊ ತೆಗೆಸಿ, ವಾಟ್ಸ್‌ಆ್ಯಪ್ ಮೂಲಕ ಪಡೆದುಕೊಂಡಿದ್ದಾರೆ' ಎಂದು ವರ್ತಿಕಾ ಕಟಿಯಾರ್ ಆರೋಪ ಮಾಡಿದ್ದರು.

ದಲಿತ ಮಹಿಳೆ ಶವಸಂಸ್ಕಾರಕ್ಕೆ ಅಡ್ಡಿ

ಗೌರಿಬಿದನೂರು (ಚಿಕ್ಕಬಳ್ಳಾಪುರ): ತಾಲ್ಲೂಕಿನ ಹೊಸೂರು ಹೋಬಳಿಯ ಕಾಮಗಾನಹಳ್ಳಿಯಲ್ಲಿ ಸೋಮವಾರ ದಲಿತ ಮಹಿಳೆಯ ಶವ ಸಂಸ್ಕಾರಕ್ಕೆ ಒಕ್ಕಲಿಗ ಸಮುದಾಯದ ವ್ಯಕ್ತಿ ಅಡ್ಡಿಪಡಿಸಿದ್ದರಿಂದ ಗ್ರಾಮದಲ್ಲಿ ವಿಷಮ ಪರಿಸ್ಥಿತಿ ನಿರ್ಮಾಣವಾಗಿತ್ತು.

ಕಾಮಗಾನಹಳ್ಳ ದಲಿತಕೇರಿಯ ಚಿಕ್ಕಮ್ಮ ಅವರ ಶವವನ್ನು ಗ್ರಾಮದ ಹಳ್ಳಕ್ಕೆ ತೆಗೆದುಕೊಂಡು ಹೋದಾಗ ನಂಜುಂಡ ರೆಡ್ಡಿ ಎಂಬುವರು 'ಇದು ನಮ್ಮ ಜಮೀನು' ಎಂದು ಶವ ಸಂಸ್ಕಾರಕ್ಕೆ ಅಡ್ಡಿಪಡಿಸಿದರು. ಆಗ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿತ್ತು. ಮಧ್ಯೆ ಪ್ರವೇಶಿಸಿದ ದಲಿತ ಸಂಘಟನೆಗಳ ಮುಖಂಡರು, 'ಹಲವು ವರ್ಷಗಳಿಂದ ಇಲ್ಲಿಯೇ ಶವ ಸಂಸ್ಕಾರ ಮಾಡುತ್ತಿದ್ದೇವೆ. ಇಲ್ಲಿಯೇ ಸಂಸ್ಕಾರ ಮಾಡುತ್ತೇವೆ' ಎಂದರು.

ಕಂದಾಯ ಇಲಾಖೆ ಆರ್.ಐ, ಗ್ರಾಮ ಆಡಳಿತ ಅಧಿಕಾರಿ, ಪಿಡಿಒ ಎರಡೂ ಸಮುದಾಯದವರ ಮನವೊಲಿಸಿ, ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಅದೇ ಜಾಗದಲ್ಲಿ ಸಂಸ್ಕಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. 'ನಂಜುಂಡ ರೆಡ್ಡಿ ಈ ಜಮೀನು ಖರೀದಿ ಮಾಡಿದ್ದಾರೆ. ಜಾಗ ಸರ್ವೆ ಮಾಡಿಸಿ ಹದ್ದುಬಸ್ತು ಮಾಡಿಸಲಾಗುವುದು. ಸ್ಮಶಾನಕ್ಕೆ ಜಾಗ ಮೀಸಲಿಡಲಾಗುವುದು' ಎಂದು ಅಧಿಕಾರಿ ಯೋಗೇಶ್ ಬಾಬು ತಿಳಿಸಿದ್ದಾರೆ.

ರಿಯಲ್ ಎಸ್ಟೇಟ್ ಉದ್ಯಮಿ ಅಪಹರಣ ಪ್ರಕರಣ

ಮಹಿಳೆ ಸೇರಿ 7 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮೂಡಲಗಿ ತಾಲ್ಲೂಕಿನ ರಾಜಾಪುರ ಗ್ರಾಮದ ರಿಯಲ್ ಎಸ್ಟೇಟ್ ಉದ್ಯಮಿ ಬಸವರಾಜ ಅಂಬಿ ಅಪಹರಿಸಿ ₹5 ಕೋಟಿಗೆ ಬೇಡಿಕೆ ಇಟ್ಟ ಪ್ರಕರಣದ ಪ್ರಮುಖ ಆರೋಪಿ, ಗೋಕಾಕ ತಾಲ್ಲೂಕಿನ ಕೊಣ್ಣೂರಿನ ಮಂಜುಳಾ ರಾಮನಗಟ್ಟಿ ಸೇರಿ ಒಟ್ಟು ಏಳು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಉದ್ಯಮಿ ಬಸವರಾಜ ಅಂಬಿ ಅವರನ್ನು ಫೆಬ್ರುವರಿ 14ರಂದು ಅಪಹರಿಸಲಾಗಿತ್ತು. ಆರೋಪಿಗಳ ಮೊಬೈಲ್ ಲೊಕೇಷನ್ ಆಧರಿಸಿ, ಪೊಲೀಸರು ಫೆಬ್ರುವರಿ 20ರಂದು ಉದ್ಯಮಿಯನ್ನು ರಕ್ಷಿಸಿದ್ದರು. ಕೊಣ್ಣೂರಿನ ಈಶ್ವರ ಪರಶುರಾಮ ರಾಮನಗಟ್ಟಿ (ಮಂಜುಳಾ ಪುತ್ರ), ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಚಿನಗುಂಡಿಯ ಸಚಿನ ರಾಮಪ್ಪ ಕಾಂಬಳೆ, ರಮೇಶ ಮಾರುತಿ ಕಾಂಬಳೆ ಮತ್ತು ಮೂಡಲಗಿಯ ರಾಘವೇಂದ್ರ ಯಮನಪ್ಪ ಬನ್ನಪ್ಪ ಗೋಳ ಬಂಧಿಸಿದ್ದರು. ಪರಾರಿಯಾಗಿದ್ದ ಮಂಜುಳಾ, ಯಲ್ಲೇಶ ವಾಲಿಕಾರ ಮತ್ತು ಪರಶುರಾಮ ಕಾಂಬಳೆ ಎಂಬುವರನ್ನು ಭಾನುವಾರ ಬಂಧಿಸಿದರು.



ಸಚಿವ ಸತೀಶ ಜಾರಕಿಹೊಳಿ ಜೊತೆ ಮಂಜುಳಾ ರಾಮನಗಟ್ಟಿ

ಸಚಿವ ಸತೀಶ ಆಪ್ತ ವಲಯದಲ್ಲಿದ್ದ ಆರೋಪಿ

ಆರೋಪಿ ಮಂಜುಳಾ ಕಾಂಗ್ರೆಸ್ ಪಕ್ಷದ ಕೆಲಸ, ಚುನಾವಣಾ ಪ್ರಚಾರಗಳಲ್ಲಿ ಹಲವು ವರ್ಷಗಳಿಂದ ಕ್ರಿಯಾಶೀಲರಾಗಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಮತ್ತು ಅವರ ಪುತ್ರಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರೊಂದಿಗೆ ಇರುವ ಹಲವು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

'ಮಂಜುಳಾ ಇಡೀ ಪ್ರಕರಣದ ಸೂತ್ರಧಾರಿಯಾಗಿದ್ದು, ರಾಜಕೀಯ ಪಕ್ಷ ಮತ್ತು ಸಂಘಟನೆ ಜೊತೆ ಗುರುತಿಸಿಕೊಂಡಿದ್ದಾರೆ. ತಹಶೀಲ್ದಾರ್ ಕಚೇರಿಯಲ್ಲಿ 'ಡಿ' ದರ್ಜೆ ನೌಕರಿ ಮತ್ತು ಹೊರಗುತ್ತಿಗೆ ನೌಕರಿ ಕೊಡಿಸುವುದಾಗಿ ಇಬ್ಬರಿಂದ ತಲಾ ₹2.5 ಲಕ್ಷ ಹಣ ಪಡೆದ ಬಗ್ಗೆ ಕುಲಗೋಡ ಠಾಣೆಯಲ್ಲಿ ಆಕೆಯ ವಿರುದ್ಧ ಪ್ರಕರಣಗಳು ದಾಖಲಾಗಿವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ದಿಢೀರ್ ಹಣ ಗಳಿಸಿ, ಐಷಾರಾಮಿ ಬದುಕು ಸಾಗಿಸುವ ಆಸೆಯಿಂದ ಆರೋಪಿಗಳು ಅಪಹರಣದ ಕೃತ್ಯ ಎಸಗಿದ್ದರು. ಬಸವರಾಜ ಅಂಬಿ ಮತ್ತು ಮಂಜುಳಾ ಮಧ್ಯೆ ಹಣದ ವ್ಯವಹಾರ ಇತ್ತೆ ಎಂಬುದು ಗೊತ್ತಾಗಬೇಕಿದೆ' ಎಂದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಿಂದ ₹3 ಲಕ್ಷ ಮೌಲ್ಯದ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ 6 ಮೊಬೈಲ್, ನಾಲ್ಕು ಕಾರುಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಆರೋಪಿ ನಮ್ಮ ಆಪ್ತೆ ಆಗಿರಬಹುದು. ಅಪಹರಿಸಲು ನಾವೇನೂ ಹೇಳಿಲ್ಲ. ದಿನವೂ ನೂರಾರು ಜನ ಫೋಟೊ ತೆಗೆಸಿಕೊಳ್ಳುತ್ತಾರೆ
ಸತೀಶ ಜಾರಕಿಹೊಳಿ
ಲೋಕೋಪಯೋಗಿ ಸಚಿವ

ಮಂಜುಳಾ ಪಕ್ಷವೊಂದರಲ್ಲಿ ಗುರುತಿಸಿಕೊಂಡಿದ್ದಾರೆ. ಆದರೆ, ಅಪಹರಣ ಪ್ರಕರಣದಲ್ಲಿ ಪಕ್ಷದವರು ಯಾರೂ ಪ್ರಭಾವ ಬೀರಿಲ್ಲ. ಅದಕ್ಕೆ ಎಲ್ಲರನ್ನೂ ಬಂಧಿಸಲು ಸಾಧ್ಯವಾಗಿದೆ
ಡಾ.ಭೀಮಾಶಂಕರ ಗುಳೇದ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬೆಳಗಾವಿ

ಸಚಿವ ಸತೀಶ ಜಾರಕಿಹೊಳಿ ಅವರಿಗೂ ಅಪಹರಣದ ಆರೋಪಿಗಳಿಗೂ ಸಂಬಂಧವಿಲ್ಲ. ಸತೀಶ ದೇವರಂಥವರು. ಪ್ರಕರಣದಲ್ಲಿ ಅವರ ಹೆಸರು ಕೆಡಿಸಬಾರದು
ಬಸವರಾಜ ಅಂಬಿ
ಅಪಹರಣಕ್ಕೆ ಒಳಗಾಗಿದ್ದ ಉದ್ಯಮಿ

ಮಂಜುಳಾ ರಾಮನಗಟ್ಟಿ ಕಾಂಗ್ರೆಸ್ ಕಾರ್ಯಕರ್ತೆ ಅಲ್ಲ. ಅವರಿಗೆ ಪಕ್ಷದಲ್ಲಿ ಯಾವುದೇ ಹುದ್ದೆ ಇಲ್ಲ. ಸದಸ್ಯತ್ವವನ್ನೂ ಕೊಟ್ಟಿಲ್ಲ
ಕಲ್ಪನಾ ಜೋಶಿ
ಕಾಂಗ್ರೆಸ್ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ

ರಶ್ಮಿಕಾ ಮಂದಣ್ಣನಂಥವರಿಗೆ ಬುದ್ಧಿ ಕಲಿಸಬೇಕು: ಗಣಿಗ ರವಿಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟಿ ರಶ್ಮಿಕಾ ಮಂದಣ್ಣನಂಥವರಿಗೆ ಬುದ್ಧಿ ಕಲಿಸಬೇಕು' ಎಂದು ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

'ನಟ್ಟು ಬೋಲ್ಟು ಟೈಟ್' ಎಂಬ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 'ಸಿನಿಮಾದವರು ಬಾಯಿ ಮುಚ್ಚಿಕೊಂಡು ಇರಬೇಕು' ಎಂದು ಸಿಡಿಮಿಡಿಗೊಂಡರು.

'ರಶ್ಮಿಕಾ ಮಂದಣ್ಣ ಕನ್ನಡದ 'ಕಿರಿಕ್ ಪಾರ್ಟಿ' ಸಿನಿಮಾದಿಂದ ಬೆಳೆದವರು. ಕಳೆದ ವರ್ಷ ಚಿತ್ರೋತ್ಸವಕ್ಕೆ ಆಹ್ವಾನ ಮಾಡಿದ್ದೆವು. ನಾನು ಹೈದರಾಬಾದ್‌ನಲ್ಲಿ ಇರೋದು. ನನಗೆ ಸಮಯ ಇಲ್ಲ ಎಂದು ಹೇಳಿದ್ದರು. ಕನ್ನಡದಿಂದ ಬೆಳೆದ ಇವರು ಹತ್ತಾರು ಬಾರಿ ಕರೆದರೂ ಇಷ್ಟು ಉದ್ಧಟತನದಿಂದ ಮಾತನಾಡುತ್ತಾರೆಂದರೆ ಇಂಥವರಿಗೆ ನಾವು ಬುದ್ಧಿ ಕಲಿಸಬೇಕಲ್ಲವೇ?' ಎಂದರು.

'ಸಿನಿಮಾಗಳಿಗೆ ನೀಡುವ ಸಹಾಯಧನದ ಬಗ್ಗೆ ಯೋಚಿಸುವಂತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗೆ ನಾನು ಪತ್ರ ಬರೆಯುತ್ತೇನೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ಡಿ.ಕೆ. ಶಿವಕುಮಾರ್ ವಿರುದ್ಧ ಮಾತನಾಡುತ್ತಾನೆ. ಇಲ್ಲಿನ ದುಡ್ಡು ದೋಚಿಕೊಂಡು ಹೋದವನು. ಇವತ್ತು ನಮ್ಮ ಬಗ್ಗೆ ಮಾತನಾಡುತ್ತಾನೆ' ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.



ಸರ್ಕಾರಕ್ಕೆ ನಾಚಿಕೆಯಾಗಬೇಕು. ಹಳೆಯ ಸಿನಿಮಾಗಳ ಪ್ರತಿಗಳನ್ನು ಸಂರಕ್ಷಿಸಿಡುವ ಕಾರ್ಯ ಮಾಡುವ ಬದಲು ನಟ್–ಬೋಲ್ಟ್ ಟೈಟ್ ಮಾಡ್ತಾರಂತೆ. ನಾನು ಚಲನಚಿತ್ರ ಅಕಾಡೆಮಿ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಪುಣೆ ಮಾದರಿಯಲ್ಲಿ ಸಿನಿಮಾ ಸಂಗ್ರಹಾಲಯ ಆಗಬೇಕು ಎಂದು ಒದ್ದಾಡಿದ್ದೆ, ಆಗಲಿಲ್ಲ. ಚರಿತ್ರೆ ಮರೆತ ಇಂಡಸ್ಟ್ರಿ ಬೆಳೆಯಲು ಸಾಧ್ಯವಿಲ್ಲ.
ರಾಜೇಂದ್ರ ಸಿಂಗ್ ಬಾಬು, ನಿರ್ದೇಶಕ





ಅಕಾಡೆಮಿಯ ಏಕೈಕ ಉದ್ದೇಶ ನಾಲ್ಕು ಜನ ವಿದೇಶಿಗರನ್ನು ಕರೆದು ಚಿತ್ರೋತ್ಸವ ಮಾಡುವುದು ಎಂದುಕೊಂಡಿದ್ದಾರೆ. ಕನ್ನಡದ ನಿರ್ಮಾಪಕರಿಗೆ, ನಿರ್ದೇಶಕರಿಗೆ, ತಂತ್ರಜ್ಞರಿಗೆ ಆಹ್ವಾನ ಹೋಗಿಲ್ಲ ಎನ್ನುವುದು ದೊಡ್ಡ ಸುದ್ದಿ. ಆದರೆ ವಿದೇಶಿ ಪ್ರತಿನಿಧಿಗಳಿಗೆ ಆಹ್ವಾನ ಹೋಗಿದೆ. ಇದರಿಂದ ನಮ್ಮ ಕನ್ನಡ ಸಿನಿಮಾ ಬಗ್ಗೆ ಅವರು ಯಾವ ರೀತಿ ಅಭಿಮಾನ ಇಟ್ಟುಕೊಂಡಿದ್ದಾರೆಂದು ತಿಳಿಯುತ್ತದೆ. ಬುಧವಾರ ನನ್ನ 'ಘಟಶ್ರಾದ್ಧ' ಸಿನಿಮಾದ ಪ್ರದರ್ಶನವಿದೆ. ನನಗೆ ಇಲ್ಲಿಯವರೆಗೆ ಯಾವುದೇ ಆಹ್ವಾನ ಬಂದಿಲ್ಲ. ನನ್ನನ್ನು ಕರೆದೂ ಇಲ್ಲ. ಹಾಗಾಗಿ ಹೋಗುತ್ತಲೂ ಇಲ್ಲ.
ಗಿರೀಶ ಕಾಸರವಳ್ಳಿ, ನಿರ್ದೇಶಕ

ಸೇವೆ ಸುಧಾರಿಸಿಕೊಳ್ಳದಿದ್ದರೆ ಮಧ್ಯ ಪ್ರವೇಶ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆನ್‌ಲೈನ್ ಮೂಲಕ ಆಹಾರ ಪದಾರ್ಥ ಪೂರೈಸುವ ಸ್ವಿಗ್ಗಿ, ಜೊಮಾಟೊ ಕಂಪನಿಗಳು ಗ್ರಾಹಕರಿಗೆ ಉತ್ತಮ ಸೇವೆ ನೀಡುವ ವ್ಯವಸ್ಥೆಯನ್ನು ಸುಧಾರಿಸಿಕೊಳ್ಳದಿದ್ದರೆ ಸರ್ಕಾರ ಮಧ್ಯ ಪ್ರವೇಶಿಸಬೇಕಾಗುತ್ತದೆ' ಎಂದು ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಕಂಪನಿಗಳು ಗ್ರಾಹಕರಿಗೆ ಸೇವೆ ನೀಡುವ ವೇಳೆ ನಿರ್ಲಕ್ಷ್ಯ ವಹಿಸುತ್ತಿರುವ ಮತ್ತು ತಂತ್ರಜ್ಞಾನ ಬಳಕೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಬಗ್ಗೆ ಇತ್ತೀಚೆಗೆ ಸಾಕಷ್ಟು ದೂರುಗಳು ಬರುತ್ತಿವೆ' ಎಂದಿದ್ದಾರೆ.

'ತಮ್ಮ ಸೇವಾ ವ್ಯವಸ್ಥೆಯನ್ನು ಸುಧಾರಿಸಿಕೊಳ್ಳಲು ಈ ಕಂಪನಿಗಳು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಆ ಮೂಲಕ, ಗ್ರಾಹಕರಿಗೆ ಉತ್ತಮ ಸೇವೆ ನೀಡಬೇಕು. ಈ ವಿಚಾರಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಜೊತೆ ಚರ್ಚೆ ನಡೆಸಲು ಯಾವುದೇ ಸಮಸ್ಯೆಗಳಿಲ್ಲ' ಎಂದಿದ್ದಾರೆ.

ನದಿಗಳ ಸಾವು: ಹೈಕೋರ್ಟ್ ಕಳವಳ

ಒಂದನೇ ಪುಟದಿಂದ...

ಈ ನೋಟಿಸ್ ರದ್ದುಪಡಿಸುವಂತೆ ಕೋರಿ ಭಗವಂತ ಅಲಗೂರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರು ಈ ನೋಟಿಸ್ ಸ್ವೀಕರಿಸಿರುವುದಕ್ಕೆ ಯಾವುದೇ ಸ್ವೀಕೃತಿ ಪತ್ರ ಪಡೆದಿರಲಿಲ್ಲ' ಎಂಬ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸಚಿನ್ ಸಿ.ಅಂಗಡಿ ಅವರ ವಾದವನ್ನು ಪರಿಗಣಿಸಿದ್ದು, ತಹಶೀಲ್ದಾರ್ 2022ರ ಮೇ 4ರಂದು ನೀಡಿದ್ದ ನೋಟಿಸ್ ರದ್ದುಪಡಿಸಿದೆ.

'ಅರ್ಜಿದಾರರಿಗೆ ಹೊಸದಾಗಿ ಅವರ ವಕೀಲರ ಮೂಲಕ ನೋಟಿಸ್ ನೀಡಬೇಕು' ಎಂದು ಆದೇಶಿಸಿರುವ ನ್ಯಾಯಪೀಠ, 'ಅರ್ಜಿದಾರರು ಇದೇ 7ರೊಳಗೆ ಈ ಬಗ್ಗೆ ತಹಶೀಲ್ದಾರ್ ಅವರಿಗೆ ಪೂರಕ ದಾಖಲೆಯೊಂದಿಗೆ ಉತ್ತರಿಸಬೇಕು. ಇದನ್ನು ಪರಿಗಣಿಸಿ ತಹಶೀಲ್ದಾರ್ ಕಾನೂನು ಪ್ರಕಾರ ಅಗತ್ಯ ಆದೇಶ ಹೊರಡಿಸಬೇಕು' ಎಂದು ತಾಕೀತು ಮಾಡಿದೆ. ರಾಜ್ಯ ಸರ್ಕರದ ಪರ ವಿ.ಎಸ್.ಕಳಸೂರು ಮಠ ಹಾಜರಿದ್ದರು.

ವರದಿ ಸಲ್ಲಿಕೆಗೆ 6 ವಾರ ಗಡುವು

'ನದಿ ಪಾತ್ರ, ಮರಳಿನ ದಿಬ್ಬಗಳಲ್ಲಿ ಕಂಡು ಬರುವ ಯಾವುದೇ ಬದಲಾವಣೆಯನ್ನು ನೈಜ ಸಮಯದಲ್ಲಿ ಪತ್ತೆ ಹಚ್ಚಿ ಮಾಹಿತಿ ನೀಡುವ ವ್ಯವಸ್ಥೆಯೊಂದನ್ನು ರೂಪಿಸಬೇಕು. ಈ ದಿಸೆಯಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಗಣಿ ಇಲಾಖೆ ನಿರ್ದೇಶಕ, ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಕ ಮತ್ತು ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ನೆರವು ಪಡೆಯಬೇಕು. ಈಗ ನೀಡಿರುವ ನಿರ್ದೇಶನಗಳ ಅನುಪಾಲನಾ ವರದಿಯನ್ನು ಆರು ವಾರಗಳಲ್ಲಿ ಹೈಕೋರ್ಟ್‌ಗೆ ಸಲ್ಲಿಸಬೇಕು' ಎಂದು ನ್ಯಾಯಪೀಠ ಗಡುವು ವಿಧಿಸಿದೆ.


ಕನಿಷ್ಠ ವೇತನ ಜಾರಿಗೆ ಪಂಚಾಯಿತಿ ನೌಕರರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ವೇತನ ನಿಗದಿಯೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ, ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದಿಂದ (ಸಿಐಟಿಯು ಸಂಯೋಜಿತ) ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ಅನ್ಯ ಇಲಾಖೆಯ ಸಿಬ್ಬಂದಿಯನ್ನು (ಉದಾಹರಣೆಗೆ ಗ್ರಂಥಾಲಯ ಮೇಲ್ವಿಚಾರಕರು) ಗ್ರಾಮ ಪಂಚಾಯಿತಿ ನೌಕರರೆಂದು ಪರಿಗಣಿಸಬಾರದು. ಪಂಚಾಯಿತಿ ನೌಕರರಿಗೆ ಪ್ರತಿ ತಿಂಗಳಿಗೆ ಕನಿಷ್ಠ ವೇತನ ₹31 ಸಾವಿರ ನಿಗದಿಪಡಿಸಬೇಕು. ಮಧ್ಯಂತರ ಪರಿಹಾರವಾಗಿ ಪ್ರತಿ ತಿಂಗಳು ₹3 ಸಾವಿರ ವಿತರಣೆ ಮಾಡಬೇಕು. ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುವ ನೌಕರರು ನಿವೃತ್ತಿ ಹೊಂದಿದರೆ ಅವರಿಗೆ ಪ್ರತಿ ತಿಂಗಳು ಕನಿಷ್ಠ ₹6 ಸಾವಿರ ಪಿಂಚಣಿ ನೀಡಬೇಕು ಎಂದೂ ಆಗ್ರಹಿಸಿದರು.

ಕರ ವಸೂಲಿಗಾರರು, ಗುಮಾಸ್ತ, ಡಾಟಾ ಎಂಟ್ರಿ ಆಪರೇಟರ್ಸ್, ನೀರು ಗಂಟಿಗಳು, ಸ್ವಚ್ಛತಾ ಕೆಲಸಗಾರರನ್ನು ಏಕ ಕಾಲಕ್ಕೆ ಸರ್ಕಾರಿ ನೌಕರರೆಂದು ಘೋಷಣೆ ಮಾಡಬೇಕು, ಸೇವಾ ಹಿರಿತನ ಆಧರಿಸಿ ವೇತನ ಹೆಚ್ಚಳ ಮಾಡಬೇಕು. 'ಐಪಿಡಿ ಸಾಲಪ್ಪ ವರದಿ'ಯಂತೆ ಸ್ವಚ್ಛತಾ ಕೆಲಸಗಾರರನ್ನು ನೇಮಿಸುವಂತೆ ಆಗ್ರಹಿಸಿದರು. ಸಂಘದ ಅಧ್ಯಕ್ಷ ಎಂ.ಬಿ.ನಾಡಗೌಡ, ಪ್ರಧಾನ ಕಾರ್ಯದರ್ಶಿ ಜಿ.ರಾಮಕೃಷ್ಣ ನೇತೃತ್ವ ವಹಿಸಿದ್ದರು.



❦ ಸುಭಾಷಿತ ❦

ನಾನೇ ಎಂಬುದೇ ಮಾಯೆ, ನನ್ನ ಎಂಬುದೇ ಅವಿದ್ಯೆ.
–ಪಂಡಿತ್ ಪುಟ್ಟರಾಜ ಗವಾಯಿ

ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಹಾಳೆ ಬಳಕೆ ನಿಷೇಧ ಸ್ವಾಗತಾರ್ಹ, ಅರಿವೂ ಮೂಡಿಸಿ

ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಹಾಳೆ ಬಳಕೆ ಮಾಡುವುದಕ್ಕೆ ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ನಿಷೇಧ ವಿಧಿಸಿರುವುದು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಸರಿಯಾದ ಕ್ರಮ. ಇಲಾಖೆಯ ಅಧಿಕಾರಿಗಳು ತಪಾಸಣೆ ನಡೆಸಿದಾಗ 52 ಕಡೆಗಳಲ್ಲಿ ಪ್ಲಾಸ್ಟಿಕ್ ಹಾಳೆ ಬಳಸಿ ಇಡ್ಲಿಯನ್ನು ಬೇಯಿಸುತ್ತಿದ್ದುದು ಪತ್ತೆಯಾದ ಬೆನ್ನಲ್ಲಿಯೇ ಈ ಕ್ರಮ ಕೈಗೊಳ್ಳಲಾಗಿದೆ. ನಮ್ಮ ದೈನಂದಿನ ಬದುಕಿನಲ್ಲಿ ಪ್ಲಾಸ್ಟಿಕ್ ಒಂದು ಅವಿಭಾಜ್ಯ ಅಂಗ ಎಂಬಂತಾಗಿದೆ. ನಮ್ಮ ಅಗತ್ಯಗಳಿಗೆ ತಕ್ಕಂತೆ ಪ್ಲಾಸ್ಟಿಕ್ ಹೊಂದಾಣಿಕೆಯಾಗುತ್ತ ಹೋಗುವುದರಿಂದ ಮತ್ತು ಒದಗಿಬರುವುದರಿಂದ ಅದರ ಬಳಕೆಯಿಂದಾಗುವ ಸಾಧಕ–ಬಾಧಕ ಕುರಿತು ತಲೆಕೆಡಿಸಿಕೊಳ್ಳದೆ ಉಪಯೋಗ ಮಾಡುತ್ತಾ ಹೋಗುತ್ತಿದ್ದೇವೆ. ಇತ್ತೀಚಿನ ವರ್ಷಗಳಲ್ಲಿ [illegible] ಪ್ಲಾಸ್ಟಿಕ್ [illegible] ತೆರೆದುಕೊಂಡರೆ ವಿಷಕಾರಿ ಅಂಶಗಳನ್ನು ಬಿಡುಗಡೆ ಮಾಡುತ್ತಾ ಹೋಗುತ್ತವೆ. ಅಂತಹ ವಾತಾವರಣದಲ್ಲಿ ಅದು ಬಿಡುಗಡೆ ಮಾಡುವ ವಿಷಕಾರಿ ಧಾತುಗಳು ಮತ್ತು ಪ್ಲಾಸ್ಟಿಕ್‌ನ ಸೂಕ್ಷ್ಮ ಕಣಗಳು ಆಹಾರದೊಟ್ಟಿಗೆ ಬೆರೆಯುತ್ತವೆ. ಹಾಗೆ ಕಲುಷಿತಗೊಂಡ ಆಹಾರ ಸೇವಿಸಿದರೆ ದೇಹದಲ್ಲಿ ಕ್ಯಾನ್ಸರ್ ವೃದ್ಧಿಯಾಗುವ ಅಪಾಯ ಹೆಚ್ಚಿರುತ್ತದೆ ಎಂದು ತಜ್ಞರು ಎಚ್ಚರಿಕೆ ನೀಡುತ್ತಲೇ ಇದ್ದಾರೆ. ಆದರೆ, ಅವರ ಮಾತು ಯಾರ ಕಿವಿಗೂ ಹೋಗಿಲ್ಲ. ಇಡ್ಲಿಯು ದಕ್ಷಿಣ ಭಾರತದ ಅದರಲ್ಲೂ ಕರ್ನಾಟಕದ ಅತ್ಯಂತ ಜನಪ್ರಿಯ ತಿಂಡಿ. ಲಾಗಾಯ್ತಿನಿಂದಲೂ ಹೋಟೆಲ್‌ಗಳಲ್ಲಿ ಇಡ್ಲಿಯನ್ನು ಬಟ್ಟೆಯ ಮೇಲೆಯೇ ಬೇಯಿಸುವ ರೂಢಿಯಿದೆ. ಇತ್ತೀಚಿನ ವರ್ಷಗಳಲ್ಲಿ ಪ್ಲಾಸ್ಟಿಕ್ ಹಾಳೆ ಹಾಕಿ ಬೇಯಿಸುವ, ತಿನ್ನಲು ಕೊಡುವಾಗ ತಟ್ಟೆಯ ಮೇಲೆ ಅಂತಹದ್ದೇ ಹಾಳೆಯನ್ನು ಹರಡಿ ತಿಂಡಿ ಹಾಕಿಕೊಡುವ ಪ್ರವೃತ್ತಿ ಬೆಳೆದಿದೆ. 'ಪ್ಲಾಸ್ಟಿಕ್ ಹಾಳೆಯ ಬಳಕೆಯಿಂದ ಇಡ್ಲಿಯಲ್ಲಿ ಕಾರ್ಸಿನೋಜೆನಿಕ್ (ಕ್ಯಾನ್ಸರ್‌ಕಾರಕ) ಅಂಶ ಸೇರ್ಪಡೆಯಾಗುವ ಸಾಧ್ಯತೆಯಿದೆ. ಸಾರ್ವಜನಿಕರ ಆರೋಗ್ಯದ ಜತೆ ಚೆಲ್ಲಾಟವಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಎಚ್ಚರಿಕೆ ನೀಡಿದ್ದಾರೆ. 'ಫುಡ್ ಗ್ರೇಡ್' ಹೊಂದಿಲ್ಲದ ಪ್ಲಾಸ್ಟಿಕ್ ಅನ್ನು ಹೆಚ್ಚಿನ ಶಾಖಕ್ಕೆ ಒಡ್ಡಿದಾಗ ಬಿಸ್ಫಿನಾಲ್ 'ಎ' (ಬಿಪಿಎ) ಮತ್ತು ಥಾಲೇಟ್‌ನಂತಹ ವಿಷಕಾರಿ ರಾಸಾಯನಿಕಗಳು ಬಿಡುಗಡೆಯಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹೀಗಾಗಿ ಆಹಾರ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಹಾಳೆಯ ಬಳಕೆಗೆ ಅವಕಾಶವಿಲ್ಲ' ಎಂದು ಭಾರತದ ಆಹಾರ ಸುರಕ್ಷತೆ ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಸಹ ಸ್ಪಷ್ಟಪಡಿಸಿದೆ.



ಪ್ಲಾಸ್ಟಿಕ್‌ನಿಂದ ಎಷ್ಟೆಲ್ಲ ಅನಾಹುತ ಆಗುತ್ತದೆ ಎನ್ನುವುದು ಗೊತ್ತಿದ್ದರೂ ಕುರುಡಾಗಿ ಅದರ ಬೆನ್ನುಬೀಳುವ ಪ್ರವೃತ್ತಿಯನ್ನು ಜನ ಬಿಡಬೇಕು

ಆರೋಗ್ಯ ಕಾಯ್ದುಕೊಳ್ಳುವಲ್ಲಿ ಎಲ್ಲರಿಗೆ, ಅದರಲ್ಲೂ ಅನಾರೋಗ್ಯಪೀಡಿತರಿಗೆ ಇಡ್ಲಿ ಅತ್ಯಂತ 'ಸುರಕ್ಷಿತ' ತಿಂಡಿ ಎಂದೇ ಜನಜನಿತ. ಅಂತಹ ತಿಂಡಿಯನ್ನೇ ಅನಾರೋಗ್ಯಕರ ಎಂದು ಸಂಶಯಿಸುವ ರೀತಿಯಲ್ಲಿ ತಯಾರಿಸುತ್ತಿರುವುದು ಕಳವಳಕಾರಿ. ಇಡ್ಲಿ ಬೇಯಿಸುವಲ್ಲಿ ಪ್ಲಾಸ್ಟಿಕ್ ಬಳಸುತ್ತಿರುವ ಪ್ರಕರಣಗಳ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಗೆ ಎಫ್‌ಎಸ್‌ಎಸ್‌ಎಐ ನಿರ್ದೇಶನ ನೀಡಿದೆ. ರಾಜ್ಯ ಆರೋಗ್ಯ ಸಚಿವರು ಕೂಡ ಇಂತಹ ಪ್ರಕರಣಗಳನ್ನು ಗಂಭೀರವಾಗಿ ತೆಗೆದುಕೊಂಡಿರುವುದಾಗಿ ಹೇಳಿದ್ದಾರೆ. ಸಚಿವರು ಮತ್ತು ಅಧಿಕಾರಿಗಳ ಹೇಳಿಕೆ ಬರೀ ಬಾಯಿ ಉಪಚಾರದ ಮಾತಾಗದೆ ಕ್ರಮ ಕೈಗೊಳ್ಳಬೇಕಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದರ ಜತೆಗೆ ಪ್ಲಾಸ್ಟಿಕ್ ಹಾಳೆಯನ್ನು ಬಳಸಿ ಇಡ್ಲಿ ತಯಾರಿಸುವುದು 'ಅನಾರೋಗ್ಯಕಾರಿ' ವಿಧಾನವೆಂದು ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಕುರಿತು ವ್ಯಾಪಕವಾಗಿ ಜಾಗೃತಿ ಮೂಡಿಸುವ ಕೆಲಸವೂ ಆಗಬೇಕು. ಜನರೂ ಅಷ್ಟೆ; ಪ್ಲಾಸ್ಟಿಕ್‌ನಿಂದ ಎಷ್ಟೆಲ್ಲ ಅನಾಹುತ ಆಗುತ್ತದೆ ಎನ್ನುವುದು ಗೊತ್ತಿದ್ದರೂ ಕುರುಡಾಗಿ ಅದರ ಬೆನ್ನುಬೀಳುವ ಪ್ರವೃತ್ತಿಯನ್ನು ಬಿಡಬೇಕು. ಎಲ್ಲಿ ನೋಡಿದರೂ ಪ್ಲಾಸ್ಟಿಕ್ ತಟ್ಟೆ–ಲೋಟಗಳದ್ದೇ ರಾಜ್ಯಭಾರವಾಗಿದೆ. ಅವುಗಳ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಹೋಟೆಲ್‌ಗಳಿಂದ ಬಿಸಿ ಪದಾರ್ಥಗಳನ್ನು ಏಕಬಳಕೆಯ ಪ್ಲಾಸ್ಟಿಕ್ ಚೀಲಗಳಲ್ಲಿ ಕಟ್ಟಿಸಿಕೊಂಡು ಬರುವ ಬದಲು, ತಿಂಡಿ ತರಲು ಮನೆಯಿಂದಲೇ ಪಾತ್ರೆಗಳನ್ನು ಒಯ್ಯಬೇಕು. ಕಳಪೆ ಪ್ಲಾಸ್ಟಿಕ್‌ನ ಸೌಲಭ್ಯಗಳು ವರ್ತಮಾನದಲ್ಲಿ ಹೆಚ್ಚು ಆರಾಮವನ್ನು ನೀಡಿದರೂ ಭವಿಷ್ಯದಲ್ಲಿ ಗಂಡಾಂತರ ತಂದಿರಿಸಬಹುದು ಎಂಬ ಅರಿವನ್ನು ಸದಾ ಹೊಂದಿರಬೇಕು.

ದಿನದ ಟ್ವೀಟ್

ಸ್ಥಳೀಯ ನಿಯಮ ಪಾಲಿಸಿ



ಭಾರತ ದೇಶದ ವಿವಿಧ ರಾಜ್ಯಗಳಿಗೆ ಉದ್ಯೋಗ, ಬದುಕು ಅರಸಿ ವಲಸೆ ಹೋಗಿರುವ ಕನ್ನಡಿಗರೇ, ಹೊರರಾಜ್ಯದಲ್ಲಿ ಉದ್ಯಮ ನಡೆಸುತ್ತಿರುವ ಕನ್ನಡಿಗರೇ, ಆಯಾ ರಾಜ್ಯದ ನಾಮಫಲಕ ನಿಯಮಗಳನ್ನು ನಿಮ್ಮ ಅಂಗಡಿ– ಮಳಿಗೆಗಳಲ್ಲಿ ಪಾಲನೆ ಮಾಡಿ. ಅದೇ ರೀತಿ, ಹೊರ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ವಲಸೆ ಬಂದು ಉದ್ಯಮ ನಡೆಸುತ್ತಿರುವ ವಲಸಿಗರೇ, ಇಲ್ಲಿನ ನಾಮಫಲಕ ನಿಯಮ ಪಾಲಿಸಿ.

ಪ್ರಖ್ಯಾತ ಪುತ್ತೂರು, ನಾಡು–ನುಡಿ ಪರ ಕಾರ್ಯಕರ್ತ

ಕಿಡಿನುಡಿ



ಯಾವ ಸರ್ಕಾರಕ್ಕೂ (ಬೆಂಗಳೂರು ಹೊರತುಪಡಿಸಿ) ಇತರ ಜಿಲ್ಲೆಗಳನ್ನು ಅಭಿವೃದ್ಧಿ ಮಾಡುವ ಧೈರ್ಯ ಇರಲಿಲ್ಲ. ಹೀಗಿದ್ದಾಗ ಬಂಡವಾಳ ಹೂಡಿಕೆ ಮತ್ತು ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗಲು ಹೇಗೆ ಸಾಧ್ಯ? ಅವು ಯಾವಾಗಲೂ ಸಿಕ್ಕಿದ್ದು ಬೆಂಗಳೂರಿಗೆ. ಈಗ ಕರ್ನಾಟಕದ ಮಂದಿ ಉದ್ಯೋಗ, ಆರೋಗ್ಯ ರಕ್ಷಣೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಮೂಲ ಸೌಕರ್ಯಗಳಿಗಾಗಿ ಪರದಾಡುವಂತಾಗಿದೆ.

ವರ್ಧಮಾನ್ ಬಿ.ಎನ್.

25 ವರ್ಷಗಳ ಹಿಂದೆ
ಶನಿವಾರ, 4-3-2000

• **ವಿವಾದದ ನಡುವೆ ನಿತೀಶ್ ಬಿಹಾರ ಮುಖ್ಯಮಂತ್ರಿ**

ಪಟ್ನಾ, ಮಾರ್ಚ್ 3 (ಪಿಟಿಐ, ಯುಎನ್‌ಐ)– ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ನಾಯಕ ನಿತೀಶ್ ಕುಮಾರ್ ಇಂದು ವಿವಾದದ ನಡುವೆ ಬಿಹಾರದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಇಂದು ನಡೆದ ನಾಟಕೀಯ ಬೆಳವಣಿಗೆಯಲ್ಲಿ ರಾಜ್ಯಪಾಲರ ಆಹ್ವಾನದ ಮೇರೆಗೆ ನಿತೀಶ್ 29ನೇ ಮುಖ್ಯಮಂತ್ರಿಯಾದರು.

ಇದರೊಂದಿಗೆ ಹಲವು ದಿನಗಳಿಂದ ಸರ್ಕಾರ ರಚನೆಗಾಗಿ ನಡೆಯುತ್ತಿದ್ದ ಕಸರತ್ತುಗಳಿಗೆ ಅಲ್ಪವಿರಾಮ ಬಿದ್ದಂತಾಗಿದೆ. ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೂ ಸ್ಪಷ್ಟ ಬಹುಮತ ದೊರೆಯದಿದ್ದರಿಂದ ಅತಿ ದೊಡ್ಡ ಪಕ್ಷವಾದ ಲಾಲೂ ಪ್ರಸಾದ್ ನೇತೃತ್ವದ ರಾಷ್ಟ್ರೀಯ ಜನತಾದಳವು ಕಾಂಗ್ರೆಸ್ ಬೆಂಬಲದೊಂದಿಗೆ ಸರ್ಕಾರ ರಚನೆಗೆ ಮುಂದಾಗಿತ್ತು.

ರಾಜ್ಯಪಾಲರ ಕ್ರಮವನ್ನು ವಿರೋಧಿಸಿ ಆರ್‌ಜೆಡಿ ಕಾರ್ಯಕರ್ತರು ರಾಜಭವನದ ಮುಂದೆ ಧರಣಿ ಕುಳಿತರು. ಇಂದು ಬೆಳಿಗ್ಗೆ ರಾಜ್ಯಪಾಲ ವಿ.ಸಿ. ಪಾಂಡೆ, ಸರ್ಕಾರ ರಚಿಸಲು ನಿತೀಶ್ ಕುಮಾರ್ ಅವರಿಗೆ ಅನಿರೀಕ್ಷಿತ ಆಹ್ವಾನ ನೀಡಿದರು.

• **ಚಂದಾಪುರ ಬಳಿ 'ವಿಚಿತ್ರ' ಸರಣಿ ದರೋಡೆ**

ಬೆಂಗಳೂರು, ಮಾರ್ಚ್ 3– ನಗರದ ಹೊರವಲಯದ ಚಂದಾಪುರ ಸಮೀಪದ ಬಡಾವಣೆಯಲ್ಲಿ ಮಾರಕಾಸ್ತ್ರ ಹೊಂದಿದ್ದ ನಾಲ್ವರು ದರೋಡೆಕೋರರ ಗುಂಪೊಂದು ಆರು ಮನೆಗಳಿಗೆ ನುಗ್ಗಿ, ಮನೆಯಲ್ಲಿದ್ದವರ ಮೇಲೆ ಹಲ್ಲೆ ಮಾಡಿ, ನಗದು ಸೇರಿದಂತೆ ಸುಮಾರು 3.50 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ದೋಚಿರುವ ಘಟನೆ ಇಂದು ಬೆಳಗಿನ ಜಾವ ನಡೆದಿದೆ.

ಹೊಸೂರು ರಸ್ತೆ ಚಂದಾಪುರದ ಬಳಿಯ ಕೀರ್ತಿ ಬಡಾವಣೆಯಲ್ಲಿ ಬೆಳಗಿನ ಜಾವ 2.45ರಿಂದ 4 ಗಂಟೆ ನಡುವೆ ಈ ಕೃತ್ಯ ನಡೆದಿದ್ದು, ಜನ ಭಯಭೀತರಾಗಿದ್ದಾರೆ.

50 ವರ್ಷಗಳ ಹಿಂದೆ
ಮಂಗಳವಾರ, 4-3-1975

• **ತೆರಿಗೆ ನೀತಿ ಬದಲಿಸಲು ಜನಸಂಘದ ಒತ್ತಾಯ**

ನವದೆಹಲಿ, ಮಾರ್ಚ್ 3– ಕೊರತೆಗಳ ಹಾಗೂ ಕಾಳಸಂತೆಯ ಸೃಷ್ಟಿಯನ್ನೇ ಆಧರಿಸಿದ ಆರ್ಥಿಕ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ ಎಂದು ತನ್ನ ಮೂರು ದಿನಗಳ ಪೂರ್ಣಾಧಿವೇಶನದ ಮೊದಲ ದಿನವಾದ ಇಂದು ಜನಸಂಘ ಆರೋಪಿಸಿತು.

ಅಭಿವೃದ್ಧಿ ಕ್ರಮಗಳಲ್ಲಿ, ತೆರಿಗೆ ನೀತಿಯಲ್ಲಿ ಹಾಗೂ ಲೈಸೆನ್ಸ್ ನೀಡಿಕೆ ವ್ಯವಸ್ಥೆಯಲ್ಲಿ ತೀವ್ರ ಬದಲಾವಣೆಗಳಾಗಬೇಕೆಂದೂ, ವ್ಯಾಪಕವಾದ ವೇತನ–ಬೆಲೆ ನೀತಿ, ರೈತರಿಗೆ ನ್ಯಾಯವಾದ ಪ್ರತಿಫಲ ಹಾಗೂ ಸಣ್ಣ ಕೈಗಾರಿಕೆಗಳಿಗೆ ಸಾಧ್ಯವಿರುವಷ್ಟು ಹೆಚ್ಚು ಪ್ರೋತ್ಸಾಹ ಅಗತ್ಯವೆಂದೂ ಒತ್ತಾಯಪೂರ್ವಕವಾಗಿ ತಿಳಿಸುವ ನಿರ್ಣಯವೊಂದನ್ನು 4 ಗಂಟೆಗಳ ಚರ್ಚೆಯ ನಂತರ ಅಂಗೀಕರಿಸಲಾಯಿತು.

• **ಶಿಕ್ಷಣ ಮಾಧ್ಯಮ: ಪ್ರತಿಕ್ರಮಕ್ಕೆ ಬೆಳಗಾವಿ ಕನ್ನಡ ನಿಯೋಗ ಒತ್ತಾಯ**

ಬೆಂಗಳೂರು, ಮಾರ್ಚ್ 3– ಇದೇ ಶೈಕ್ಷಣಿಕ ವರ್ಷದಿಂದ ಕನ್ನಡ ಶಾಲೆಗಳಲ್ಲಿ ಕನ್ನಡ ಮಾಧ್ಯಮ ತೆಗೆದುಹಾಕಬೇಕು ಎಂಬ ಮಹಾರಾಷ್ಟ್ರ ರಾಜ್ಯ ಸರ್ಕಾರದ ಕ್ರಮದ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿ, ಬೆಳಗಾವಿಯ ಕನ್ನಡಿಗರು ಇಂದು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ಉಕ್ರೇನ್ ಯುದ್ಧದ ಪಾತ್ರಧಾರಿಗಳಿಗೆ ಈಗ ಮುಖ ಉಳಿಸಿಕೊಳ್ಳುವ ಚಿಂತೆ

ಅಚ್ಚರಿಯ ವಾಗ್ವಾದ, ಮುಗಿದೀತೆ ಯುದ್ಧ?!



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಉಕ್ರೇನ್ ಯುದ್ಧಕ್ಕೆ ಮೂರು ವರ್ಷ ತುಂಬಿದೆ. ಶ್ವೇತಭವನಕ್ಕೆ ನೂತನ ಅಧ್ಯಕ್ಷರ ಪ್ರವೇಶವಾಗಿದೆ. ಉಕ್ರೇನ್ ಯುದ್ಧದ ನೇರ ಮತ್ತು ಪರೋಕ್ಷ ಪಾತ್ರಧಾರಿಗಳಿಗೆ ಇದೀಗ ಯುದ್ಧ ಮುಗಿಯುವುದು ಬೇಕಿದೆ. ಹಾಗಂತ ಮುಖ ಉಳಿಸಿಕೊಳ್ಳುವ ಮಾರ್ಗ ಹುಡುಕದೇ ಯುದ್ಧಕ್ಕೆ ಅಂತ್ಯ ಹಾಡುವುದು ಸಾಧ್ಯವಿಲ್ಲ. ಅಂತಹದ್ದೊಂದು ಮಾರ್ಗ ಹುಡುಕುವ ಪ್ರಯತ್ನ ಇದೀಗ ನಡೆಯುತ್ತಿರಬಹುದೇ? ಇತ್ತೀಚಿನ ಕೆಲವು ಬೆಳವಣಿಗೆಗಳನ್ನು ಆ ಪ್ರಶ್ನೆಯ ನೆರಳಲ್ಲೇ ನೋಡಬೇಕು.

ಹೋದ ವಾರ ಡೊನಾಲ್ಡ್ ಟ್ರಂಪ್ ಮತ್ತು ವೊಲೊಡಿಮಿರ್ ಝೆಲೆನ್‌ಸ್ಕಿ ಭೇಟಿಯ ವೇಳೆ ನಡೆದ ಮಾತಿನ ಚಕಮಕಿ, ಜಗತ್ತಿನಾದ್ಯಂತ ಪ್ರಮುಖ ಸುದ್ದಿಯಾಗಿ ಬಿತ್ತರವಾಯಿತು. ಶ್ವೇತಭವನದ ಅಧ್ಯಕ್ಷರ ಕೊಠಡಿಯಲ್ಲಿ, ಮಾಧ್ಯಮಗಳ ಎದುರು ನಡೆದ ಟ್ರಂಪ್ ಮತ್ತು ಝೆಲೆನ್‌ಸ್ಕಿ ಅವರ ನಡುವಿನ ವಾಕ್ಸಮರ ಒಂದು ಪ್ರಮುಖ ವಿದ್ಯಮಾನ ಎಂಬುದು ಖರೆಯಾದರೂ ಅನಿರೀಕ್ಷಿತವಲ್ಲ. ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ವೇಳೆ ತಮ್ಮ ಪ್ರಚಾರ ಸಭೆಗಳಲ್ಲಿ 'ನಾನು ಅಧ್ಯಕ್ಷನಾದ ಬಳಿಕ ಉಕ್ರೇನ್ ಯುದ್ಧವನ್ನು 24 ಗಂಟೆಗಳಲ್ಲಿ ಕೊನೆಗೊಳಿಸುತ್ತೇನೆ' ಎಂಬ ಮಾತನ್ನು ಟ್ರಂಪ್ ಆಡುತ್ತಿದ್ದರು. 'ಯುದ್ಧ ಇಷ್ಟು ಕಾಲ ಮುಂದುವರಿದಿದೆ ಎಂದರೆ ಅದಕ್ಕೆ ಬೈಡನ್ ಅವರಂತಹ ದುರ್ಬಲ ಅಧ್ಯಕ್ಷರನ್ನು ಅಮೆರಿಕ ಹೊಂದಿರುವುದೇ ಕಾರಣ' ಎಂದೂ ಕುಟುಕುತ್ತಿದ್ದರು. ಝೆಲೆನ್‌ಸ್ಕಿ ಅವರ ಎದುರು ಇದೀಗ ಟ್ರಂಪ್ ತಾನು 'ಪ್ರಬಲ ಅಧ್ಯಕ್ಷ' ಎಂದು ತೋರಿಸಿಕೊಂಡಿದ್ದಾರೆ! ಝೆಲೆನ್‌ಸ್ಕಿ ಅವರ ಉಡುಗೆಯ ಕುರಿತ ಪ್ರಶ್ನೆಯಿಂದ ಆರಂಭವಾದ, ಅವರನ್ನು ಮುಜುಗರಕ್ಕೆ ಈಡು ಮಾಡುವ ಪ್ರಕ್ರಿಯೆ, ಅವರು ಹೊರನಡೆದು ಹೋಗುವವರೆಗೂ ಮುಂದುವರಿಯಿತು.

ಟ್ರಂಪ್ ಮತ್ತು ಝೆಲೆನ್‌ಸ್ಕಿ ಅವರ ನಡುವಿನ ವಾಕ್ಸಮರಕ್ಕೆ ಪೀಠಿಕೆಯಂತೆ ಕೆಲವು ವಿದ್ಯಮಾನಗಳು ಜರುಗಿದ್ದವು. ಉಕ್ರೇನ್ ಯುದ್ಧದ ಕುರಿತು ಚರ್ಚಿಸಲು ರಿಯಾದ್ ಮತ್ತು ಪ್ಯಾರಿಸ್‌ನಲ್ಲಿ ಎರಡು ಪ್ರತ್ಯೇಕ ಸಭೆಗಳು ನಡೆದವು. ಅಮೆರಿಕ ಮತ್ತು ರಷ್ಯಾದ ವಿದೇಶಾಂಗ ಸಚಿವರ ನೇತೃತ್ವದ ನಿಯೋಗ ರಿಯಾದ್‌ನಲ್ಲಿ ಸಭೆ ಸೇರಿ ಚರ್ಚಿಸಿದರೆ, ಪ್ಯಾರಿಸ್‌ನಲ್ಲಿ ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ನೇತೃತ್ವದಲ್ಲಿ ಐರೋಪ್ಯ ರಾಷ್ಟ್ರಗಳ ಮುಖಂಡರು ತುರ್ತು ಸಭೆ ನಡೆಸಿದರು. ಅಮೆರಿಕ ಮತ್ತು ರಷ್ಯಾದ ನಿಯೋಗವು ಯುದ್ಧವನ್ನು ಕೊನೆಗೊಳಿಸುವ ಮಾರ್ಗದ ಕುರಿತು ಚರ್ಚಿಸಿದರೆ, ಪ್ಯಾರಿಸ್ ಸಭೆಯಲ್ಲಿ ಉಕ್ರೇನ್ ಯುದ್ಧ ಕುರಿತ ಮಾತುಕತೆಯಿಂದ ಐರೋಪ್ಯ ರಾಷ್ಟ್ರಗಳನ್ನು, ಮುಖ್ಯವಾಗಿ ಉಕ್ರೇನನ್ನು ಹೊರಗಿಟ್ಟಿದ್ದರ ಕುರಿತು ಚರ್ಚಿಸಲಾಯಿತು.

ಉಕ್ರೇನ್ ಯುದ್ಧದ ಕುರಿತು ಚರ್ಚಿಸುವಾಗ ಝೆಲೆನ್‌ಸ್ಕಿ ಅವರನ್ನು ಮಾತುಕತೆಯಿಂದ ಹೊರಗಿಟ್ಟಿದ್ದೇಕೆ ಎಂಬ ಪ್ರಶ್ನೆಗೆ ಟ್ರಂಪ್, ಈ ಮಾತುಕತೆಯಲ್ಲಿ ಅವರು ಯಾವುದೇ ಪ್ರಮುಖ ಪಾತ್ರ ವಹಿಸುವುದಿಲ್ಲ ಎಂದಿದ್ದರು! ಅದೇ ಮಾತನ್ನು ಇದೀಗ ಝೆಲೆನ್‌ಸ್ಕಿ ಅವರ ಎದುರೇ ಆಡಿದ್ದಾರೆ. ಬಹುಶಃ ಉಕ್ರೇನ್ ಮತ್ತು ರಷ್ಯಾವನ್ನು ಒಂದೇ ಮೇಜಿನಲ್ಲಿ ಕೂರಿಸಿ ಸಂಧಾನಕ್ಕೆ ಪ್ರಯತ್ನಿಸಿದರೆ ಆ ಪ್ರಯತ್ನಕ್ಕೆ ಯಶ ಸಿಗಲಾರದು ಎಂಬುದು ಟ್ರಂಪ್ ಅವರಿಗೆ ಮನವರಿಕೆಯಾಗಿರಬೇಕು.

ಜೊತೆಗೆ, ರಷ್ಯಾದ ಕ್ರಮಗಳನ್ನು ಖಂಡಿಸುವ ಮತ್ತು ಉಕ್ರೇನ್‌ನ ಪ್ರಾದೇಶಿಕ ಸಮಗ್ರತೆಯನ್ನು ಬೆಂಬಲಿಸುವ ಯುರೋಪಿಯನ್ ಕರಡು ನಿರ್ಣಯವನ್ನು ಅಮೆರಿಕವು ವಿಶ್ವಸಂಸ್ಥೆಯಲ್ಲಿ ವಿರೋಧಿಸಿತು. ಆ ಮೂಲಕ ರಷ್ಯಾ, ಉತ್ತರ ಕೊರಿಯಾ ಮತ್ತು ಬೆಲಾರಸ್ ದೇಶಗಳಂತೆಯೇ ಮತ ಚಲಾಯಿಸಿತು! ನಂತರ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಉಕ್ರೇನ್ ಸಂಘರ್ಷವನ್ನು ಕೊನೆಗೊಳಿಸಲು ಕರೆ ನೀಡಿದ ನಿರ್ಣಯವನ್ನು ಮಂಡಿಸಿ ಮತಕ್ಕೆ ಹಾಕಿದ ಅಮೆರಿಕ, ಆ ನಿರ್ಣಯದಲ್ಲಿ ರಷ್ಯಾದ ಬಗ್ಗೆ ಯಾವುದೇ ಟೀಕೆ ಇರದಂತೆ ನೋಡಿಕೊಂಡಿತು. ಅಮೆರಿಕದ ಮಿತ್ರರಾಷ್ಟ್ರಗಳಾದ ಇಂಗ್ಲೆಂಡ್ ಮತ್ತು ಫ್ರಾನ್ಸ್, ನಿರ್ಣಯವನ್ನು ಬೆಂಬಲಿಸದೇ ಹೊರಗುಳಿದವು.

ಈ ಬೆಳವಣಿಗೆಗಳಿಂದ ಯುರೋಪ್ ಗಲಿಬಿಲಿಗೊಂಡಿತು. ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಮತ್ತು ಇಂಗ್ಲೆಂಡ್ ಪ್ರಧಾನಿ ಕೀರ್ ಸ್ಟಾರ್ಮರ್ ಅಮೆರಿಕಕ್ಕೆ ತೆರಳಿ ಟ್ರಂಪ್ ಅವರನ್ನು ಭೇಟಿ ಮಾಡಿದರು. ಆ ಬಳಿಕವಷ್ಟೇ ಟ್ರಂಪ್ ಮತ್ತು ಝೆಲೆನ್‌ಸ್ಕಿ ಅವರ ಭೇಟಿ ನಡೆದದ್ದು ಮತ್ತು ಮಾಧ್ಯಮಗಳ ಎದುರು ಈ ವಾಕ್ಸಮರದ ವಿಶಿಷ್ಟ ಪ್ರಸಂಗ ಜರುಗಿದ್ದು!

ಉಕ್ರೇನ್ ಯುದ್ಧದ ಕುರಿತು ಐರೋಪ್ಯ ರಾಷ್ಟ್ರಗಳ ನಿಲುವು ಏನಿದೆ ಎಂದು ನೋಡಿದರೆ, ಸದ್ಯದ ಮಟ್ಟಿಗೆ ಅವು ಉಕ್ರೇನನ್ನು ಬೆಂಬಲಿಸುವ ಮಾತನಾಡಿವೆ. ಲಂಡನ್‌ನಲ್ಲಿ ಝೆಲೆನ್‌ಸ್ಕಿ ಅವರ ಜೊತೆ ಸಭೆ ನಡೆಸಿವೆ. ಆದರೆ ರಷ್ಯಾ ಎದುರು ಉಕ್ರೇನ್ ದೇಶವನ್ನು ದೀರ್ಘ ಅವಧಿಗೆ ಬೆಂಬಲಿಸುವ ಆರ್ಥಿಕ ಅಥವಾ ಸಾಮರಿಕ ಶಕ್ತಿ ಐರೋಪ್ಯ ರಾಷ್ಟ್ರಗಳ ಬಳಿ ಇಲ್ಲ. ಹಿಂದಿನ 80 ವರ್ಷಗಳಿಂದಲೂ ಯುರೋಪ್ ತನ್ನ ಭದ್ರತೆಗೆ ಅಮೆರಿಕವನ್ನು ನೆಚ್ಚಿಕೊಂಡಿದೆ. ತನ್ನ ಮತ್ತು ರಷ್ಯಾ ನಡುವೆ ಒಂದು ತಡೆಗೋಡೆಯ ಮಾದರಿಯಲ್ಲಿ ಉಕ್ರೇನ್ ಇರಲಿ ಎಂಬ ಕಾರಣದಿಂದಷ್ಟೇ ಐರೋಪ್ಯ ರಾಷ್ಟ್ರಗಳು ಉಕ್ರೇನ್ ಬೆಂಬಲಕ್ಕೆ ನಿಂತಿವೆ. ಎರಡನೇ ಮಹಾಯುದ್ಧದ ವೇಳೆ ಗಟ್ಟಿಗೊಂಡ ಅಮೆರಿಕ ಮತ್ತು ಯುರೋಪ್ ನಡುವಿನ ಬಾಂಧವ್ಯ, ಟ್ರಂಪ್ ಅವರ ಅವಧಿಯಲ್ಲಿ ಕುಸಿದುಬೀಳುವಷ್ಟು ತೆಳುವಾದಂತೆ ಕಾಣುತ್ತಿದೆ. ಆ ಬಾಂಧವ್ಯ ಕಾಯ್ದುಕೊಳ್ಳಬೇಕಾದರೆ, ಅಮೆರಿಕದ ಆಣತಿಯಂತೆ ಪಾತ್ರಧಾರಿಯಾಗಿ ತೆರೆಯ ಮೇಲೆ ಕಾಣಿಸಿಕೊಳ್ಳಲೇಬೇಕು. ಝೆಲೆನ್‌ಸ್ಕಿ ಅವರನ್ನು ಒಪ್ಪಿಸಿ ಸಂಧಾನದ ಮೇಜಿಗೆ ಕರೆತರಬೇಕು. ಆ ಪ್ರಯತ್ನ ಲಂಡನ್ನಿನಲ್ಲಿ ನಡೆದಿದೆ.



ಹಾಗಾದರೆ, ನಿಜಕ್ಕೂ ಟ್ರಂಪ್ ಏನನ್ನು ಸಾಧಿಸ ಹೊರಟಿದ್ದಾರೆ? ಉಕ್ರೇನ್ ಯುದ್ಧದಲ್ಲಿ ಸೋಲು– ಗೆಲುವು ಎಂಬ ನಿಖರ ಫಲಿತಾಂಶ ಇರುವುದಿಲ್ಲ ಎಂಬುದು ಈಗಾಗಲೇ ಯುದ್ಧದ ಪಾತ್ರಧಾರಿಗಳಿಗೆ ಮನವರಿಕೆಯಾಗಿದೆ. ಹಾಗಾಗಿ, ಸಂಧಾನದ ಮೂಲಕವೇ ಯುದ್ಧಕ್ಕೆ ಅಂತ್ಯ ಹಾಡಬೇಕು. ಅದು ಅಮೆರಿಕದ ಮೂಲಕವೇ ಆದರೆ ಪರಿಣಾಮಕಾರಿ ಎಂದು ರಷ್ಯಾ ಬಯಸುತ್ತಿದೆ ಮತ್ತು ಟ್ರಂಪ್ ಅವರಿಗೂ ಅದು ಕಾಲರ್ ಏರಿಸಿಕೊಳ್ಳುವ ಅವಕಾಶ. ಆದರೆ ಅಂತಹದ್ದೊಂದು ಸಂಧಾನಕ್ಕೆ ಅಡ್ಡಗಾಲಾಗಿರುವುದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ. 2014ರಿಂದ ಈಚೆಗೆ ಕ್ರಿಮಿಯಾ ಸೇರಿದಂತೆ ರಷ್ಯಾ ವಶಪಡಿಸಿಕೊಂಡಿರುವ ಅಷ್ಟೂ ಭೂಭಾಗವನ್ನು ಸಂಪೂರ್ಣವಾಗಿ ಬಿಟ್ಟುಕೊಡಬೇಕು ಎಂದು ಝೆಲೆನ್‌ಸ್ಕಿ ಪಟ್ಟು ಹಿಡಿದಿದ್ದಾರೆ. ಆದರೆ ತನ್ನ ವಶದಲ್ಲಿರುವ ಕ್ರಿಮಿಯಾ ಮತ್ತು 2022ರ ಬಳಿಕ ವಶ ಮಾಡಿಕೊಂಡ ಪ್ರದೇಶಗಳನ್ನು ಸಂಧಾನದ ಮೂಲಕ ಬಿಟ್ಟುಕೊಟ್ಟರೆ ಅದು ಸೋಲು ಎಂದು ರಷ್ಯಾ ಭಾವಿಸಿದೆ. ಪುಟಿನ್ ಅದಕ್ಕೆ ಸಿದ್ಧರಿಲ್ಲ.

ಉಕ್ರೇನ್ ಜನತೆ ಝೆಲೆನ್‌ಸ್ಕಿ ಅವರ ಬೆನ್ನಿಗೆ ನಿಂತಿರುವುದರಿಂದ ಅವರನ್ನು ಬದಲಿಸುವ ಆಯ್ಕೆ ಅಮೆರಿಕದ ಬಳಿ ಇಲ್ಲ. ಹಾಗಾಗಿ, ಬೆದರಿಸುವ ಮಾರ್ಗವನ್ನು ಅಮೆರಿಕ ತುಳಿದಿದೆ. ಶಸ್ತ್ರಾಸ್ತ್ರ ಮತ್ತು ಆರ್ಥಿಕ ನೆರವು ನಿಲ್ಲಿಸುವ ಮಾತನಾಡಿದೆ. ರಷ್ಯಾವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು, ಟ್ರಂಪ್- ಝೆಲೆನ್‌ಸ್ಕಿ ನಡುವಿನ ವಾಕ್ಸಮರ ಮಾಧ್ಯಮಗಳ ಎದುರು ನಡೆದಿದೆ.

ಟ್ರಂಪ್ ಸಂಕೀರ್ಣ ಸಮಸ್ಯೆಗಳನ್ನು ನಿಭಾಯಿಸುವುದರಲ್ಲಿ ನಿಸ್ಸೀಮ. ಹಿಂದಿನ ಅವಧಿಯಲ್ಲಿ ಉತ್ತರ ಕೊರಿಯಾವು ದೂರಗಾಮಿ ಅಣ್ವಸ್ತ್ರ ಕ್ಷಿಪಣಿಗಳನ್ನು ಪರೀಕ್ಷಿಸಿ, ಅಮೆರಿಕದ ಯಾವುದೇ ಮೂಲೆಯನ್ನು ನಾವು ತಲುಪಬಲ್ಲೆವು ಎಂದು ಧಮಕಿ ಹಾಕಿತ್ತು. ಆ ಬೆದರಿಕೆಯನ್ನು ತಮ್ಮದೇ ರೀತಿಯಲ್ಲಿ ನಿರ್ವಹಿಸಿದ ಟ್ರಂಪ್, ಉತ್ತರ ಕೊರಿಯಾದ ಅಧ್ಯಕ್ಷರ ಜೊತೆಗೆ ಕೈ ಹಿಡಿದು ಅವರ ದೇಶದ ಗಡಿಯನ್ನು ಪ್ರವೇಶಿಸಿ ಜಗತ್ತನ್ನು ಅಚ್ಚರಿಗೆ ದೂಡಿದ್ದರು.

ಇದೀಗ ಮತ್ತೊಮ್ಮೆ ಟ್ರಂಪ್ ಅಚ್ಚರಿಯ ಹೆಜ್ಜೆ ಇಡುತ್ತಿದ್ದಾರೆ. ಉಕ್ರೇನ್ ಯುದ್ಧ ಹೆಚ್ಚು ಕಾಲ ಮುಂದುವರಿಯಲಾರದು. ಮುಖಭಂಗವಾಗದಂತೆ ಯುದ್ಧ ಅಂತ್ಯಗೊಳ್ಳುವುದಾದರೆ, ಟ್ರಂಪ್ ಅವರೊಂದಿಗೆ ಸಹಕರಿಸಲು ರಷ್ಯಾ ಸಿದ್ಧವಿದೆ. ಝೆಲೆನ್‌ಸ್ಕಿ ಮತ್ತು ಉಕ್ರೇನಿಗೆ ಅಮೆರಿಕದೊಂದಿಗೆ ಸಹಕರಿಸದೇ ಬೇರೆ ಆಯ್ಕೆ ಇದ್ದಂತಿಲ್ಲ. ನ್ಯಾಟೊ ಭಾಗವಾಗಬೇಕು ಎಂಬ ಕನಸನ್ನು ಬಿಟ್ಟುಕೊಟ್ಟು, ಕ್ರಿಮಿಯಾವನ್ನು ಮರುಪಡೆದುಕೊಳ್ಳುವ ಇಂಗಿತ ತೊರೆದು, ಅಮೆರಿಕದಿಂದ ಭದ್ರತೆಯ ಅಭಯ ಪಡೆದು, ತಮಗೆ ಬೇಕಾದ್ದನ್ನು ಸಾಧ್ಯವಾದಷ್ಟರ ಮಟ್ಟಿಗೆ ಮಾತುಕತೆಯ ಮೂಲಕ ಪಡೆದುಕೊಳ್ಳುವುದು ಚಾಣಾಕ್ಷ ನಡೆ.

ಚುರುಮುರಿ



ಬೊಜ್ಜುಗಾರಿಕೆ

• ಡಿ.ಎಸ್.ಲಿಂಗರಾಜು

'ಸಾ, ನೀವ್ಯಾಕೆ ಬಾಡು-ಬಳ್ಳೆ ಬುಟ್ಟು ಮೋದಿ ಮಹಾರಾಜರ ಬೊಜ್ಜು ಅಭಿಯಾನಕ್ಕೆ ಸೇರಿಕ್ಯಂದು ಬೊಜ್ಜು ತ್ಯಾಗ ಮಾಡಬಾರದು?' ಅಂತ ಸಲಹೆ ಕೊಟ್ಟೆ.

'ಬೊಡ್ಡಿಹೈದ್ನೆ, ಬಾಡು-ಹಿಟ್ಟಿನ ಬಾಡುಗಾರಿಕೆಯಲ್ಲಿ ಪಾನೀಕರಿಗೆ ಬೊಜ್ಜು ಪಕ್ಕವಾದ್ಯ ಇದ್ದಂಗೆ ಕನೋ. 'ನೀವೂ ಬಾಡು ತಿನ್ನಿ ಎಲ್ಲರಿಗೂ ಬಾಡು ತಿನ್ನಿಸಿ' ಅಂಬೋ ಬೊಜ್ಜಿನಕೂಟ ನಮ್ಮದು' ಅವರ ಉತ್ತರಕ್ಕೆ ದಂಗಾದೆ.

'ಅಂದ್ರೆ ಬೊಜ್ಜುಗಾರರ ಮೆನು ಕಿ ಬಾತಿನಲ್ಲಿ ಬಾಡು ಇರಲೇಬೇಕು' ಅಂತಂದೆ.

'ನೋಡ್ಲಾ, ಮೋದಿ ಮಹಾರಾಜರು ಅದಬುಡಿ, ಇದಬುಡಿ ಅಂತ ಹೇಳ್ತನೇ ಇರತರೆ. ಉಳ್ಳೋರೆಲ್ಲಾ ಗ್ಯಾಸ್ ಸಬ್ಸಿಡಿ ಬುಟ್ಕೊಡಿ ಅಂದುದ್ಕೆ ಎಷ್ಟು ಜನ ರಾಜಕಾರಣಿಗಳು ಸಬ್ಸಿಡಿ ಬುಟ್ಕೊಟ್ರು? ಯಾರಿಗೂ ಕಾಣದಂಗೆ ಗ್ಯಾಸ್ ಸಬ್ಸಿಡಿನೇ ಎಪ್ಪೆಸ್ ಆಗೋಯ್ತು' ಅಂತ ನೊಂದ್ಕಂದರು.

'ದಿಟ ಸಾ, ಮೋದಿ ಮಹಾರಾಜರು ಕರ್ನಾಟಕದ ಎಲ್ಲ ರಾಜಕಾರಣಿಗಳೂ ಒಂದು ತಿಂಗಳಲ್ಲಿ ಹತ್ತು ಕೇಜಿ ತೂಕ ಇಳಿಸಲೇಬೇಕು ಅಂತ ಅಭಿಯಾನ ಮಾಡಬಕು. ಯಾಕೆಂದ್ರೆ ಕೂತ ಕಡೆಗೇ ಕಾಸು ಬರಕ್ಕೆ ಸುರುವಾದಾಗ್ಲೇ ಮುದಿಮೋಹ, ಕೊಬ್ಬಿನ ಭಾರ, ಪಿತ್ತಭ್ರಮೆ ಬರದು' ತುರೇಮಣೆ ಮಾತಿಗೆ ನಾನು ಒಪ್ಪಿದೆ.

'ಮೋದಿ ಮಾರಾಜರ ಮಾತು ಕೇಳಬಾರದು ಅಂತ ಸಿಎಂ ಈ ಸಾರಿ ಕೂಕಂದೇ ಸಿಟ್ಟಿನ ಬಜೆಟ್ ಮಾಡ್ತರಂತೆ. ಈ ಬೇಗುದಿಯಲ್ಲಿ ಯಾರ್‍ಯಾರಿಗೆ ಬೈತಾರೋ ಕಾಣೆ' ಯಂಟಪ್ಪಣ್ಣ ಒಗ್ಗರಣೆ ಹಾಕಿತು.

'ಇವರು ಯಾವಾಗ ಎದ್ದಾರೋ ಅಂತ ಆಕಾಂಕ್ಷಿಗಳು ಗೋ-ನಾಮ ಹಾಡ್ತಾವ್ರೆ. ಸಿಎಂ ಮಾತ್ರ 'ನಾನು ಎದ್ರೆ ತಾನೆ. ನಾನು ಕೂತ ಮ್ಯಾಲೆ ನನ್ನದೇ ಹವಾ' ಅಂತ ನಾಟಿಪಟ್ಟು ಹಾಕ್ಯವ್ರಂತೆ' ಅಂದ್ರು ತುರೇಮಣೆ.

'ಯಂಗನ್ನಾ ಆಗ್ಲಿ ಈ ಸಾರಿ ಬಜೆಟ್ಟಲ್ಲಿ ತೀರ್ಥರೂಪರಿಗೆಲ್ಲಾ ವಿಸ್ಕಿ ನಿಧಿ ಯೋಜನೆಯಲ್ಲಿ ಬಾರಿಂದ ಮನೆಗೆ ಫ್ರೀ ಬಸ್ಸಿನ ಪಾನೀಕ ಶಕ್ತಿಭಾಗ್ಯ ಕೊಡಬೇಕು ಅಂತ ಪೆಗ್ಗುಪ್ರಣಾಮ ಮಾಡ್ತುದವಿ' ಅಂತ ಬಾಯಿ ಚಪ್ಪರಿಸಿದೆ.

ಸಂಗತ

ನೀರಿನ ಮಹತ್ವ: ಮಕ್ಕಳು ಮನಗಾಣಲಿ

ವಿದ್ಯಾರ್ಥಿಗಳ ತಲೆನೋವಿಗೆ ಶರೀರದಲ್ಲಿನ ನೀರಿನ ಕೊರತೆ ಪ್ರಮುಖ ಕಾರಣ

• ಡಾ. ಮುರಳೀಧರ ಕಿರಣಕೆರೆ

ಅದು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಒತ್ತಡ ನಿರ್ವಹಣಾ ಕಾರ್ಯಾಗಾರ. ಭಯಮುಕ್ತರಾಗಿ, ಆತ್ಮವಿಶ್ವಾಸದಿಂದ ಪರೀಕ್ಷೆಗೆ ಸಿದ್ಧರಾಗುವ ಬಗ್ಗೆ ಸಲಹೆ ನೀಡುತ್ತಾ, ಮಾನಸಿಕ ಸ್ವಾಸ್ಥ್ಯದ ಜೊತೆಗೆ ದೈಹಿಕ ಆರೋಗ್ಯದ ಮಹತ್ವವನ್ನು ವಿವರಿಸುವಾಗ ಸಾಮಾನ್ಯ ಪ್ರಶ್ನೆಯೊಂದನ್ನು ವಿದ್ಯಾರ್ಥಿಗಳ ಮುಂದಿಟ್ಟಿದ್ದೆ. 'ನಿಮ್ಮಲ್ಲಿ ಎಷ್ಟು ಮಕ್ಕಳಿಗೆ ಆಗಾಗ್ಗೆ ತಲೆನೋವು ಕಾಡಿಸುತ್ತಾ ಅಭ್ಯಾಸಕ್ಕೆ ತೊಂದರೆಯಾಗುತ್ತಿದೆ?' ಪ್ರತಿಕ್ರಿಯೆ ನಿಜಕ್ಕೂ ಗಾಬರಿಗೊಳಿಸುವಂತಿತ್ತು! ಸುಮಾರು ಮೂರನೇ ಒಂದರಷ್ಟು ಮಕ್ಕಳು ತಮಗೆ ಸಮಸ್ಯೆಯಿದೆ ಎಂದು ಕೈಯೆತ್ತಿದ್ದರು. ಅದರಲ್ಲೂ ಹುಡುಗಿಯರ ಸಂಖ್ಯೆಯೇ ದೊಡ್ಡದಿತ್ತು.

ಶಾಲೆ, ಕಾಲೇಜು ಹಂತದಲ್ಲಿ ವಿದ್ಯಾರ್ಥಿಗಳಿಗೆ ಆಗಾಗ್ಗೆ ತಲೆನೋವು ಬರಲು ಪ್ರಮುಖ ಕಾರಣವೇ ಶರೀರದಲ್ಲಿ ನೀರಿನ ಕೊರತೆ. ನೀರಿನಾಂಶ ಕಮ್ಮಿಯಾದಾಗ ದೇಹ ತೋರುವ ಮೊದಲ ಸೂಚನೆ ತಲೆನೋವು. ನಿದ್ದೆಯ ಕೊರತೆ, ಶೀತ, ಜ್ವರ, ದೃಷ್ಟಿದೋಷ, ರಸದೂತಗಳ ಏರುಪೇರು, ವಾತಾವರಣದಲ್ಲಿನ ವ್ಯತ್ಯಾಸದಂತಹ ಕಾರಣಗಳಿಂದ ತಲೆನೋವು ಬರಬಹುದಾಗಿದ್ದರೂ ಇಂತಹ ಸಂದರ್ಭಗಳು ಅಪರೂಪ. ಹಾಗಾಗಿ, ಶರೀರದಲ್ಲಿ ನಿರ್ಜಲೀಕರಣ ಆಗದಂತೆ ನೋಡಿಕೊಳ್ಳುವುದೇ ತಲೆಶೂಲೆಯೆಂಬ ಸಾಮಾನ್ಯ ಸಮಸ್ಯೆಗೆ ಸರಳ ಪರಿಹಾರ.

ಸಾಧಾರಣವಾಗಿ ಹದಿಹರೆಯದ ಮಕ್ಕಳು ಪ್ರತಿನಿತ್ಯ ಕನಿಷ್ಠ ಎರಡು ಲೀಟರ್, ಅಂದರೆ ಏಳೆಂಟು ದೊಡ್ಡ ಲೋಟಗಳಷ್ಟು ನೀರು ಕುಡಿಯಬೇಕು. ಇನ್ನು ಆಟೋಟ, ವ್ಯಾಯಾಮದಂತಹ ಕಸರತ್ತುಗಳನ್ನು ಮಾಡಿದಾಗ ಹೆಚ್ಚು ಹೆಚ್ಚು ಬೆವರುವುದರಿಂದ ಶರೀರದ ನೀರಿನ ಬೇಡಿಕೆಯೂ ಏರುತ್ತದೆ. ಆದರೆ ಬಹುತೇಕ ಮಕ್ಕಳು ದಿನಕ್ಕೆ ಎರಡು, ಮೂರು ಲೋಟಗಳಷ್ಟೂ ನೀರು ಕುಡಿಯುವುದಿಲ್ಲ. ನಮ್ಮ ಎಳೆಯರಿಗೆ ನೀರಿನ ಮಹತ್ವದ ಬಗ್ಗೆ ಸರಿಯಾದ ಅರಿವಿಲ್ಲದಿರುವುದೇ ಇದಕ್ಕೆ ಕಾರಣ. ಬರೀ ಕಿರಿಯರು ಅಂತಲ್ಲ, ಹಿರಿಯರೂ ತಲೆನೋವಿನಿಂದ ಬಳಲುವುದಕ್ಕೆ ಪ್ರಮುಖ ಕಾರಣ ನೀರಿನ ಕೊರತೆಯೆ.

ನೀರು ಜೀವಜಲ. ಎಲ್ಲ ಶಾರೀರಿಕ ಕ್ರಿಯೆಗಳಿಗೂ ನೀರು ಬೇಕೇ ಬೇಕು. ನೀರು ಕಡಿಮೆಯಾದಾಗ ದೇಹದ ಕಾರ್ಯಗಳು ಕುಂಠಿತವಾಗುತ್ತವೆ. ರಕ್ತಪರಿಚಲನೆಯ ವೇಗ ಕುಂದುತ್ತದೆ, ಮೆದುಳಿಗೆ ಸಮರ್ಪಕವಾಗಿ ರಕ್ತ ಸರಬರಾಜು ಆಗದೇ ಇದ್ದಾಗ ದೇಹದ ಈ ನಿಯಂತ್ರಣಾಂಗದ ಕಾರ್ಯಕ್ಷಮತೆ ಕುಂದುತ್ತದೆ. ನೀರಿನಾಂಶದ ಕೊರತೆಯಾದರೆ ಬಾಯಿ ಒಣಗುತ್ತದೆ. ಸುಸ್ತು, ತಲೆಸುತ್ತು, ನಿರುತ್ಸಾಹದಂತಹ ಲಕ್ಷಣಗಳು ಕಾಣಿಸುತ್ತವೆ. ಮಕ್ಕಳು ಇದನ್ನೆಲ್ಲಾ ಮುಚ್ಚಿಡುವುದೇ ಹೆಚ್ಚು. ತಲೆನೋವು ಬಾಧಿಸುವುದರಿಂದ ಏಕಾಗ್ರತೆ ಸಿಗದು. ಗಮನವಿಟ್ಟು ಓದಲಾಗದಾಗ ಪಠ್ಯವನ್ನು ಅರ್ಥೈಸಿಕೊಳ್ಳುವುದು ಕಷ್ಟ. ಸರಿಯಾಗಿ ಪರೀಕ್ಷೆಗೆ ತಯಾರಾಗಲು ಸಾಧ್ಯವಾಗದೇ ಇದ್ದಾಗ ಆತಂಕವೂ ಏರುತ್ತದೆ. ಇದರಿಂದ ಮತ್ತಷ್ಟು ಭೀತಿಗೊಳಗಾಗುವ ಮಕ್ಕಳು ಸಹಜವಾಗಿಯೇ ಕಡಿಮೆ ಅಂಕ ಗಳಿಸುತ್ತಾರೆ. ಒಮ್ಮೆ ಆತ್ಮವಿಶ್ವಾಸಕ್ಕೆ ಧಕ್ಕೆಯಾದರೆ ಇದರ ಪರಿಣಾಮ ಮುಂದಿನ ಪರೀಕ್ಷೆಗಳ ಮೇಲೂ ಆಗುವುದರಿಂದ ಶೈಕ್ಷಣಿಕವಾಗಿ ಹಿನ್ನಡೆಯಾಗುತ್ತದೆ.

ಸರಿಯಾದ ಪ್ರಮಾಣದಲ್ಲಿ ನೀರು ಕುಡಿಯದಿರುವುದಕ್ಕೆ ತಿಳಿವಳಿಕೆಯ ಕೊರತೆಯೊಂದೇ ಕಾರಣವಲ್ಲ. ನೀರಿಗೆ ಇತರ ಪಾನೀಯಗಳಂತೆ ರುಚಿ ಇಲ್ಲದ್ದರಿಂದ ಇದು ಮಕ್ಕಳಿಗೆ ರುಚಿಸದು. ಶಾಲೆಗಳಲ್ಲಿ ಕುಡಿಯಲು ಶುದ್ಧ ನೀರಿನ ಅಲಭ್ಯತೆ, ಮನೆಯಿಂದ ಬಾಟಲಿಗಳಲ್ಲಿ ನೀರು ತೆಗೆದುಕೊಂಡು ಹೋಗಲು ಸೋಮಾರಿತನ, ಪೋಷಕರು ಒತ್ತಾಯಿಸದಿರುವಂತಹ ಕಾರಣಗಳಿಂದಲೂ ಎಳೆಯರು ಅಗತ್ಯವಿರುವಷ್ಟು ನೀರು ಕುಡಿಯುವುದಿಲ್ಲ. ಮಕ್ಕಳು ಅದರಲ್ಲೂ ಹೆಣ್ಣುಮಕ್ಕಳು ಹಿಂಜರಿಯಲು ಮತ್ತೊಂದು ಪ್ರಮುಖ ಕಾರಣ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಸರಿಯಿಲ್ಲದಿರುವುದು. ಹೆಚ್ಚು ನೀರು ಕುಡಿದರೆ ಮತ್ತೆ ಮತ್ತೆ ಮೂತ್ರ ವಿಸರ್ಜನೆಗೆ ಹೋಗಬೇಕಾಗುತ್ತದೆ. ಶೌಚಾಲಯ ಕೊಳಕಾಗಿದ್ದರೆ ಸಹಜವಾಗಿಯೇ ಅದನ್ನು ಬಳಸಲು ಮಕ್ಕಳು ಹಿಂದೇಟು ಹಾಕುತ್ತಾರೆ.



ಪ್ರತಿ ಶಾಲೆಯೂ ಶೌಚಾಲಯ ಹೊಂದಿರಬೇಕಾದದ್ದು ಕಡ್ಡಾಯವಾದ್ದರಿಂದ ಎಲ್ಲೆಡೆ ಕಟ್ಟಡಗಳಂತೂ ಇವೆ. ಆದರೆ, ಮಕ್ಕಳ ಸಂಖ್ಯೆಗೆ ಅಗತ್ಯವಿರುವಷ್ಟು ಶೌಚಾಲಯಗಳು ಇಲ್ಲದಿರುವುದು, ಕಿಟಕಿ- ಬಾಗಿಲು ಸರಿಯಿಲ್ಲದಿರುವುದು, ಸ್ವಚ್ಛತೆ ಇಲ್ಲದಿರುವುದು, ಶೌಚಾಲಯಗಳಿದ್ದರೂ ಬಳಸಲು ನೀರಿಲ್ಲದೆ ಗಬ್ಬು ನಾರುತ್ತಿರುವುದು ವಾಸ್ತವ ಸ್ಥಿತಿ. ನಿರ್ವಹಣೆ ಸರಿ ಇಲ್ಲದಿದ್ದಾಗ ಈ ಜಾಗಗಳೇ ಸೋಂಕು ಹರಡಿಸುತ್ತಾ ಅನಾರೋಗ್ಯಕ್ಕೆ ಕಾರಣವಾಗುವ ಅಪಾಯವಿದೆ.

ನೀರು ಕುಡಿದರೂ ಶೌಚಕ್ಕೆ ಸರಿಯಾದ ವ್ಯವಸ್ಥೆ ಇಲ್ಲದಾಗ ಮೂತ್ರವನ್ನು ಕಟ್ಟಿಕೊಳ್ಳುವುದೂ ಹಲವು ಸಮಸ್ಯೆಗಳಿಗೆ ಕಾರಣವಾಗುತ್ತದೆ. ಮೂತ್ರಪಿಂಡ, ಮೂತ್ರಕೋಶದ ಸೋಂಕು, ವಿಸರ್ಜನಾಂಗಗಳು, ಕುಹರದ ಸ್ನಾಯು ಸಾಮರ್ಥ್ಯ ಕುಂದುವುದು, ಉರಿ ಮೂತ್ರ, ಮೂತ್ರಜನಕಾಂಗದಲ್ಲಿ ಹರಳುಗಳಾಗುವುದು, ರಕ್ತದೊತ್ತಡದಲ್ಲಿ ಏರಿಳಿತ, ಜೀರ್ಣಕ್ರಿಯೆಯಲ್ಲಿ ತೊಂದರೆಗಳು ಕಾಣಿಸಬಹುದು. ಹಾಗಾಗಿ ಮಲ, ಮೂತ್ರದ ವಿಸರ್ಜನೆಯನ್ನು ದೀರ್ಘ ಅವಧಿಯವರೆಗೆ ತಡೆಹಿಡಿಯುವುದು ಗಂಭೀರ ಸಮಸ್ಯೆಗಳಿಗೆ ಆಹ್ವಾನವಿತ್ತಂತೆ.

ಎಳೆಯರಲ್ಲಿ ಈ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಶೌಚಾಲಯಗಳನ್ನು ಬಳಕೆಗೆ ಯೋಗ್ಯವಾಗುವಂತೆ ನಿರ್ವಹಣೆ ಮಾಡುವುದು ಮಕ್ಕಳ ಸಮಗ್ರ ಬೆಳವಣಿಗೆ ದೃಷ್ಟಿಯಿಂದ ಅತ್ಯಗತ್ಯ ಕಾರ್ಯ. ಆಡಳಿತ ವ್ಯವಸ್ಥೆ ಈ ದಿಸೆಯಲ್ಲಿ ಗಂಭೀರವಾಗಿ ಗಮನಹರಿಸಿ, ಶಾಲಾ ಶೌಚಾಲಯಗಳ ಸುಸ್ಥಿತಿ, ಸೂಕ್ತ ನೀರಿನ ಸೌಲಭ್ಯ ಒದಗಿಸುವತ್ತ ಚಿತ್ತ ಹರಿಸಬೇಕಾದದ್ದು ಸ್ವಸ್ಥ ಸಮಾಜದ ನಿರ್ಮಾಣದಲ್ಲಿ ಪ್ರಮುಖ ಹೆಜ್ಜೆಯೇ ಸರಿ.

ವಾಚಕರ ವಾಣಿ

ಕುವೆಂಪು ವಿಶ್ವವಿದ್ಯಾಲಯ: ಬಾರದ ಕನ್ನಡ ಪಠ್ಯಪುಸ್ತಕ

ಕುವೆಂಪು ವಿಶ್ವವಿದ್ಯಾಲಯದ ಎರಡು, ನಾಲ್ಕು, ಆರನೆಯ ಸೆಮಿಸ್ಟರ್ ಸ್ನಾತಕ ಪದವಿ ತರಗತಿಗಳು ಪ್ರಾರಂಭವಾಗಿ ಒಂದು ತಿಂಗಳು ಕಳೆಯುತ್ತ ಬಂದರೂ ಬಿ.ಎ., ಬಿ.ಎಸ್ಸಿ, ಬಿ.ಸಿ.ಎ.ನಂತಹ ಪ್ರಮುಖ ತರಗತಿಗಳಿಗೆ ಕನ್ನಡ ಪಠ್ಯಪುಸ್ತಕಗಳು ಇನ್ನೂ ಪ್ರಕಟಣೆ ಕಂಡಿಲ್ಲ. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯುಂಟಾಗಿದೆ. ಜೊತೆಗೆ ಪಾಠ, ಪ್ರವಚನ ಮಾಡದಿದ್ದರೂ ಕಿರುಪರೀಕ್ಷೆಗಳನ್ನು ಆಯೋಜಿಸುವ ಅನಿವಾರ್ಯ ಸ್ಥಿತಿ ಅಧ್ಯಾಪಕರದ್ದಾಗಿದೆ. ಆದ್ದರಿಂದ ಕನ್ನಡ ಪಠ್ಯಪುಸ್ತಕಗಳನ್ನು ಸಕಾಲದಲ್ಲಿ ಒದಗಿಸದೆ ಕರ್ತವ್ಯಲೋಪ ಎಸಗಿರುವವರಿಗೆ, ಮುಂದೆ ಹೀಗಾಗದಂತೆ ಸೂಕ್ತ ಎಚ್ಚರಿಕೆಯ ಕ್ರಮವನ್ನು ವಿಶ್ವವಿದ್ಯಾಲಯ ಕೈಗೊಳ್ಳಬೇಕಿದೆ. **ಸಂಪತ್ ಬೆಟ್ಟಗೆರೆ,** ಮೂಡಿಗೆರೆ

ಸ್ಮಾರಕ ಸಂರಕ್ಷಣೆ: ಸ್ಥಳೀಯರ ಹೊಣೆ

ಪುರಾತನ ಸ್ಮಾರಕಗಳ ಪುನಶ್ಚೇತನದ ಅಗತ್ಯದ ಬಗೆಗಿನ ಲೇಖನ (ಒಳನೋಟ, ಮಾರ್ಚ್ 2) ಅನುದಾನದ ಕೊರತೆಯ ಬಗೆಗೇ ಹೆಚ್ಚಿನ ಒತ್ತು ಕೊಟ್ಟಿದೆ. ಪರಂಪರೆ ಎಂದರೆ ಮುಖ್ಯವಾಗಿ ಸಮಾಜಕ್ಕೆ ಸಂಬಂಧಿಸಿದ್ದು, ಬರೀ ಸರ್ಕಾರದ ಹೊಣೆ ಅಲ್ಲ. ಸಂರಕ್ಷಣೆಯಲ್ಲಿ ಸ್ಥಳೀಯರ ಸಹಕಾರವನ್ನು ಕಾಣುವುದೇ ಅಪರೂಪ. ಅತಿಕ್ರಮಣ ಮಾಡಿ ಮನೆ ಕಟ್ಟಿಕೊಳ್ಳುವುದು, ಸ್ಮಾರಕಗಳನ್ನು ವಿರೂಪಗೊಳಿಸುವುದು, ಸ್ವಚ್ಛತೆ ಕಾಪಾಡದಿರುವುದು- ಇವನ್ನೆಲ್ಲ ಹೊರಗಿನವರು ಮಾಡುವರೇ?

ಮನಸ್ಸು ಮಾಡಿದರೆ ಕೆಲವು ಸ್ಮಾರಕಗಳನ್ನು ಆ ಊರಿನವರೇ ರಕ್ಷಿಸಬಹುದು. ಅವುಗಳ ಮಹತ್ವದ ಬಗೆಗೆ ಪ್ರಚಾರವನ್ನು ಕೂಡ ಮಾಡಬಹುದು. ಉದಾಹರಣೆಗೆ, ಗೌರಿಬಿದನೂರು ತಾಲ್ಲೂಕಿನ ಕಲ್ಲೂಡಿ ಗ್ರಾಮದ ಬಳಿ ಇದ್ದ ಕ್ರಿ.ಶ. 1388ರ ಶಿಲಾಶಾಸನವನ್ನು 1955ರಲ್ಲಿ ಆಚಾರ್ಯ ಪ್ರೌಢಶಾಲೆ ಬಳಿ ಇರಿಸಿದ್ದರು. 2019ರಲ್ಲಿ ಅದನ್ನು ಎಚ್.ನರಸಿಂಹಯ್ಯ ವಿಜ್ಞಾನ ಕೇಂದ್ರಕ್ಕೆ ನೀಡಲಾಯಿತು. ಖಾಸಗಿ ವ್ಯಕ್ತಿಯೊಬ್ಬರು ಆ ಶಾಸನದ ಪ್ರಚಾರಕ್ಕಾಗಿ ಒಂದು ಲಕ್ಷ ರೂಪಾಯಿ ದೇಣಿಗೆ ನೀಡಿದ್ದಾರೆ. ನೂರು ಅಡಿ ಆಳದಲ್ಲಿ ಸಿಕ್ಕಿದ ಪುರಾತನ ಮರವೊಂದರ ಕಾಂಡವನ್ನೂ ಇದೇ ವಿಜ್ಞಾನ ಕೇಂದ್ರದಲ್ಲಿ ಸಂರಕ್ಷಿಸಿ ಇಡಲಾಗಿದೆ. ಸ್ಥಳೀಯರು ಇಂತಹ ವಿಷಯಗಳಲ್ಲಿ ಮೊದಲು ಆಸಕ್ತಿ ವಹಿಸಬೇಕು. ಆಮೇಲೆ ಸರ್ಕಾರ, ಸಂಘ– ಸಂಸ್ಥೆಗಳ ನೆರವೂ ಸಿಗಬಹುದು. **ಎಚ್.ಎಸ್.ಮಂಜುನಾಥ,** ಗೌರಿಬಿದನೂರು

ನವರಸಪುರ ಉತ್ಸವಕ್ಕೆ ಜೀವ ಬರಲಿ

ವಿಜಯಪುರ ಜಿಲ್ಲೆಯ ಕಲೆ, ಸಂಸ್ಕೃತಿ, ಇತಿಹಾಸ, ಸಾಹಿತ್ಯ ಪರಂಪರೆಯನ್ನು ಬಿಂಬಿಸುವ ನವರಸಪುರ ರಾಷ್ಟ್ರೀಯ ಉತ್ಸವವು 1990ರಲ್ಲಿ ಮೊದಲ ಬಾರಿಗೆ ಆರಂಭವಾಯಿತು. ಇಲ್ಲಿಯವರೆಗೂ ಹದಿಮೂರು ಬಾರಿ ಮಾತ್ರ ಉತ್ಸವ ಜರುಗಿದೆ. 2015ರ ಫೆಬ್ರುವರಿ ಅಂತ್ಯದಲ್ಲಿ 13ನೇ ಉತ್ಸವ ನಡೆದಿತ್ತು. ಬರ ಮತ್ತು ಅತಿವೃಷ್ಟಿಯ ಕಾರಣ ನೀಡಿ ಈ ಉತ್ಸವವನ್ನು ರದ್ದುಪಡಿಸುತ್ತಾ ಬರಲಾಗುತ್ತಿದೆ. ಆದರೆ ವಿಜಯಪುರದ ಅಕ್ಕಪಕ್ಕದ ಜಿಲ್ಲೆಗಳಲ್ಲಿ ನಿಗದಿತ ಉತ್ಸವಗಳನ್ನು ತಪ್ಪದೇ ಆಚರಿಸುತ್ತಾ ಬರಲಾಗಿದೆ. ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ಇತ್ತೀಚೆಗೆ 'ರನ್ನ ವೈಭವ' ಉತ್ಸವವು ವಿಜೃಂಭಣೆಯಿಂದ ನೆರವೇರಿತು. ಉಳಿದೆಲ್ಲ ಉತ್ಸವಗಳಿಗೆ ಅಡ್ಡಿಯಾಗದ ಸಮಸ್ಯೆಗಳು ನವರಸಪುರ ಉತ್ಸವಕ್ಕೆ ಮಾತ್ರ ಕಾಡುವುದು ಏಕೆ?

ಈ ವರ್ಷವಾದರೂ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುತುವರ್ಜಿ ವಹಿಸಿ ಉತ್ಸವದ ಗತವೈಭವ ಮರುಕಳಿಸುವಂತೆ ಮಾಡಲಿ. ಇದರಿಂದ ಸ್ಥಳೀಯ ಕಲಾವಿದರಿಗೆ ತಮ್ಮ ಪ್ರತಿಭೆ ಪ್ರದರ್ಶನಕ್ಕೆ ಸೂಕ್ತ ವೇದಿಕೆ ಸಿಗುತ್ತದೆ. ಉತ್ಸವ ನಡೆಸುವುದರಿಂದ ಮುಂದಿನ ಪೀಳಿಗೆಗೆ ಜಿಲ್ಲೆಯ ಇತಿಹಾಸ, ಸಂಸ್ಕೃತಿ, ಕಲೆ, ಸಾಹಿತ್ಯ ಪರಂಪರೆಯ ಪರಿಚಯವೂ ಆಗುತ್ತದೆ. **ಸತೀಶ ಎಸ್. ಇಂಗಳೇಶ್ವರ,** ವಿಜಯಪುರ

ರಾಜ್ಯಪಾಲರಿಗೆ ಬೇಡ ಸಂಘರ್ಷದ ಹಾದಿ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮತ್ತೆ ಎರಡು ತಿದ್ದುಪಡಿ ಮಸೂದೆಗಳನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ. ಈ ಮಸೂದೆಗಳು ಎರಡನೇ ಬಾರಿಗೆ ರಾಜ್ಯಪಾಲರ ಅಂಕಿತ ಪಡೆಯುವಲ್ಲಿ ಸೋತಿವೆ ಎಂಬುದು ಗಮನಾರ್ಹ. ರಾಜ್ಯದ ಶಾಸಕಾಂಗ ಅಂಗೀಕರಿಸಿರುವ ಮತ್ತೆ ಕೆಲವು ಮಸೂದೆಗಳು ಸಹ ರಾಜ್ಯಪಾಲರಿಂದ ತಿರಸ್ಕೃತಗೊಂಡಿರುವುದು, ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ನಡೆಯುತ್ತಿರುವ ಶೀತಲ ಸಮರಕ್ಕೆ ನಿದರ್ಶನ.

ನೆರೆಯ ಕೇರಳ, ತಮಿಳುನಾಡು ಮತ್ತು ದೂರದ ಪಶ್ಚಿಮ ಬಂಗಾಳದಲ್ಲಿ ಕೂಡ ಇಂತಹುದೇ ಪರಿಸ್ಥಿತಿ ಇದೆ. ಈ ವಿಚಾರದಲ್ಲಿ ತಮಿಳುನಾಡಿನ ರಾಜ್ಯಪಾಲ ಎನ್.ಆರ್.ರವಿ ಅವರ ವಿರುದ್ಧ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ದಾಖಲಿಸಿರುವ ದೂರು ಈಗ ವಿಚಾರಣೆಯ ಹಂತದಲ್ಲಿದೆ. ರಾಜ್ಯಪಾಲರು ಸಂವಿಧಾನಬದ್ಧವಾಗಿ ನಡೆದುಕೊಂಡು ತಮ್ಮ ಇತಿಮಿತಿಯಲ್ಲಿ ಕಾರ್ಯನಿರ್ವಹಿಸಬೇಕು. ಸಕಾರಣವಿಲ್ಲದೇ ರಾಜ್ಯ ಸರ್ಕಾರದ ಜೊತೆ ಸಂಘರ್ಷದ ಹಾದಿ ತುಳಿಯಬಾರದು. **ಕೆ.ವಿ.ವಾಸು,** ಮೈಸೂರು

ಗುಣಮಟ್ಟದ ಶಿಕ್ಷಣಕ್ಕೆ ಸಿಗಲಿ ಆದ್ಯತೆ

ಕೆಲ ವರ್ಷಗಳ ಹಿಂದೆ ಸ್ಥಾಪನೆಯಾದ 10 ವಿಶ್ವವಿದ್ಯಾಲಯಗಳ ಪೈಕಿ ಒಂಬತ್ತನ್ನು ಮುಚ್ಚಲು ಅಥವಾ ಬೇರೊಂದು ವಿಶ್ವವಿದ್ಯಾಲಯದಲ್ಲಿ ವಿಲೀನಗೊಳಿಸಲು ರಾಜ್ಯ ಸರ್ಕಾರ ಮುಂದಾಗಿರುವುದಕ್ಕೆ ಪರ- ವಿರೋಧ ವ್ಯಕ್ತವಾಗುತ್ತಿದೆ. ಅದರಲ್ಲೂ ಮಂಡ್ಯದಲ್ಲಿ ಶಿಕ್ಷಣ ತಜ್ಞರಿಗಿಂತ ಇತರರೇ ಹೆಚ್ಚಾಗಿ ಹೋರಾಟ ಮಾಡುತ್ತಿರುವುದು ವಿಪರ್ಯಾಸ. ಕನಿಷ್ಠ ಸೌಲಭ್ಯಗಳು ಸಹ ಇಲ್ಲದೆ, ಶಾಲಾ-ಕಾಲೇಜುಗಳನ್ನು ಸ್ಥಾಪಿಸಿದಂತೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದರೆ ಹೇಗೆ? ಪೂರ್ವತಯಾರಿ ಇಲ್ಲದೆ ಆ ವಿಶ್ವವಿದ್ಯಾಲಯಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಈಗ ಅವುಗಳನ್ನು ಮುಚ್ಚುವ ವಿಷಯದಲ್ಲಿ ರಾಜಕೀಯ ಮಾಡುವುದು ಸೂಕ್ತವಲ್ಲ. ಇಲ್ಲಿ ಗುಣಮಟ್ಟದ ಶಿಕ್ಷಣ ಮುಖ್ಯ. ಈ ವಿಶ್ವವಿದ್ಯಾಲಯಗಳ ಬಗ್ಗೆ ಶಿಕ್ಷಣ ತಜ್ಞರ ತಂಡವು ಸಾಧಕ-ಬಾಧಕಗಳನ್ನು ಚರ್ಚಿಸಿ, ಅವುಗಳನ್ನು ಸರ್ಕಾರದ ಗಮನಕ್ಕೆ ತರುವುದು ವಿಹಿತ. **ಸಿ.ಸಿದ್ದರಾಜು ಆಲಕೆರೆ,** ಮಂಡ್ಯ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಷೇರು ಮಾರುಕಟ್ಟೆ ಸತತ ಕುಸಿತ

‘ಕರಡಿ’ ಕುಣಿತ ಇನ್ನೆಷ್ಟು ದಿನ?

ಭಾರತೀಯ ಷೇರುಪೇಟೆ ಐದು ತಿಂಗಳುಗಳಿಂದ ಕುಸಿತದ ಹಾದಿ ಹಿಡಿದಿದೆ. ಭಾರಿ ಗಳಿಕೆಯ ನಿರೀಕ್ಷೆಯೊಂದಿಗೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ್ದ ಹೂಡಿಕೆದಾರರು ನಷ್ಟದತ್ತ ಮುಖ ಮಾಡಿದ್ದಾರೆ. ದೇಶದ ಹಲವಾರು ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ಕೂಡ ಗಣನೀಯವಾಗಿ ಕರಗಿದೆ. ಷೇರು ಮಾರುಕಟ್ಟೆಯ ಪತನದ ಹಾದಿ ಇನ್ನೆಷ್ಟು ಸಮಯ ಮುಂದುವರಿಯಲಿದೆ ಎನ್ನುವುದು ಸ್ಪಷ್ಟವಾಗಿಲ್ಲ. ಶೀಘ್ರ ಚೇತರಿಕೆ ಕಾಣಬಹುದು ಎಂಬ ವಿಶ್ವಾಸವನ್ನು ತಜ್ಞರು ವ್ಯಕ್ತಪಡಿಸುತ್ತಿದ್ದಾರೆ

ಎರಡೂ ಷೇರುಪೇಟೆಗಳಲ್ಲಿ ಮಿಡ್‌ಕ್ಯಾಪ್ (ಮಧ್ಯಮ ಗಾತ್ರದ ಕಂಪನಿ) ಮತ್ತು ಸ್ಮಾಲ್‌ಕ್ಯಾಪ್ ಷೇರುಗಳ (ಸಣ್ಣ ಗಾತ್ರದ ಕಂಪನಿಗಳು) ಮೌಲ್ಯ ಗಣನೀಯ ಕುಸಿತ ಕಂಡಿದೆ



ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರ ದ ನಾಸಿಕ್‌ನ ನಿವಾಸಿ ರಾಜೇಂದ್ರ ಕೊಹಲೆ ಎಂಬ 28 ವರ್ಷದ ಬ್ಯಾಂಕ್ ಉದ್ಯೋಗಿ ಮೂರು ದಿನಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡರು. ಇದಕ್ಕೆ ಕಾರಣವಾಗಿದ್ದು, ಭಾರತೀಯ ಷೇರು ಮಾರುಕಟ್ಟೆಯಲ್ಲಿ ಉಂಟಾಗಿರುವ ತಲ್ಲಣ. ಇತ್ತೀಚೆಗೆ ರಾಜೇಂದ್ರ ಅವರು ಷೇರು ವಹಿವಾಟಿನಲ್ಲಿ ₹16 ಲಕ್ಷ ನಷ್ಟ ಅನುಭವಿಸಿದ್ದರು. ದೊಡ್ಡ ಲಾಭದ ನಿರೀಕ್ಷೆಯಿಂದ ಮನೆಗೆ ಕಳುಹಿಸಬೇಕಾಗಿದ್ದ ದುಡ್ಡನ್ನೂ ಅವರು ಷೇರುಗಳಲ್ಲಿ ಹೂಡಿಕೆ ಮಾಡಿದ್ದರು ಎಂದು ಮಾಧ್ಯಮಗಳು ವರದಿ ಮಾಡಿವೆ. ತೀವ್ರ ನಷ್ಟದಿಂದಾಗಿ ಒತ್ತಡಕ್ಕೆ ಸಿಲುಕಿದ್ದ ಅವರು ಸಾವಿಗೆ ಶರಣಾಗುವ ನಿರ್ಧಾರ ಕೈಗೊಂಡರು.

ರಾಜೇಂದ್ರ ಒಬ್ಬರೇ ಅಲ್ಲ; ದೇಶದ ಷೇರುಪೇಟೆಯಲ್ಲಿ ದೊಡ್ಡ ಮೊತ್ತದ ಹೂಡಿಕೆ ಮಾಡಿರುವ ಕೋಟ್ಯಂತರ ಜನರು ಈಗ ನಷ್ಟದಲ್ಲಿದ್ದಾರೆ. 2024ರ ಅಕ್ಟೋಬರ್‌ನಿಂದ ಷೇರು ಮಾರುಕಟ್ಟೆಯಲ್ಲಿ ಕಂಡು ಬರುತ್ತಿರುವ ಕುಸಿತವು ಷೇರು ವ್ಯವಹಾರದಲ್ಲಿ ತೊಡಗಿರುವವರ ಮೇಲೆ ಆರ್ಥಿಕ ಒತ್ತಡವನ್ನು ಹೇರಿದೆ. ಷೇರುಪೇಟೆಯಲ್ಲಿ ಕರಡಿ ಕುಣಿತದಿಂದಾಗಿ ದೇಶದ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ರಿಲಯನ್ಸ್ ಇಂಡಸ್ಟ್ರೀಸ್ ಸೇರಿದಂತೆ ಬ್ಲೂಚಿಪ್ ಕಂಪನಿಗಳ ಮೌಲ್ಯದಲ್ಲಿ ಗಣನೀಯ ಕುಸಿತ ಕಂಡಿದೆ.

ಷೇರುಪೇಟೆಯಲ್ಲಿ ಗೂಳಿ ಓಟ (ಏರಿಕೆ), ಕರಡಿ ಕುಣಿತ (ಇಳಿಕೆ) ಸಾಮಾನ್ಯವಾದರೂ ನಾಲ್ಕೈದು ತಿಂಗಳವರೆಗೆ ಈ ಪ್ರಮಾಣದಲ್ಲಿ ಮಾರುಕಟ್ಟೆಯಲ್ಲಿ ಕುಸಿತ ಕಂಡಿದ್ದು ಅಪರೂಪ. 2024ರ ಸೆಪ್ಟೆಂಬರ್ 26–27ರಂದು ಗರಿಷ್ಠ ಪ್ರಮಾಣದಲ್ಲಿದ್ದ ಮುಂಬೈ ಷೇರುಪೇಟೆ ಸೂಚ್ಯಂಕ (ಸೆನ್ಸೆಕ್ಸ್) ಮತ್ತು ರಾಷ್ಟ್ರೀಯ ಷೇರು ಪೇಟೆ ಸೂಚ್ಯಂಕ (ನಿಫ್ಟಿ) ಶೇ 16ರಷ್ಟು ಕುಸಿತ ಕಂಡಿವೆ. ಸೆನ್ಸೆಕ್ಸ್ ಸೂಚ್ಯಂಕ 2024ರ ಸೆ.27ರಂದು 85,978 ಅಂಶಗಳಷ್ಟಿತ್ತು. ಮಾರ್ಚ್ 3ರಂದು (ಸೋಮವಾರ) ಇದು 73,085ಕ್ಕೆ ತಲುಪಿದೆ. ಅದೇ ರೀತಿ, 2024ರ ಸೆ.26ರಂದು 26,271 ಅಂಶಗಳಿದ್ದ ನಿಫ್ಟಿ ಸೂಚ್ಯಂಕ, ಸೋಮವಾರ 22,119ಕ್ಕೆ ಇಳಿದಿದೆ. ಐದು ತಿಂಗಳಲ್ಲಿ ₹94 ಲಕ್ಷ ಕೋಟಿ ಸಂಪತ್ತು ಕರಗಿಹೋಗಿದೆ.

ಹಲವು ಕಾರಣ: ಷೇರುಪೇಟೆ ಕುಸಿತದ ಹಿಂದೆ ದೇಶೀಯ ಮತ್ತು ಜಾಗತಿಕವಾದ ಹಲವು ಕಾರಣಗಳಿವೆ. 2024–25ನೇ ಸಾಲಿನ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಆರ್ಥಿಕ ಬೆಳವಣಿಗೆಯ ವೇಗ ಕುಂಠಿತವಾಗಿತ್ತು. ಆ ಅವಧಿಯಲ್ಲಿ ಜಿಡಿಪಿ ಶೇ 5.6ರಷ್ಟು ದಾಖಲಾಗಿತ್ತು. ಡಿಸೆಂಬರ್ ತ್ರೈಮಾಸಿಕದಲ್ಲಿ ಆರ್ಥಿಕ ಬೆಳವಣಿಗೆ ಚೇತರಿಕೆ ಕಂಡಿದ್ದು, ಶೇ 6.2ರಷ್ಟು ಜಿಡಿಪಿ ದಾಖಲಾಗಿದೆ. ಜಿಡಿಪಿಯಲ್ಲಿ ಹೆಚ್ಚಳವಾಗಿದ್ದರೂ ಅದರ ಪರಿಣಾಮ ಷೇರುಪೇಟೆ ಮೇಲೆ ಆಗಿಲ್ಲ.


ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಅವರು ಗೆಲುವು ಸಾಧಿಸಿದ ಸಂದರ್ಭದಲ್ಲಿ, ಜನವರಿ 20ರಂದು ಅವರು ಅಧಿಕಾರ ಸ್ವೀಕರಿಸಿದ ನಂತರ ಷೇರು ಮಾರುಕಟ್ಟೆ ಚೇತರಿಕೆ ಕಾಣಬಹುದು ಎಂದು ವಿಶ್ಲೇಷಿಸಲಾಗಿತ್ತು. ಆದರೆ, ಟ್ರಂಪ್ ಅವರ ಸುಂಕ ನೀತಿಯು ದೇಶದ ಮಾರುಕಟ್ಟೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತದಲ್ಲಿ ಮಾಡಿದ್ದ ಹೂಡಿಕೆಯನ್ನು ವಾಪಸ್ ಪಡೆಯುತ್ತಿರುವುದು ಕೂಡ ಮಾರುಕಟ್ಟೆಯ ಕುಸಿತಕ್ಕೆ ಕಾರಣವಾಗಿದೆ. ವಿದೇಶಿ ಹೂಡಿಕೆದಾರರು ಈಗ ಚೀನಾದತ್ತ ಮುಖ ಮಾಡಿದ್ದಾರೆ.

ನಷ್ಟದತ್ತ ಷೇರುದಾರರು: ಕೋವಿಡ್ ಬಳಿಕ ಷೇರುಪೇಟೆ ಚೇತರಿಕೆ ಹಾದಿಯಲ್ಲಿದ್ದುದರಿಂದ ಹೆಚ್ಚಿನ ಸಂಪಾದನೆ ಮಾಡಬಹುದು ಎಂಬ ನಿರೀಕ್ಷೆಯಿಂದ ದೇಶದ ಜನರು ದೊಡ್ಡ ಸಂಖ್ಯೆಯಲ್ಲಿ ಡಿ–ಮ್ಯಾಟ್ ಖಾತೆ ತೆರೆದು ಷೇರು ವ್ಯವಹಾರಗಳಲ್ಲಿ ತೊಡಗಿದ್ದರು (ಕಳೆದ ವರ್ಷ 4.6 ಕೋಟಿ ಮಂದಿ ಡಿ–ಮ್ಯಾಟ್ ಖಾತೆ ತೆರೆದಿದ್ದರು). ಷೇರುಗಳು, ಮ್ಯೂಚುವಲ್ ಫಂಡ್‌ಗಳಲ್ಲಿ ದೊಡ್ಡ ಮೊತ್ತದ ಹೂಡಿಕೆಯನ್ನೂ ಮಾಡಿದ್ದರು. ಆದರೆ, ಈಗ ಷೇರು ಮಾರುಕಟ್ಟೆ ಪತನ ಹಾದಿಯಲ್ಲಿ ಸಾಗಿರುವುದರಿಂದ ಅವರೆಲ್ಲ ದೊಡ್ಡ ನಷ್ಟದತ್ತ ಮುಖ ಮಾಡಿದ್ದಾರೆ. ಷೇರುಗಳು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿರುವ ಮೊತ್ತದ ಮೌಲ್ಯ ಕುಸಿದಿರುವುದು ಅವರನ್ನು ಅಧೀರರನ್ನಾಗಿಸಿದೆ.


ಆಧಾರ: ಪಿಟಿಐ, ಫಾರ್ಚ್ಯೂನ್ ಇಂಡಿಯಾ.ಕಾಮ್, ಬಿಎಸ್‌ಇ, ಎನ್‌ಎಸ್‌ಇ ವೆಬ್‌ಸೈಟ್

ಷೇರು ಮಾರುಕಟ್ಟೆ ಕುಸಿತದ ಹಾದಿ

ಮುಂಬೈ ಷೇರುಪೇಟೆ ಸೂಚ್ಯಂಕ (ಸೆನ್ಸೆಕ್ಸ್)



ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ನಿಫ್ಟಿ)



(ಆಯಾ ತಿಂಗಳಲ್ಲಿ ಸೂಚ್ಯಂಕ ಗರಿಷ್ಠ ಮಟ್ಟ ತಲುಪಿದ ದಿನಾಂಕ)



16% ಐದು ತಿಂಗಳಲ್ಲಿ ಸೆನ್ಸೆಕ್ಸ್, ನಿಫ್ಟಿ ಸೂಚ್ಯಂಕ ಕುಸಿದ ಪ್ರಮಾಣ

₹94 ಲಕ್ಷ ಕೋಟಿ ಐದು ತಿಂಗಳಲ್ಲಿ ಷೇರು ಮಾರುಕಟ್ಟೆಯಲ್ಲಿ ಕರಗಿದ ಹೂಡಿಕೆದಾರರ ಸಂಪತ್ತು

₹478 ಲಕ್ಷ ಕೋಟಿ 2024ರ ಸೆಪ್ಟೆಂಬರ್‌ನಲ್ಲಿದ್ದ ಬಿಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ

₹384 ಲಕ್ಷ ಕೋಟಿ 2025ರ ಫೆ.28ರಂದು ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ

₹62 ಲಕ್ಷ ಕೋಟಿ 2025ರ ಮೊದಲ ಎರಡು ತಿಂಗಳಲ್ಲಿ ಕರಗಿದ ಹೂಡಿಕೆದಾರರ ಸಂಪತ್ತು

7% ಹೊಸ ವರ್ಷದ ಮೊದಲ ಎರಡು ತಿಂಗಳಲ್ಲಿ ಸೆನ್ಸೆಕ್ಸ್, ನಿಫ್ಟಿ ಸೂಚ್ಯಂಕ ಕುಸಿದ ಪ್ರಮಾಣ

₹2.89 ಲಕ್ಷ ಕೋಟಿ 2024ರ ಅಕ್ಟೋಬರ್‌ನಿಂದ ಫೆ.28ರವರೆಗೆ ಎಫ್‌ಐಐಗಳು ಭಾರತದ ಷೇರುಪೇಟೆಯಿಂದ ಹಿಂತೆಗದ ಮೊತ್ತ

ಕುಸಿತಕ್ಕೆ ಪ್ರಮುಖ ಕಾರಣಗಳು

- ವಿದೇಶಿ ಸಾಂಸ್ಥಿಕ ಹೂಡಿಕೆದಾರ ಸಂಸ್ಥೆಗಳು (ಎಫ್‌ಐಐ) ಬಂಡವಾಳ ಹಿಂತೆಗೆಯುತ್ತಿರುವುದು
- ನಿಧಾನಗತಿಯ ಆರ್ಥಿಕ ಬೆಳವಣಿಗೆ
- ಜಾಗತಿಕ ಆರ್ಥಿಕತೆಯ ಅನಿಶ್ಚಿತ ಸ್ಥಿತಿ
- ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳ ಲಾಭ ಗಳಿಕೆ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದು
- ಅಮೆರಿಕ–ಚೀನಾ ನಡುವಿನ ವ್ಯಾಪಾರ ಸಮರ
- ನಷ್ಟದ ಭಯದಿಂದ ಷೇರುಗಳನ್ನು ಮಾರಾಟ ಮಾಡುತ್ತಿರುವ ಹೂಡಿಕೆದಾರರು
- ಡೊನಾಲ್ಡ್ ಟ್ರಂಪ್ ಅವರ ಸುಂಕ ಹೇರಿಕೆ ನೀತಿಗಳು
- ಚೀನಾ ಮಾರುಕಟ್ಟೆಯ ಆಕರ್ಷಣೆ
- ಡಾಲರ್ ಎದುರು ರೂಪಾಯಿ ಮೌಲ್ಯ ನಿರಂತರ ಕುಸಿತ

ದೀರ್ಘಾವಧಿ ಹೂಡಿಕೆಗೆ ಸಕಾಲ?

ಷೇರು ಮಾರುಕಟ್ಟೆಯಲ್ಲಿ ಏರಿಳಿತ ಸಾಮಾನ್ಯ. ತೀವ್ರ ಕುಸಿತದ ಬೆನ್ನ ಹಿಂದೆ ಏರಿಕೆ ಸಹಜ. ಹಿಂದೆಯೂ ಭಾರತದ ಷೇರುಪೇಟೆಯಲ್ಲಿ ಗಣನೀಯ ಕುಸಿತ ಕಂಡು ಬಂದಿತ್ತು. 2008ರ ಜಾಗತಿಕ ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ, 2013ರಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ಬಾಂಡ್ ಖರೀದಿಯನ್ನು ಕಡಿಮೆ ಮಾಡುವುದಾಗಿ ಘೋಷಿಸಿದಾಗ ಬಡ್ಡಿದರದಲ್ಲಿ ಹೆಚ್ಚಳವಾದಾಗ, 2016ರಲ್ಲಿ ನೋಟು ರದ್ದತಿ ಮಾಡಿದ್ದಾಗ, ನಂತರ ಕೋವಿಡ್ ಸಮಯದಲ್ಲೂ ಷೇರು ಮಾರುಕಟ್ಟೆಯಲ್ಲಿ ಕರಡಿ ಕುಣಿತ ಜೋರಾಗಿತ್ತು. ಆದರೆ, ಆ ಬಳಿಕ ಚೇತರಿಸಿಕೊಂಡಿತ್ತು.

ಅದೇ ರೀತಿ ಈಗಲೂ ಮಾರುಕಟ್ಟೆ ಕುಸಿದಿದೆ. ಇದು ತಾತ್ಕಾಲಿಕ. ಇನ್ನೂ ಸ್ವಲ್ಪ ಸಮಯ ಈ ಕುಸಿತ ಮುಂದುವರಿಯಬಹುದು. ಆದರೆ, ಚೇತರಿಕೆ ಖಚಿತ ಎಂದು ಷೇರುಪೇಟೆ ತಜ್ಞರು ಹೇಳುತ್ತಿದ್ದಾರೆ. ಆದರೆ, ಚೇತರಿಕೆ ಕಾಣಲು ಇನ್ನು ಎಷ್ಟು ದಿನ/ವಾರ/ತಿಂಗಳು ಬೇಕಾಗಬಹುದು ಎಂದು ಹೇಳಲಾಗದು. ಮಾರ್ಚ್–ಏಪ್ರಿಲ್‌ನಲ್ಲಿ ಚೇತರಿಸಬಹುದು ಎಂಬ ವಿಶ್ವಾಸವನ್ನು ಕೆಲವರು ವ್ಯಕ್ತಪಡಿಸುತ್ತಿದ್ದಾರೆ. ಅಲ್ಪಾವಧಿ (ಶಾರ್ಟ್ ಟರ್ಮ್) ಷೇರು ವಹಿವಾಟು ಮಾಡಲು ಇದು ಸೂಕ್ತ ಸಮಯವಲ್ಲ. ಆದರೆ, ಕಂಪನಿಗಳ ಷೇರುಗಳು ಕಡಿಮೆ ಬೆಲೆಗೆ ಲಭ್ಯವಿರುವುದರಿಂದ ದೀರ್ಘಾವಧಿಯನ್ನು (ಲಾಂಗ್ ಟರ್ಮ್) ಗುರಿಯಾಗಿಸಿಕೊಂಡು ವಹಿವಾಟು ನಡೆಸುವವರಿಗೆ ಈಗಿನ ಪರಿಸ್ಥಿತಿ ಅನುಕೂಲವಾಗಿದೆ ಎಂಬುದು ತಜ್ಞರ ಪ್ರತಿಪಾದನೆ.

ಟ್ರಂಪ್ ನೀತಿ, ಚೀನಾ ಭೀತಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕೆನಡಾ, ಮೆಕ್ಸಿಕೊ, ಐರೋಪ್ಯ ಒಕ್ಕೂಟ, ಚೀನಾದ ಸರಕುಗಳ ಮೇಲೆ ವಿವಿಧ ಪ್ರಮಾಣದ ಸುಂಕ ವಿಧಿಸಿದ್ದಾರೆ. ಭಾರತದ ಸರಕುಗಳಿಗೂ ಸುಂಕ ಹೆಚ್ಚಿಸುವ ಬಗ್ಗೆ ಹಲವು ಬಾರಿ ಹೇಳಿದ್ದಾರೆ. ನಿಧಾನಗತಿಯ ಆರ್ಥಿಕ ಬೆಳವಣಿಗೆಯಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಕಳೆದ ಅಕ್ಟೋಬರ್‌ನಲ್ಲಿಯೇ ತಾವು ಖರೀದಿಸಿದ್ದ ಷೇರುಗಳ ಮಾರಾಟ ಆರಂಭಿಸಿದ್ದರೂ ಟ್ರಂಪ್ ಸುಂಕ ಹೆಚ್ಚಳ ಘೋಷಣೆ ಮಾಡಿದ ಮೇಲೆ ಅದು ವೇಗ ಪಡೆದುಕೊಂಡಿತು. ಇನ್ನೊಂದೆಡೆ, ಚೀನಾದ ಷೇರುಪೇಟೆಯಲ್ಲಿ ಏರಿಕೆ ಕಂಡುಬಂದಿದೆ. ಭಾರತದ ಷೇರುಪೇಟೆಯಿಂದ ಬಂಡವಾಳ ವಾಪಸ್ ಪಡೆಯುತ್ತಿರುವ ಎಫ್‌ಐಐಗಳು ಚೀನಾದತ್ತ ಮುಖ ಮಾಡಿವೆ. ಅವರನ್ನು ಆಕರ್ಷಿಸಲು ಚೀನಾ ಸರ್ಕಾರವೇನಾದರೂ ಹೊಸ ಯೋಜನೆಗಳನ್ನು ಕೈಗೊಂಡರೆ, ಭಾರತೀಯ ಷೇರುಪೇಟೆಯಲ್ಲಿ ಮತ್ತಷ್ಟು ಕುಸಿತ ಸಂಭವಿಸಲಿದೆ ಎಂದು ತಜ್ಞರು ಹೇಳುತ್ತಿದ್ದಾರೆ.



ಆಲ್ಫಾ ಮೂಲಕ ತೆರೆಗೆ ಹೇಮಂತ್

‘ಗೀತಾ’, ‘ಗುರುದೇವ್ ಹೊಯ್ಸಳ’ ಸಿನಿಮಾ ನಿರ್ದೇಶಕ ವಿಜಯ್ ನಿರ್ದೇಶನದ ಮೂರನೇ ಸಿನಿಮಾ ಘೋಷಣೆಯಾಗಿದೆ. ‘ಆಲ್ಫಾ–ಮೆನ್ ಲವ್ ವೈಲೆನ್ಸ್’ ಸಿನಿಮಾ ಮೂಲಕ ಹೇಮಂತ್ ನಾಯಕನಾಗಿ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ.

ಇದೊಂದು ಆ್ಯಕ್ಷನ್ ಸಿನಿಮಾವಾಗಿದ್ದು, ಜೊತೆಗೆ ಅಪ್ಪ–ಮಗನ ಬಾಂಧವ್ಯದ ಕಥೆಯಿದೆ. ಸಿನಿಮಾದ ಫಸ್ಟ್‌ಲುಕ್ ಬಿಡುಗಡೆಯಾಗಿದ್ದು, ಹೇಮಂತ್ ರಗಡ್ ಆಗಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾದಲ್ಲಿ ಮೂರು ಪಾತ್ರಗಳು ಮುಖ್ಯಭೂಮಿಕೆಯಲ್ಲಿರುವುದರಿಂದ ಚಿತ್ರಕ್ಕೆ ‘ಆಲ್ಫಾ’ ಎಂಬ ಹೆಸರಿಡಲಾಗಿದೆ. ಈ ಸಿನಿಮಾವನ್ನು ಆನಂದ್ ಕುಮಾರ್ ಎಲ್.ಎ. ಬ್ಯಾನರ್ ಮೂಲಕ ನಿರ್ಮಾಣ ಮಾಡುತ್ತಿದ್ದಾರೆ.

‘ಹೇಮಂತ್ ಭರ್ಜರಿಯಾಗಿಯೇ ತಯಾರಿ ಮಾಡಿಕೊಂಡು ಸೆಟ್‌ಗೆ ಹೆಜ್ಜೆ ಇಟ್ಟಿದ್ದಾರೆ. ನಿರ್ದೇಶಕ, ನಟ ರಾಘು ಶಿವಮೊಗ್ಗ ಅವರ ಬಳಿ ನಟನೆಯ ತರಬೇತಿ, ಅರ್ಜುನ್ ಅವರ ಬಳಿ ಫೈಟ್ ಅಭ್ಯಾಸ ಮಾಡಿದ್ದಾರೆ. ಡಾನ್ಸ್ ಜೊತೆಗೆ ಮಾರ್ಷಲ್ ಆರ್ಟ್ ತರಬೇತಿಯನ್ನೂ ಹೇಮಂತ್ ಪಡೆದಿದ್ದಾರೆ’ ಎಂದಿದೆ ಚಿತ್ರತಂಡ. ಚಿತ್ರಕ್ಕೆ ಕಾರ್ತಿಕ್ ಛಾಯಾಚಿತ್ರಗ್ರಹಣ, ಅನೂಪ್ ಸೀಳಿನ್ ಸಂಗೀತ ಹಾಗೂ ಮಾಸ್ತಿ ಅವರ ಸಂಭಾಷಣೆಯಿದೆ.

‘ಮದನಾರಿ’ ಮೇಲೆ ವಿದ್ಯಾಪತಿಗೆ ಪ್ರೀತಿ



ನಟ ಧನಂಜಯ ಅವರ ಡಾಲಿ ಪಿಕ್ಚರ್ಸ್ ನಿರ್ಮಾಣ ಮಾಡಿರುವ ‘ವಿದ್ಯಾಪತಿ’ ಸಿನಿಮಾದ ‘ಮದನಾರಿ’ ಹಾಡು ಬಿಡುಗಡೆಯಾಗಿದೆ. ಸಿನಿಮಾ ಏ.10ರಂದು ರಿಲೀಸ್ ಆಗುತ್ತಿದೆ. ಚಿತ್ರದಲ್ಲಿ ನಾಗಭೂಷಣ್‌ಗೆ ಜೋಡಿಯಾಗಿ ಮಲೈಕಾ ಟಿ. ವಸುಪಾಲ್ ನಟಿಸುತ್ತಿದ್ದು, ಅವರು ಈ ಸಿನಿಮಾದಲ್ಲಿ ‘ಸೂಪರ್ ಸ್ಟಾರ್ ವಿದ್ಯಾ’ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸಿನಿಮಾದೊಳಗೆ ಸಿನಿಮಾ ನಾಯಕಿಯಾಗಿ ಅವರು ಬಣ್ಣಹಚ್ಚಿದ್ದಾರೆ. ಈ ಲವ್ ನಂಬರ್‌ಗೆ ಸುಜಿತ್ ವೆಂಕಟರಾಮಯ್ಯ ಸಾಹಿತ್ಯ ಬರೆದಿದ್ದು, ಡಾಸ್ಮೋಡ್ ಸಂಗೀತ ನಿರ್ದೇಶನವಿದೆ. ವಾಸುಕಿ ವೈಭವ್ ಹಾಗೂ ಸುಪ್ರಿಯಾ ರಾಮ್ ಹಾಡಿಗೆ ಧ್ವನಿಯಾಗಿದ್ದಾರೆ. ಸಿನಿಮಾದಲ್ಲಿ ನಾಗಭೂಷಣ್ ಕರಾಟೆ ಕಿಂಗ್ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದು, ಚಿತ್ರವನ್ನು ಇಶಾಂ ಹಾಗೂ ಹಸೀಂ ಖಾನ್ ನಿರ್ದೇಶನ ಮಾಡಿದ್ದಾರೆ. ಆ್ಯಕ್ಷನ್ ಕಾಮಿಡಿ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ರಂಗಾಯಣ ರಘು ಕರಾಟೆ ಮಾಸ್ಟರ್ ಆಗಿ ಅಭಿನಯಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಈ ಜಗದಲ್ಲಿ ಯಾರೂ ಸಣ್ಣವರಲ್ಲ!

ನುಡಿ ಬೆಳಗು 144



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಮ್ಮೊಳಗಿನ ಶಕ್ತಿಯನ್ನು ತಿಳಿದುಕೊಂಡು ಅದನ್ನು ಸದುಪಯೋಗ ಪಡಿಸಿಕೊಂಡವರೇ ದೇವರು. ಯಾರೂ, ‘ನಾವು ಸಣ್ಣವರು, ಕನಿಷ್ಠರು’ ಅಂದುಕೊಳ್ಳಬಾರದು. ಯಾಕೆಂದರೆ ಯಾರೂ ಸಣ್ಣವರಾಗಿ ಹುಟ್ಟಿಲ್ಲ. ನಾವೆಲ್ಲರೂ ದೊಡ್ಡವರು. ಕೈಯಲ್ಲಿ ಒಂದು ಕ್ವಿಂಟಲ್ ತೂಕದ ಕಲ್ಲು ಎತ್ತುವವನು ಶಕ್ತಿವಂತನಲ್ಲ. ಬಾಯಾರಿ ಬಂದವನಿಗೆ ಒಂದು ಲೋಟ ನೀರು ಎತ್ತಿ ಕೊಟ್ಟವನೂ ಶಕ್ತಿವಂತ. ಈ ಭೂಮಿಯ ಮೇಲೆ ಸಣ್ಣವರು ಯಾರೂ ಇಲ್ಲ. ಎಲ್ಲರೂ ದೊಡ್ಡವರು. ನಮ್ಮೊಳಗಿನ ಶಕ್ತಿಯ ಅರಿವು ಆಯಿತು ಎಂದರೆ ನಾವೆಲ್ಲ ದೊಡ್ಡವರೆ. ತನ್ನ ತಾನು ಅರಿದೊಡೆ ತಾನೇ ದೇವ ಎಂದರು ಶರಣರು. ನಮ್ಮೊಳಗಿನ ಶಕ್ತಿ ಅರಿತರೆ ಎಲ್ಲ ಕಡೆಯೂ ದೇವರು ಕಾಣುತ್ತಾನೆ. ಇಲ್ಲವಾದರೆ ದೇವರು ಕಂಡರೂ ಕಲ್ಲಾಗಿ ಕಾಣುತ್ತದೆ. ದೇವರು ಎಂದರೆ ಅರಸಿ ಹುಡುಕುವುದಲ್ಲ. ಅರಿತು ಅನುಭವಿಸುವುದು ಅಷ್ಟೆ.

ಬೆಳಿಗ್ಗೆ ಎದ್ದಾಗ ಒಳ್ಳೆಯ ವಿಚಾರ, ನಾಲಿಗೆಯಲ್ಲಿ ದೇವರ ನಾಮಸ್ಮರಣೆ, ನಮ್ಮ ಶಕ್ತಿಯ ಬಗ್ಗೆ ನಮಗೆ ಅರಿವು ಇದ್ದರೆ ನಮ್ಮ ಜೀವನವೇ ಒಂದು ಸಂಭ್ರಮವಾಗುತ್ತದೆ. ನಾವು ‘ಆ ಡೇ, ಈ ಡೇ’ ಮಾಡುತ್ತೀವಲ್ಲ. ಶಾಲೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಪರಿಚರ ದಿನಾಚರಣೆ ಮಾಡುತ್ತೇವೆ. ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನ, ಗಣರಾಜ್ಯದ ದಿನ, ಪರಿಸರ ದಿನ ಮಾಡುತ್ತಾರೆ. ಆದರೆ ಹುಡುಗರೇ ಇರುವುದಿಲ್ಲ. ವಾಲೆಂಟೈನ್ ಡೇ ದಿನ ಮಾತ್ರ ಯಾವ ಹುಡುಗರೂ ತಪ್ಪಿಸಿಕೊಳ್ಳುವುದಿಲ್ಲ! ನಮಗೆ ‘ಆ ಡೇ, ಈ ಡೇ’ ಬೇಡ. ನಿಮ್ಮ ಹುಟ್ಟುಹಬ್ಬವನ್ನು ದೀಪ ಹಚ್ಚಿ ನೀವು ಆಚರಿಸಿಕೊಳ್ಳುವುದಲ್ಲ. ನಿಮ್ಮ ಬದುಕು ಹೇಗಾಗಬೇಕು ಎಂದರೆ ನೀವು ಹುಟ್ಟಿದ್ದಕ್ಕೆ ವಿಶ್ವಕ್ಕೇ ಹಬ್ಬ ಆಗಬೇಕು. ಮನುಷ್ಯ ಹಾಗೆ ಬದುಕಬೇಕು. ಆಗ ಅದು ಹುಟ್ಟುಹಬ್ಬ. ಅಬ್ದುಲ್ ಕಲಾಂ ಅವರು ತಮ್ಮ ಹುಟ್ಟು ಹಬ್ಬ ಹೇಗೆ ಆಚರಿಸಬೇಕು ಎಂದು ಹೇಳಿದರೆಂದರೆ ‘ಶಾಲೆಗೆ ರಜೆ ನೀಡಿ, ದೇಶಕ್ಕೆ ರಜೆ ನೀಡಿ ನನ್ನ ಹುಟ್ಟು ಹಬ್ಬ ಆಚರಿಸಬಾರದು. ಎಲ್ಲರೂ ನನ್ನ ಹುಟ್ಟು ಹಬ್ಬದ ದಿನ ಒಂದೊಂದು ಗಂಟೆ ಹೆಚ್ಚಿಗೆ ಕೆಲಸ ಮಾಡಿ ಆಚರಿಸಬೇಕು’ ಎಂದರು. ‘ಹೀಗೆ ಮಾಡಿದರೆ ನನಗೆ ಗೌರವ’ ಎಂದರು.

ಮನುಷ್ಯನೇ ನಿನ್ನ ಹುಟ್ಟುಹಬ್ಬ ಹೇಗಿರಬೇಕು ಎಂದರೆ ದೇವರ ಹಣತೆಗೆ ಎಣ್ಣೆ ಹಾಕಿ ನಿನ್ನ ಹುಟ್ಟು ಹಬ್ಬ ಆಚರಿಸುವುದಕ್ಕಿಂತ ರಕ್ತವಿಲ್ಲದೆ ಸಾಯುತ್ತಿರುವ ಯಾವುದಾದರೂ ರೋಗಿಗೆ ನಿನ್ನ ರಕ್ತ ಕೊಟ್ಟು ನಿನ್ನ ಹುಟ್ಟು ಹಬ್ಬವನ್ನು ಆಚರಣೆ ಮಾಡು. ದೇವರಿಗೆ ನೈವೇದ್ಯ ಇಟ್ಟು ಹುಟ್ಟುಹಬ್ಬ ಆಚರಿಸುವುದಕ್ಕಿಂತ ಹಸಿದು ಬಂದು ನಿಮ್ಮ ಮನೆಯ ಮುಂದೆ ತಟ್ಟೆ ಹಿಡಿದು ನಿಂತ ಮಕ್ಕಳ ತಟ್ಟೆಯಲ್ಲಿ ಅನ್ನ ಹಾಕಿ ನಿನ್ನ ಹುಟ್ಟು ಹಬ್ಬ ಆಚರಣೆ ಮಾಡು. ಹಚ್ಚಿದ ದೀಪವನ್ನು ಆರಿಸಿ ಹುಟ್ಟು ಹಬ್ಬ ಆಚರಿಸಿಕೊಳ್ಳುವುದಕ್ಕಿಂತ ಮಕ್ಕಳಿಗೆ ಒಂದು ಪುಸ್ತಕ ಕೊಟ್ಟು ಜ್ಞಾನದ ದೀಪವನ್ನು ಹಚ್ಚಿ ನಿಮ್ಮ ಹುಟ್ಟು ಹಬ್ಬ ಆಚರಿಸಿಕೊಳ್ಳಿ. ಇದು ಸ್ವಾಧ್ಯಾಯ. ಮನುಷ್ಯ ಪ್ರತಿ ದಿನ ಸ್ವಾಧ್ಯಾಯ ಮಾಡಬೇಕು. ಈ ದಿನ ಹೇಗೆ ಚೆನ್ನಾಗಿ ಇರುವುದು ಎಂದು ಆಲೋಚಿಸಬೇಕು. ಬೆಳಿಗ್ಗೆ ಎದ್ದ ತಕ್ಷಣ ಒಳ್ಳೆಯ ವಿಚಾರ ಮಾಡು. ನಾನು ಸಣ್ಣವನಲ್ಲ ಎಂದುಕೊಂಡು ಹೆಜ್ಜೆ ಹಾಕಿ. ನಮ್ಮ ಬದುಕಿಗೆ ಅಷ್ಟು ಸಾಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮಾರ್ಚ್ 4, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪಂಚಮಿ ಗಂ. 15-17 ನಕ್ಷತ್ರ: ಭರಣಿ ಗಂ. 26-38 ಯೋಗ: ಐಂದ್ರ ಗಂ. 26-07 ಕರಣ: ಬಾಲವ ಗಂ. 15-17, ಕುಂಭ ಮಾಸದ 20 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 1.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-48 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 03 ರಂಜಾನ್
ಅದೃಷ್ಟ ಸಂಖ್ಯೆ : 4, 7

ಮೇಷ: ವೃತ್ತಿಯನ್ನು ಅಭಿವೃದ್ಧಿ ಮಾಡುವ ಸಂಕಲ್ಪದಿಂದ ಪ್ರಾರಂಭಿಸಿ. ದೇವತಾನುಗ್ರಹದಿಂದ ಅಭಿವೃದ್ಧಿಯಾಗುವುದು. ಬಂಧುಗಳಿಂದ ಸಹಾಯ ನಿರೀಕ್ಷಿಸಬೇಡಿ.

ವೃಷಭ: ಮನೆಗೆ ಸಹೋದರಿಯ ಆಗಮನ ಮತ್ತು ಭೇಟಿಯು ಸಂತೋಷಕ್ಕೆ ಕಾರಣವಾಗುತ್ತದೆ. ಕಾರ್ಮಿಕರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿವೆ.

ಮಿಥುನ: ಗುರಿ ಮುಟ್ಟುವ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡರೆ ಯೋಜನೆಗಳು ಆಲೋಚಿಸಿದ್ದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿರುವುದು. ವೃತ್ತಿಗೆ ಸಂಬಂಧಿಸಿದಂತೆ ಉಪಯುಕ್ತ ಮಾಹಿತಿಗಳು ಲಭಿಸಲಿವೆ.

ಕರ್ಕಾಟಕ: ಯಾವುದಕ್ಕೂ ಅಳುಕುವ ಪ್ರಮೇಯ ಇರುವುದಿಲ್ಲ. ಸರಳ ವ್ಯಕ್ತಿತ್ವದಿಂದ ಮೆಚ್ಚುಗೆಯನ್ನು ಗಳಿಸುವಿರಿ. ನಿಧಾನಗತಿಯಲ್ಲಿ ಎಲ್ಲ ಆಸೆಗಳು ಈಡೇರಲಿವೆ.

ಸಿಂಹ: ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಸಿಗುವ ಸುಸಂದರ್ಭವನ್ನು ಸೂಕ್ತವಾಗಿ ಬಳಸಿಕೊಳ್ಳಿ. ರೇಷ್ಮೆ ವ್ಯಾಪಾರಿಗಳಿಗೆ ಸಗಟು ಮಾರಾಟದಿಂದ ಅಧಿಕ ಲಾಭ ಉಂಟಾಗಲಿದೆ. ಮನೆಯಲ್ಲಿ ಹಿತಕರ ವಾತಾವರಣ ಇರುತ್ತದೆ.

ಕನ್ಯಾ: ಕ್ರೀಡಾಪಟುಗಳಿಗೆ, ಉಪನ್ಯಾಸಕರಿಗೆ ಮತ್ತು ಕಲಾವಿದರಿಗೆ ಅವಕಾಶ ಲಭಿಸಲಿದೆ. ನೆಂಟಸ್ತಿಕೆಯಲ್ಲಿ ವಿವಾಹಕ್ಕೆ ಸಂಬಂಧಗಳು ಕೂಡಿ ಬರಲಿವೆ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆಯಾಗುತ್ತದೆ.

ತುಲಾ: ಇಂದಿನ ಕೆಲಸದಲ್ಲಿ ಹತ್ತು ಬಾರಿ ಯೋಚಿಸಿ ನಂತರದಲ್ಲಿ ದೂರದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದು ಉತ್ತಮ. ಗುತ್ತಿಗೆದಾರರಿಂದ ಗೃಹ ನಿರ್ಮಾಣದ ವಿಚಾರದಲ್ಲಿ ಪಾಠ ಕಲಿಯುವಂತಾಗುವುದು.

ವೃಶ್ಚಿಕ: ಸಮಯವನ್ನು ಯಾಚಿಸುತ್ತಿರುವುದರಿಂದ ಸ್ವಂತ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿವೆ. ಉತ್ತಮ ಹಾದಿಯಲ್ಲಿ ಸಾಗುತ್ತಿದ್ದ ಮಗನು ಈಗ ದಾರಿ ತಪ್ಪುತ್ತಿರುವುದು ಗಮನಕ್ಕೆ ಬರುವುದು.

ಧನು: ರಾತ್ರಿಯ ಸಮಯದಲ್ಲಿ ಆರೋಗ್ಯದಲ್ಲಿ ಏರುಪೇರು ಉಂಟಾಗಬಹುದು. ಜಾಗರೂಕರಾಗಿ ಇರುವುದು ಮುಖ್ಯ. ಬಹುದಿನಗಳ ನಂತರ ತಾಯಿ ಮಾಡಿದ ಅಡುಗೆ ಸೇವಿಸಿದ ತೃಪ್ತಿ ದೊರೆಯಲಿದೆ.

ಮಕರ: ವಿದ್ಯಾಭ್ಯಾಸದಲ್ಲಿ ಉದಾಸೀನತೆ ತೋರಿದರೆ ಅನಿವಾರ್ಯವಾಗಿ ಹಿನ್ನಡೆ ಎದುರಿಸಬೇಕಾಗುವುದು. ಮನಸ್ಸಿನ ಚಂಚಲ ಸ್ವಭಾವದಿಂದ ಇಂದಿನ ಕಾರ್ಯದಲ್ಲಿ ವಿಫಲರಾಗುವ ಸನ್ನಿವೇಶಗಳಿರುವುದು. ನೀಲಿ ಬಣ್ಣ ಶುಭ.

ಕುಂಭ: ಪಶುಸಂಗೋಪನೆ ಮಾಡುವವರಿಗೆ ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ ಬರುವುದು. ವಾಹನ ಸಂಚಾರದಲ್ಲಿ ಮಿತ ವೇಗವು ಮುಖ್ಯವಾಗಿರಲಿ. ಸ್ನೇಹಿತರಲ್ಲಿ ವಿಶ್ವಾಸ ವೃದ್ಧಿಯಾಗುವುದು.


ಮೀನ: ಗುರಿ ಮುಟ್ಟುವತ್ತ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ಯೋಜನೆಗಳು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರುವುದು. ಬುದ್ಧಿಯು ಸಂಕಟಗಳನ್ನು ದೂರ ಮಾಡಲಿದೆ.

ಪದಬಂಧ 5971

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರಗತಿಶೀಲ ಸ್ವಭಾವದವನು (4)
4.ಚುರಿಮುರಿ ಹತ್ತಿರವಿರಿಸಿದ ಸಣ್ಣ ಕತ್ತಿ (2)
5.ಉತ್ತಮ ಕುಲದಲ್ಲಿ ಹುಟ್ಟಿದವನು (4)
7.ಅನ್ನ ಮಾಡುವ ಪಾತ್ರೆ (3)
9.ದಶಕದಿಂದಲೂ ಕಾಡುತ್ತಿರುವ ಸೊಳ್ಳೆ (3)
11.ನಾದಿನಿ ಮಾಡಿದ ಶಬ್ದ ಉಲ್ಟಾ ಆಗಿದೆ (3)
12.ಇದು ಕೆಡುಕನ್ನುಂಟುಮಾಡುವುದು (3)
14.ಜಪ ಮಾಡುವಾಗ ಮಂತ್ರವನ್ನು ಲೆಕ್ಕವಿಡಲು ಬಳಸುವ ಮಾಲೆ (4)
16.ಒಂದು ದಿವಸದ ಎಂಟನೇ ಒಂದು ಭಾಗ (2)
17.ಕಡಲ ತೀರದ ಕಾಶ್ಮೀರ ಎಂದು ಪ್ರಸಿದ್ಧಿ ಪಡೆದಿರುವ ಉತ್ತರ ಕನ್ನಡ ಜಿಲ್ಲೆಯ ಊರು (4)

ಮೇಲಿಂದ ಕೆಳಕ್ಕೆ
1.ಮರಳಿ ಬರುವಿಕೆ (6)
2.ಈತ ಹಳ್ಳಿಯ ಮುಖ್ಯಸ್ಥ (3)
3.ಹೊಕ್ಕುಳು ಇಲ್ಲಿ ಕಾಣುತ್ತಿದೆ (2)
4.ಮಾವಿನ ಮರ ಇಲ್ಲಿ ಕಾಣುತ್ತಿದೆ (2)
5.ಜಾಂಡೀಸನ್ನು ಕನ್ನಡದಲ್ಲಿ ಹೇಳಿ (7)
6.ಅಗ್ನಿಯನ್ನು ಹೀಗೂ ಹೇಳುವರು (4)
8.ಕೋಲಾರ ಜಿಲ್ಲೆಯಲ್ಲಿರುವ ಮಾವಿನಹಣ್ಣಿನ ನಗರ (6)
10.ಅಧಿಕ ಸಿಟ್ಟು ಈ ರೀತಿ ಬಂದಿದೆ (4)
13.ಈತ ಕಬ್ಬಿಣದ ಕೆಲಸಗಾರ (3)
14.ಜವರಾಯನು ಕಾಣಿಸಿದ ವೇಗ! (2)
15.ಹೆಚ್ಚು ಹಣಖರ್ಚು ಮಾಡದೇ ಕಟ್ಟಿದ ಉಪ್ಪರಿಗೆ ಮನೆ (2)



5970ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಡ್ಡಿಕೆ 2.ನವನಟ
5.ನಾರಿಕೇಳ 6.ಸಂತತಿ
7.ವನ 10.ಗರೀಬ
11.ಣಪ 13.ವದಂತಿ
14. ದಸ್ಸವಾಗ
16.ಅತಿರೇಕ 17.ಆದರ್ಶ

ಮೇಲಿಂದ ಕೆಳಕ್ಕೆ:
1.ಅವಿನಾಭಾವ 2.ನಶ್ಯ
3.ನವತರುಣ 4.ಬೆಳದಿಂಗಳು
7.ಜಬರದಸ್ತಿ 9.ನವದಂಪತಿ
12.ಪರಾಗಸ್ಪರ್ಶ
15.ಸುಂಕ

ಸುಡೊಕು 6356

	1				5	4		9
4		7	6				5	
	6			4	8	1		
	2				7			6
5		1		6			2	
			5					7
	3	9				6		
6			8		4		3	1
		4		3		2		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


6355 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ಅಡಿಕೆ ಧಾರಣೆ (₹ಗಳಲ್ಲಿ)

ಶಿವಮೊಗ್ಗ		ಯಲ್ಲಾಪುರ			
ಬೆಟ್ಟೆ	42009-56300	ಅಪಿ	62900-65695	ಕೋಕ	4600-16109
ಗೊರಬಲು	17009-33569	ಬಿಳಿಗೋಟು	12899-24500	ಕೆಂಪುಗೋಟು	16899-25299
ರಾಶಿ	30899-51800			ರಾಶಿ	40369-59099
ಸರಕು	45199-86740	ಚಾಲಿ	28209-38792	ತಟ್ಟಿಬೆಟ್ಟೆ	27969-39269


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,124
ಇಂದಿನ ಅಂತ್ಯ	22,119
▼	5
ದಿನದ ಕನಿಷ್ಠ	22,004

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹25000
ಎಸಿ	₹14840
ಆರ್‌ಪಿ	₹22500
ಆರ್‌ಸಿ	₹12150

ಮಹಿಳಾ ಸಾಲಗಾರರ ಸಂಖ್ಯೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಸಾಲ ಪಡೆದ ಮಹಿಳೆಯರ ಪ್ರಮಾಣವು ಕಳೆದ ಐದು ವರ್ಷಗಳ ಅವಧಿಯಲ್ಲಿ ದೊಡ್ಡ ಮಟ್ಟದಲ್ಲಿ ಹೆಚ್ಚಳ ಕಂಡಿದೆ. ಈ ಅವಧಿಯಲ್ಲಿ ಸಾಲ ಪಡೆದ ಮಹಿಳೆಯರ ಪ್ರಮಾಣವು ವಾರ್ಷಿಕ ಸಂಯುಕ್ತ ಶೇಕಡ 22ರಷ್ಟು (ಸಿಎಜಿಆರ್) ದರದಲ್ಲಿ ಬೆಳೆದಿದೆ.

ಹೀಗೆ ಸಾಲ ಪಡೆದವರಲ್ಲಿ ಗ್ರಾಮೀಣ ಪ್ರದೇಶದವರು ಹಾಗೂ ಅರೆ–ನಗರ ಪ್ರದೇಶಗಳಿಗೆ ಸೇರಿದವರು ಹೆಚ್ಚಿದ್ದಾರೆ. ಇವರು ತಮ್ಮ ಕ್ರೆಡಿಟ್ ಅಂಕಗಳನ್ನು ಕಾಲಕಾಲಕ್ಕೆ ಪರಿಶೀಲಿಸುತ್ತಿರುತ್ತಾರೆ. ನೀತಿ ಆಯೋಗದ ಸಿಇಒ ಬಿ.ವಿ.ಆರ್. ಸುಬ್ರಹ್ಮಣ್ಯಂ ಅವರು ಸೋಮವಾರ ಬಿಡುಗಡೆ ಮಾಡಿದ ವರದಿಯೊಂದರಲ್ಲಿ ಈ ವಿವರಗಳು ಇವೆ.

ಮಹಿಳೆಯರು ವಿವಿಧ ಖರೀದಿಗಳಿಗಾಗಿ ಸಾಲ ಪಡೆದಿರುವುದು ಹೆಚ್ಚಿದೆ, ವಾಣಿಜ್ಯೋದ್ಯಮದ ಉದ್ದೇಶಕ್ಕೆ ಸಾಲ ಪಡೆದಿರುವುದು ಕಡಿಮೆ ಇದೆ. ಟ್ರಾನ್ಸ್‌ಯೂನಿ ಯನ್ ಸಿಬಿಲ್, ನೀತಿ ಆಯೋಗದ ಮಹಿಳಾ ಉದ್ಯಮಿಗಳ ವೇದಿಕೆ (ಡಬ್ಲ್ಯುಇಪಿ) ಮತ್ತು ಮೈಕ್ರೊಸೇವ್ ಕನ್ಸಲ್ಟಿಂಗ್ (ಎಂಎಸ್‌ಸಿ) ಈ ವರದಿಯನ್ನು ಸಿದ್ಧಪಡಿಸಿವೆ.

2024ರಲ್ಲಿ ಮಹಿಳೆಯರು ಪಡೆದ ಒಟ್ಟು ಸಾಲದಲ್ಲಿ ವಾಣಿಜ್ಯೋದ್ಯಮ ಉದ್ದೇಶಕ್ಕೆ ಪಡೆದಿದ್ದರ ಪ್ರಮಾಣ ಶೇ 3ರಷ್ಟು ಮಾತ್ರವೇ ಇದೆ. ವೈಯಕ್ತಿಕ ಸಾಲ, ಗೃಹಬಳಕೆ ವಸ್ತುಗಳಿಗಾಗಿ ಸಾಲ, ಮನೆ ಖರೀದಿಗೆ ಪಡೆದ ಸಾಲದ ಒಟ್ಟು ಪ್ರಮಾಣ ಶೇ 42ರಷ್ಟಿದೆ.

ಕ್ವಿಂಟಲ್ ದರ ₹32 ಸಾವಿರಕ್ಕೆ ಏರಿಕೆ: ಬೆಳೆಗಾರರಲ್ಲಿ ಸಂತಸ ಹೆಚ್ಚಳ

ಹುಣಸೆ ಹಣ್ಣಿಗೆ ದಾಖಲೆ ಬೆಲೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 2020ರಲ್ಲಿ ಕ್ವಿಂಟಲ್ ಹುಣಸೆಗೆ ₹35 ಸಾವಿರ ಸಿಕ್ಕಿದ ಧಾರಣೆ
- ಇಳುವರಿ ಕಡಿಮೆ ಆಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣ
- ಮುಂದಿನ ದಿನಗಳಲ್ಲೂ ಉತ್ತಮ ಧಾರಣೆ ಸಿಗುವ ಸೂಚನೆ

ತುಮಕೂರು: ಈ ಬಾರಿ ಹುಣಸೆ ಹಣ್ಣಿಗೆ ಶುಕ್ರದೆಸೆ ಆರಂಭವಾಗಿದ್ದು, ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುತ್ತಿದೆ. ನಗರದ ಎಪಿಎಂಸಿಯಲ್ಲಿ ಸೋಮವಾರ ಕ್ವಿಂಟಲ್ ಹುಣಸೆ ₹32 ಸಾವಿರದವರೆಗೂ ಮಾರಾಟವಾಗಿದೆ. ಈ ಬೆಳವಣಿಗೆ ಬೆಳೆಗಾರರಲ್ಲಿ ನಗು ಮೂಡಿಸಿದೆ.

ಉತ್ತಮ ಗುಣಮಟ್ಟದ ಹುಣಸೆ ಹಣ್ಣು ಕ್ವಿಂಟಲ್‌ಗೆ ಕನಿಷ್ಠ ₹13 ಸಾವಿರದಿಂದ ಗರಿಷ್ಠ ₹32 ಸಾವಿರದವರೆಗೂ ಮಾರಾಟವಾಗಿದೆ. ಮಧ್ಯಮ ಗುಣಮಟ್ಟದ ಹಣ್ಣನ್ನು ಕ್ವಿಂಟಲ್‌ಗೆ ₹7 ಸಾವಿರದಿಂದ ₹9 ಸಾವಿರ ಹಾಗೂ ಗೋಟು ಹಣ್ಣು ₹2,600ರಿಂದ ₹2,700ರವರೆಗೂ ವರ್ತಕರು ಖರೀದಿಸಿದ್ದಾರೆ.

ಹಿಂದಿನ ವರ್ಷವೂ ಆರಂಭದ ದಿನಗಳಲ್ಲಿ ಉತ್ತಮ ಬೆಲೆ ಸಿಕ್ಕಿತ್ತು. ಕಳೆದ ವರ್ಷದ ಇದೇ ಹೊತ್ತಿಗೆ ಕ್ವಿಂಟಲ್ ಹುಣಸೆ ಗರಿಷ್ಠ ₹26 ಸಾವಿರದವರೆಗೂ ಮಾರಾಟವಾಗಿತ್ತು. ಆವಕ ಹೆಚ್ಚಿದಂತೆ ಹಾಗೂ ಹಣ್ಣಿನ ಗುಣಮಟ್ಟ ಕುಸಿದಂತೆ ಧಾರಣೆಯೂ ಇಳಿಕೆ ಕಂಡಿತ್ತು.

ಸರಾಸರಿ ಕ್ವಿಂಟಲ್ ₹13 ಸಾವಿರದಿಂದ ₹20 ಸಾವಿರದವರೆಗೂ ಮಾರಾಟವಾಗಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಉತ್ತಮ ಬೆಲೆ ಸಿಗುತ್ತಿದೆ. 2020ರಲ್ಲಿ ದಾಖಲೆಯ ಬೆಲೆ ಸಿಕ್ಕಿದ್ದು ಕ್ವಿಂಟಲ್ ₹35 ಸಾವಿರದವರೆಗೂ ಏರಿಕೆಯಾಗಿತ್ತು. ನಂತರದ ವರ್ಷಗಳಲ್ಲಿ ಇಳಿಕೆಯತ್ತ ಮುಖ ಮಾಡಿತ್ತು. ಹಿಂದಿನ ಎರಡು ವರ್ಷಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೆಲೆ ಕುಸಿತವಾಗಿತ್ತು.

ಖರೀದಿಗೆ ಬಂದ ಆಂಧ್ರ, ತಮಿಳುನಾಡಿನ ವರ್ತಕರು: ಆಂಧ್ರಪ್ರದೇಶ ಹಾಗೂ ತಮಿಳುನಾಡಿನಿಂದ ಬಂದಿದ್ದ ವರ್ತಕರು ಖರೀದಿಯಲ್ಲಿ ಭಾಗವಹಿಸಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ಆಂಧ್ರಪ್ರದೇಶದ ವಿಜಯವಾಡಕ್ಕೆ ಸಾಗಣೆ ಮಾಡಲಾಗುತ್ತಿದ್ದು, ಅಲ್ಲಿನ ಶೀತಲಗೃಹದಲ್ಲಿ ಇಟ್ಟು ನಂತರ ಚಿಲ್ಲರೆ ಮಾರಾಟಕ್ಕೆ ಬಿಡುಗಡೆ ಮಾಡಲಾಗುತ್ತದೆ.



ಹುಣಸೆ ಹಣ್ಣು

ಏರಿಕೆಗೆ ಕಾರಣ: ಈ ಬಾರಿ ಹುಣಸೆ ಹಣ್ಣಿನ ಇಳುವರಿ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಸಲ ಶೇ 30ರಿಂದ ಶೇ 40ರಷ್ಟು ಬೆಳೆ ರೈತರ ಕೈಸೇರಿದೆ. ಇಳುವರಿ ಕುಸಿತ, ಮಾರುಕಟ್ಟೆಯಲ್ಲಿ ಆವಕ ತಗ್ಗಿರುವುದು ಹಾಗೂ ಖರೀದಿ ಬೇಡಿಕೆಯಿಂದಾಗಿ ಧಾರಣೆ ಹೆಚ್ಚುವಂತೆ ಮಾಡಿದೆ.

ಫೆಬ್ರುವರಿ ಮಧ್ಯ ಭಾಗದಿಂದ ಎಪಿಎಂಸಿ ಮಾರುಕಟ್ಟೆಗೆ ಹುಣಸೆ ಹಣ್ಣು ಬರುತ್ತಿದ್ದು, ಆರಂಭದಿಂದಲೂ ಉತ್ತಮ ಬೆಲೆ ಸಿಗುತ್ತಿದೆ. ಇನ್ನೂ ಎರಡು ತಿಂಗಳು ವಹಿವಾಟು ನಡೆಯಲಿದೆ. ಮಾರ್ಚ್ ತಿಂಗಳಲ್ಲಿ ಹುಣಸೆ ವಹಿವಾಟು ಬಿರುಸು ಪಡೆದುಕೊಳ್ಳುತ್ತದೆ. ಮುಂದಿನ ದಿನಗಳಲ್ಲೂ ಇದೇ ರೀತಿಯ ಧಾರಣೆ ಸಿಗುವ ಸೂಚನೆ ಕಾಣಿಸುತ್ತಿವೆ ಎಂದು ವರ್ತಕ ದೇವೇಂದ್ರಪ್ಪ ಹೇಳುತ್ತಾರೆ.

ಆರಂಭದಲ್ಲಿ ಐದಾರು ಲೋಡ್ ಬರುತ್ತಿದ್ದ ಹಣ್ಣು ನಿಧಾನವಾಗಿ ಏರಿಕೆಯಾಗುತ್ತಿದ್ದು, ಸೋಮವಾರ 10 ಲೋಡ್ (ಸುಮಾರು 100 ಟನ್) ಬಂದಿತ್ತು. ಮುಂಗಾರು ಮಳೆಗೆ ಮುನ್ನವೇ ಮಾರಾಟ ಮಾಡಬೇಕಿದ್ದು, ಮಾರ್ಚ್ ತಿಂಗಳಲ್ಲಿ ಇದೇ ಪ್ರಮಾಣದಲ್ಲಿ ಆವಕ ಆಗಬಹುದು ಎಂದು ಹೇಳಲಾಗುತ್ತಿದೆ.





ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹495-688
ದ್ವಿತಳಿ (ಬಿ.ವಿ)	₹289-830

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹188.50
ಆರ್‌ಎಸ್‌ಎಸ್-5	₹183.50
ಗುಡ್ ಲಾಟ್	₹177.50

(ಪ್ರತಿ ಕೆ.ಜಿಗೆ)

1,000 ನೌಕರರ ವಜಾಕ್ಕೆ ಓಲಾ ನಿರ್ಧಾರ

ನವದೆಹಲಿ (ಪಿಟಿಐ): ವಿದ್ಯುತ್‌ಚಾಲಿತ ದ್ವಿಚಕ್ರ ವಾಹನ ತಯಾರಿಕಾ ಕಂಪನಿ ಓಲಾ ಎಲೆಕ್ಟ್ರಿಕ್, ಅಂದಾಜು 1 ಸಾವಿರ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ನಿರ್ಧರಿಸಿದೆ.

ಕಂಪನಿಯ ಲಾಭದ ಪ್ರಮಾಣವು ತಗ್ಗಿದೆ. ವೆಚ್ಚ ಸರಿದೂಗಿಸುವ ಉದ್ದೇಶಕ್ಕೆ ಕಂಪನಿಯ ಎಲ್ಲಾ ಹಂತದಲ್ಲಿ ಹೆಚ್ಚಿರುವ ಉದ್ಯೋಗಿಗಳನ್ನು ವಜಾಗೊಳಿಸಲು ಮುಂದಾಗಿದೆ ಎಂದು ಕಂಪನಿಯ ವಕ್ತಾರರು ತಿಳಿಸಿದ್ದಾರೆ. ಕಳೆದ ವರ್ಷದ ನವೆಂಬರ್‌ನಲ್ಲಿ ಕಂಪನಿಯು 500 ನೌಕರರನ್ನು ವಜಾಗೊಳಿಸುವುದಾಗಿ ಹೇಳಿತ್ತು.

2 ಸಾವಿರ ಸಿಬ್ಬಂದಿ ಕಡಿತ: ಮೈಕ್ರೊಚಿಪ್

ಬೆಂಗಳೂರು (ರಾಯಿಟರ್ಸ್): ವಾಹನ ತಯಾರಕರಿಂದ ಚಿಪ್‌ಗಳಿಗೆ ಬೇಡಿಕೆ ಕಡಿಮೆ ಆಗುತ್ತಿರುವುದರಿಂದ ವೆಚ್ಚ ಸರಿದೂಗಿಸಿಕೊಳ್ಳಲು ಅಮೆರಿಕದ ಚಿಪ್ ತಯಾರಕ ಕಂಪನಿ ಮೈಕ್ರೊಚಿಪ್ ಟೆಕ್ನಾಲಜಿ 2 ಸಾವಿರ (ಶೇ 9ರಷ್ಟು) ಉದ್ಯೋಗಿಗಳ ವಜಾಗೊಳಿಸುವುದಾಗಿ ಸೋಮವಾರ ಹೇಳಿದೆ. ಈ ತಿಂಗಳಲ್ಲಿ ಉದ್ಯೋಗಿಗಳಿಗೆ ವಜಾಗೊಳಿಸುವ ಬಗ್ಗೆ ತಿಳಿಸಲಾಗುವುದು. ವಜಾ ಪ್ರಕ್ರಿಯೆ ಜೂನ್ ತ್ರೈಮಾಸಿಕದ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಕಂಪನಿ ತಿಳಿಸಿದೆ. ಮೇ ತಿಂಗಳಲ್ಲಿ ಅರಿಜೋನಾದಲ್ಲಿನ ಚಿಪ್ ತಯಾರಿಕಾ ಘಟಕವನ್ನು ಮುಚ್ಚಲು ಯೋಜಿಸಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ತಯಾರಿಕಾ ವಲಯ ಪ್ರಗತಿ ಕುಸಿತ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಬೆಳವಣಿಗೆ ಫೆಬ್ರುವರಿ ತಿಂಗಳಲ್ಲಿ 14 ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ವರದಿ ಸೋಮವಾರ ಹೇಳಿದೆ.

ಜನವರಿಯಲ್ಲಿ ಸೂಚ್ಯಂಕವು 57.7ರಷ್ಟಿತ್ತು. ಆದರೆ, ಫೆಬ್ರುವರಿಯಲ್ಲಿ 56.3ಕ್ಕೆ ಇಳಿದಿದೆ. ಹೊಸ ಬೇಡಿಕೆ ಮತ್ತು ಉತ್ಪಾದನೆಯಲ್ಲಿ ಇಳಿಕೆ ಆಗಿರುವುದೇ ಸೂಚ್ಯಂಕ ಕುಸಿತಕ್ಕೆ ಕಾರಣವಾಗಿದೆ ಎಂದು ತಿಳಿಸಿದೆ.

ಸೂಚ್ಯಂಕಗಳು 50ಕ್ಕಿಂತ ಕಡಿಮೆ ಇದ್ದರೆ ನಕಾರಾತ್ಮಕ ಪ್ರಗತಿ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಹೆಚ್ಚಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

‘ದೇಶದ ತಯಾರಿಕಾ ವಲಯದ ಉತ್ಪಾದನೆ ಇಳಿದಿದೆ. ಆದರೂ ಫೆಬ್ರುವರಿಯಲ್ಲಿ ದಾಖಲಾದ ಸೂಚ್ಯಂಕವು ಸಕಾರಾತ್ಮಕ ವಲಯದಲ್ಲಿದೆ’ ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

ಕಳೆದ ತಿಂಗಳು ಹೊಸ ರಫ್ತಿಗೆ ಬೇಡಿಕೆ ಹೆಚ್ಚಳವಾಯಿತು. ದೇಶೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯಿಂದ ಖರೀದಿ ಪ್ರಮಾಣ ಏರಿಕೆಗೊಂಡಿತು. ಇದು ಹೆಚ್ಚುವರಿಯಾಗಿ ಹೊಸ ನೇಮಕಾತಿಗೆ ಕಾರಣವಾಯಿತು. ವ್ಯಾಪಾರ ನಿರೀಕ್ಷೆಗಳು ಸದೃಢವಾಗಿವೆ. ಸಮೀಕ್ಷೆಯಲ್ಲಿ ಪಾಲ್ಗೊಂಡವರಲ್ಲಿ ಮೂರನೇ ಒಂದು ಭಾಗದಷ್ಟು ಜನರು ಮುಂಬರುವ ದಿನಗಳಲ್ಲಿ ಹೆಚ್ಚಿನ ಉತ್ಪಾದನೆಯನ್ನು ನಿರೀಕ್ಷಿಸಿದ್ದಾರೆ ಎಂದು ಭಂಡಾರಿ ಹೇಳಿದ್ದಾರೆ.

ಸುಮಾರು 400 ತಯಾರಕರಿಗೆ ಕಳುಹಿಸಲಾದ ಪ್ರಶ್ನಾವಳಿಗಳಲ್ಲಿ ನಮೂದಾಗಿರುವ ಪ್ರತಿಕ್ರಿಯೆ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.



ಎಫ್‌ಡಿಐ: ಶೇ 5.6ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕ ಅನಿಶ್ಚಿತ ಸ್ಥಿತಿಯಿಂದಾಗಿ 2024–25ರ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಪ್ರಮಾಣ ಶೇ 5.6ರಷ್ಟು ಕುಸಿದಿದೆ ಎಂದು ಸರ್ಕಾರ ಸೋಮವಾರ ತಿಳಿಸಿದೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹1 ಲಕ್ಷ ಕೋಟಿಗೂ ಹೆಚ್ಚು ಹೂಡಿಕೆಯಾಗಿತ್ತು. ಪ್ರಸಕ್ತ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹95,198 ಕೋಟಿ ವಿದೇಶಿ ನೇರ ಹೂಡಿಕೆಯಾಗಿದೆ ಎಂದು ತಿಳಿಸಿದೆ.

ಜೂನ್ ತ್ರೈಮಾಸಿಕದಲ್ಲಿ ₹1.41 ಲಕ್ಷ ಕೋಟಿ ಹಾಗೂ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1.18 ಲಕ್ಷ ಕೋಟಿ ಹೂಡಿಕೆಯಾಗಿದೆ ಎಂದು ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ತಿಳಿಸಿದೆ. ಸೇವೆಗಳು, ಕಂಪ್ಯೂಟರ್ ಸಾಫ್ಟ್‌ವೇರ್, ಹಾರ್ಡ್‌ವೇರ್, ದೂರಸಂಪರ್ಕ, ಆಟೊಮೊಬೈಲ್ ಮತ್ತು ರಾಸಾಯನಿಕ ಕ್ಷೇತ್ರದಲ್ಲಿ ಒಳಹರಿವು ಹೆಚ್ಚಳವಾಗಿದೆ.

ಕರ್ನಾಟಕದಲ್ಲಿ ₹39,289 ಕೋಟಿ ಹೂಡಿಕೆ: ಪ್ರಸಕ್ತ ಆರ್ಥಿಕ ವರ್ಷದ ಮೊದಲ 9 ತಿಂಗಳ ಅವಧಿಯಲ್ಲಿ ಮಹಾರಾಷ್ಟ್ರ ₹1.45 ಲಕ್ಷ ಕೋಟಿ ಎಫ್‌ಡಿಐ ಆಕರ್ಷಿಸಿದೆ. ಗುಜರಾತ್ ₹48,545 ಕೋಟಿ ಮತ್ತು ಕರ್ನಾಟಕ ₹39,289 ಕೋಟಿ ಹೂಡಿಕೆ ಸ್ವೀಕರಿಸಿದೆ ಎಂದು ತಿಳಿಸಿದೆ.

ನನ್ನನ್ನು ಬದಲಿಸುವುದು ಸುಲಭವಲ್ಲ; ನ್ಯಾಟೊ ಸದಸ್ಯತ್ವ ನೀಡಿ– ಝೆಲೆನ್‌ಸ್ಕಿ ಆಗ್ರಹ

‘ಭದ್ರತಾ ಖಾತ್ರಿ ನೀಡದ ಕದನ ವಿರಾಮ ವಿಫಲ’

ಲಂಡನ್ (ಎಎಫ್‌ಪಿ/ಎಪಿ): ‘ನನ್ನ ದೇಶಕ್ಕೆ ಭದ್ರತಾ ಖಾತರಿ ನೀಡದೆ ಜಾರಿಗೊಳಿಸುವ ಕದನ ವಿರಾಮವು ರಷ್ಯಾದ ಆಕ್ರಮಣವನ್ನು ಶಾಶ್ವತವಾಗಿ ಅಂತ್ಯಗೊಳಿಸುವುದಿಲ್ಲ. ಯುದ್ಧದ ಅಂತ್ಯವು ಇನ್ನೂ ಬಹಳ ದೂರ ಇದೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಪ್ರತಿಪಾದಿಸಿದರು.

ಲಂಡನ್‌ನಲ್ಲಿ ಯುರೋಪಿನ ಮಿತ್ರ ರಾಷ್ಟ್ರಗಳ ನಾಯಕರ ಜತೆ ಸಮಾಲೋಚನೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕದನ ವಿರಾಮದಿಂದ ಯುದ್ಧ ಅಂತ್ಯವಾಗುತ್ತದೆ ಅನಿಸುವುದಿಲ್ಲ’ ಎಂದರು.

ಕದನ ವಿರಾಮದ ಪ್ರಸ್ತಾವ: ಉಕ್ರೇನ್ ಜತೆಗಿನ ಮಾತುಕತೆಯ ಬಳಿಕ ಮಾತನಾಡಿದ ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್, ‘ಒಂದು ತಿಂಗಳ ಮಟ್ಟಿಗೆ ಉಕ್ರೇನ್‌ನ ವಾಯು ಪ್ರದೇಶ, ಸಮುದ್ರ ಪ್ರದೇಶ ಮತ್ತು ಇಂಧನ ಮೂಲಸೌಕರ್ಯ ಪ್ರದೇಶಗಳಿಗೆ ಅನ್ವಯವಾಗುವಂತೆ ಕದನ ವಿರಾಮದ ಪ್ರಸ್ತಾವವನ್ನು ಮಾಡಿದ್ದೇವೆ’ ಎಂದು ತಿಳಿಸಿದರು.



ವೊಲೊಡಿಮಿರ್ ಝೆಲೆನ್‌ಸ್ಕಿ

‘ಉಕ್ರೇನ್‌ಗೆ ಭದ್ರತಾ ಖಾತರಿ ನೀಡದೆ ಮಿತ್ರ ರಾಷ್ಟ್ರಗಳು ಕದನ ವಿರಾಮಕ್ಕೆ ಒತ್ತಾಯಿಸಿದರೆ, ಅದು ವಿಫಲವಾಗುತ್ತದೆ. ಏಕೆಂದರೆ ರಷ್ಯಾ ಒಪ್ಪಂದವನ್ನು ಮುರಿಯುತ್ತದೆ. ಆಗ ಉಕ್ರೇನ್ ಪ್ರತೀಕಾರ ತೀರಿಸಿಕೊಳ್ಳುತ್ತದೆ’ ಎಂದು ಝೆಲೆನ್‌ಸ್ಕಿ ನುಡಿದರು.

‘ವಾರದ ಬಳಿಕ ಏನಾಗುತ್ತದೆ ಎಂಬುದನ್ನು ಊಹಿಸಿ. ರಷ್ಯನ್ನರು ನಮ್ಮ ಮೇಲೆ ದಾಳಿ ನಡೆಸುತ್ತಾರೆ. ನಾವೂ ಅವರ ವಿರುದ್ಧ ಹೋರಾಡುತ್ತೇವೆ. ಯಾರು ಮೊದಲು ಗುಂಡು ಹಾರಿಸಿದರು ಎಂಬುದರ ಸುತ್ತ ಚರ್ಚೆಯಾಗುತ್ತಾ ವರ್ಷಗಳ ಕಾಲ ಹೋರಾಟ ಮುಂದುವರಿಯುತ್ತದೆ. ಇದರಿಂದ ಯಾರಿಗೆ ಪ್ರಯೋಜನ? ಸಹಜವಾಗಿ ರಷ್ಯಾಗೆ ಅನುಕೂಲವಾಗುತ್ತದೆಯೇ ಹೊರತು ಉಕ್ರೇನ್‌ಗಲ್ಲ’ ಎಂದು ಅವರು ತಿಳಿಸಿದರು.

ವಾಷಿಂಗ್ಟನ್‌ನಲ್ಲಿ ಶುಕ್ರವಾರ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ನಡುವೆ ನಡೆದ ವಾಗ್ವಾದದ ಬಳಿಕ, ಝೆಲೆನ್‌ಸ್ಕಿ ಅವರು ಉದ್ದೇಶಿತ ಕದನ ವಿರಾಮದ ನಿಯಮಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿದ್ದರು. ಉಕ್ರೇನ್‌ಗೆ ಭದ್ರತಾ ಖಾತರಿ ನೀಡುವಂತೆ ಒತ್ತಾಯಿಸಿದ್ದರು.

‘ಬದಲಿಸುವುದು ಸುಲಭವಲ್ಲ’: ‘ನನ್ನನ್ನು ಬದಲಿಸುವುದು ಸುಲಭವಲ್ಲ. ಆದರೆ ಯುದ್ಧದಿಂದ ಹಾನಿಗೊಳಗಾದ ಉಕ್ರೇನ್‌ಗೆ ನ್ಯಾಟೊ ಸದಸ್ಯತ್ವ ನೀಡಿದರೆ, ಅಧಿಕಾರದಿಂದ ಕೆಳಗೆ ಇಳಿಯುತ್ತೇನೆ’ ಎಂದು ಝೆಲೆನ್‌ಸ್ಕಿ ಪುನರುಚ್ಚರಿಸಿದ್ದಾರೆ.

ಅಮೆರಿಕದ ಕೆಲ ಹಿರಿಯ ರಿಪಬ್ಲಿಕನ್ನರು ಝೆಲೆನ್‌ಸ್ಕಿ ರಾಜೀನಾಮೆ ನೀಡಬೇಕು ಎಂದು ಸಲಹೆ ನೀಡಿದ್ದಾರೆ.

ಅಮೆರಿಕದ ಜತೆ ಒಪ್ಪಂದಕ್ಕೆ ಸಿದ್ಧ

‘ದೇಶದಲ್ಲಿನ ಖನಿಜ ಸಂಪನ್ಮೂಲಗಳ ಬಳಕೆಗೆ ಸಂಬಂಧಿಸಿದಂತೆ ಅಮೆರಿಕದ ಜತೆ ಒಪ್ಪಂದ ಮಾಡಿಕೊಳ್ಳಲು ಉಕ್ರೇನ್ ಸಿದ್ಧವಿದೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ತಿಳಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ಉದ್ದೇಶಿತ ಒಪ್ಪಂದಕ್ಕೆ ಸಂಬಂಧಿಸಿದವರೆಲ್ಲ ಒಪ್ಪಿಗೆ ಸೂಚಿಸಿದರೆ ಸಹಿ ಮಾಡಲು ಸಿದ್ಧ’ ಎಂದರು.

‘ಯುದ್ಧದ ಸಂದರ್ಭದಲ್ಲಿ ಅಮೆರಿಕ ನೀಡುತ್ತಿರುವ ಬೆಂಬಲಕ್ಕಾಗಿ ನಾವು ಕೃತಜ್ಞತೆ ಸಲ್ಲಿಸದೇ ಇರುವ ದಿನವೇ ಇಲ್ಲ. ಅಮೆರಿಕದ ಜತೆಗೆ ಇನ್ನೂ ಹೆಚ್ಚಿನ ರಾಜತಾಂತ್ರಿಕ ಮಾತುಕತೆ ನಡೆಸಲಾಗುವುದು’ ಎಂದು ಅವರು ಭರವಸೆ ನೀಡಿದರು.

ಬುಚ್ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರ್ಟ್ ತಡೆ



ಮುಂಬೈ (ಪಿಟಿಐ): ಷೇರು ಮಾರುಕಟ್ಟೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಮಾಜಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಹಾಗೂ ಇತರೆ ಐವರು ಅಧಿಕಾರಿಗಳ ವಿರುದ್ಧ ಮಾರ್ಚ್ 4ರ ವರೆಗೆ ಎಫ್‌ಐಆರ್ ದಾಖಲಿಸಬಾರದು ಎಂದು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಬಾಂಬೆ ಹೈಕೋರ್ಟ್ ಸೋಮವಾರ ಸೂಚಿಸಿದೆ.

ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಇಲ್ಲಿನ ವಿಶೇಷ ನ್ಯಾಯಾಲಯವು ಮಾರ್ಚ್ 1ರಂದು ನೀಡಿದ್ದ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಸೆಬಿ ಮಾಜಿ ಅಧ್ಯಕ್ಷೆ ಮಾಧವಿ ಪುರಿ ಬುಚ್, ಬಿಎಸ್‌ಇ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸುಂದರರಾಮನ್ ರಾಮಮೂರ್ತಿ ಹಾಗೂ ಇತರರು ಸೋಮವಾರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದರು.

ಮನವಿ ಆಲಿಸಿದ ನ್ಯಾಯಾಧೀಶ ಎಸ್.ಜಿ. ಡಿಗೆ ನೇತೃತ್ವದ ಏಕಸದಸ್ಯ ಪೀಠ, ಮಂಗಳವಾರ ವಾದವನ್ನು ಆಲಿಸಲಾಗುವುದು. ಅಲ್ಲಿಯವರೆಗೆ ಮುಂಬೈನ ವಿಶೇಷ ನ್ಯಾಯಾಲಯವು ನೀಡಿದ ನಿರ್ದೇಶನವನ್ನು ಎಸಿಬಿ ಪಾಲಿಸುವಂತಿಲ್ಲ ಎಂದು ಹೇಳಿದೆ.

ಮಾಧವಿ ಪುರಿ ಬುಚ್ ಹಾಗೂ ಇತರೆ ಐವರು ಅಧಿಕಾರಿಗಳು ಸೆಬಿಯ ನಿಯಮಾವಳಿ ಉಲ್ಲಂಘಿಸಿ ಆರ್ಥಿಕ ವಂಚನೆ ಎಸಗಿದ್ದಾರೆ ಎಂದು ಪತ್ರಕರ್ತ ಸಪನ್ ಶ್ರೀವಾಸ್ತವ ಅವರು, ಮುಂಬೈನ ಎಸಿಬಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶ ಶಶಿಕಾಂತ್ ಏಕನಾಥರಾವ್ ಬಂಗಾರ್ ಎಫ್‌ಐಆರ್ ದಾಖಲಿಸುವಂತೆ ಎಸಿಬಿಗೆ ನಿರ್ದೇಶನ ನೀಡಿದ್ದರು.

‘ಝೆಲೆನ್‌ಸ್ಕಿ ಶಾಂತಿ ಬಯಸುತ್ತಿಲ್ಲ’

ಮಾಸ್ಕೊ (ಎಎಫ್‌ಪಿ): ‘ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಶಾಂತಿ ಸ್ಥಾಪಿಸಲು ಬಯಸುತ್ತಿಲ್ಲ’ ಎಂದು ರಷ್ಯಾ ಆರೋಪಿಸಿದೆ.

ಕಳೆದ ವಾರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆಗೆ ಓವಲ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಉಕ್ರೇನ್ ಅಧ್ಯಕ್ಷರು ಆಕ್ಷೇಪ ವ್ಯಕ್ತಪಡಿಸಿ ಸಭೆಯಿಂದ ಹೊರನಡೆದ ಬೆನ್ನಲ್ಲೇ, ಈ ಹೇಳಿಕೆ ನೀಡಿದೆ.

‘ಅವರು ಶಾಂತಿ ಬಯಸುತ್ತಿಲ್ಲ. ಯಾರಾದರೂ ಅವರಿಗೆ ಶಾಂತಿ ಕುರಿತು ಹೇಳಬೇಕು. ಯುರೋಪಿಯನ್ನರು ಆ ರೀತಿ ಮಾಡಿದರೆ, ಎಲ್ಲವೂ ಒಳ್ಳೆಯದಾಗಲಿದೆ’ ಎಂದು ರಷ್ಯಾ ಸರ್ಕಾರದ ವಕ್ತಾರ ಡಿಮಿಟ್ರಿ ಪೆಸ್ಕೋವ್ ತಿಳಿಸಿದ್ದಾರೆ.

‘ರಾಜತಾಂತ್ರಿಕ ನೈಪುಣ್ಯತೆ ಕೊರತೆಯಿಂದ ಟ್ರಂಪ್ ಜೊತೆಗೆ ಝೆಲೆನ್‌ಸ್ಕಿ ಅತ್ಯಂತ ಕಟುವಾಗಿ ವರ್ತಿಸಿದರು. ಏನು ನಡೆದಿದೆ ಎಂಬುದರ ಕುರಿತು ರಷ್ಯಾ ಸಂಪೂರ್ಣ ಅರಿವು ಹೊಂದಿದ್ದು, ತನ್ನ ನಿಲುವು ಏನು ಎಂಬುದನ್ನು ಅಧ್ಯಕ್ಷ ವ್ಲಾದಿಮರ್ ಪುಟಿನ್ ಸಮರ್ಥವಾಗಿ ಮನವರಿಕೆ ಮಾಡಿದ್ದಾರೆ’ ಎಂದು ಅವರು ತಿಳಿಸಿದರು.

ಕಾಲ್ತುಳಿತ: ಪರಿಣಾಮಕಾರಿಯಾಗಿ ನಿರ್ವಹಿಸಿದೆವು: ಯೋಗಿ

ಲಖನೌ (ಪಿಟಿಐ): ‘ಕಾಲ್ತುಳಿತದ ಸುದ್ದಿಯು ಹೆಚ್ಚು ಮಹತ್ವ ಪಡೆಯದಂತೆ ನಾವು ತಡೆದೆವು. 8 ಕೋಟಿ ಭಕ್ತರು ಮತ್ತು ಸಾಧುಗಳು ಪ್ರಯಾಗರಾಜ್‌ನಲ್ಲಿದ್ದರು. ಸುದ್ದಿಯು ಹರಡಿಬಿಟ್ಟಿದ್ದರೆ, ಆತಂಕದಲ್ಲಿ ಮಹಾಕುಂಭ ಮೇಳದ ಇಡೀ ವಾತಾವರಣ ಹದಗೆಡುತ್ತಿತ್ತು’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೋಮವಾರ ಹೇಳಿದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಮತ್ತು ಭಾರತೀಯ ಅಂಚೆ ಸೇವೆ ಅಧಿಕಾರಿಗಳೊಂದಿಗೆ ಇಲ್ಲಿ ಅವರು ಮಾತನಾಡಿದರು. ತ್ರಿವೇಣಿ ಸಂಗಮದಲ್ಲಿ ಜ. 29ರಂದು ಮೌನಿ ಅಮಾವಾಸ್ಯೆ ಇತ್ತು. ಆ ದಿನ ಆದ ಕಾಲ್ತುಳಿತದಲ್ಲಿ 30 ಮಂದಿ ಮೃತಪಟ್ಟಿದ್ದರು. 60 ಮಂದಿಗೆ ಗಾಯಗಳಾಗಿತ್ತು. ‘ಪರಿಣಾಮಕಾರಿ ಕ್ರೈಸಿಸ್ ಮ್ಯಾನೇಜ್‌ಮೆಂಟ್‌ನ (ಬಿಕ್ಕಟ್ಟಿನ ನಿರ್ವಹಣೆ) ಮಹತ್ವ ದೊಡ್ಡದು. ಇಂಥ ಕಠಿಣ ಸಂದರ್ಭಗಳಲ್ಲಿ ಹೆಚ್ಚಿನ ಜನರು ಕೈಚೆಲ್ಲಿ ಕುಳಿತು ಬಿಡುತ್ತಾರೆ. ಶಕ್ತಿ ಸಂಚಯಿಸಿಕೊಂಡು, ತಾಳ್ಮೆಯಿಂದ ಪರಿಸ್ಥಿತಿಯನ್ನು ನಿಯಂತ್ರಿಸಬೇಕು’ ಎಂದು ಕಿವಿಮಾತು ಹೇಳಿದರು.

ಆಸ್ಕರ್: ‘ಅನೋರಾ’ ಅತ್ಯುತ್ತಮ ಚಿತ್ರ

5 ಪ್ರಶಸ್ತಿ ಬಾಚಿದ ಸಿನಿಮಾ: ಆ್ಯಡ್ರಿಯನ್ ಬ್ರಾಡಿ, ಮೈಕಿ ಮ್ಯಾಡಿಸನ್‌ಗೆ ಅತ್ಯುತ್ತಮ ನಟ–ನಟಿ ಗೌರವ

ಲಾಸ್ ಏಂಜಲೀಸ್ (ಎಎಫ್‌ಪಿ): ಲೈಂಗಿಕ ಕಾರ್ಯಕರ್ತೆಯೊಬ್ಬಳು ರಷ್ಯಾದ ಶ್ರೀಮಂತ ವ್ಯಕ್ತಿಯ ಮಗನನ್ನು ವಿವಾಹವಾದ ನಂತರ ನಡೆಯುವ ದುರಂತದ ಬದುಕಿನ ಕಥಾಹಂದರವನ್ನು ಒಳಗೊಂಡಿರುವ ‘ಅನೋರಾ’ ಚಿತ್ರವು ಅತ್ಯುತ್ತಮ ಚಲನಚಿತ್ರ ಸೇರಿದಂತೆ ಐದು ವಿಭಾಗಗಳಲ್ಲಿ ಆಸ್ಕರ್ ಪ್ರಶಸ್ತಿಗೆ ಭಾಜನವಾಗಿದೆ.

ಅಮೆರಿಕದ ಸೀನ್ ಬೇಕರ್ ನಿರ್ದೇಶನದ ‘ಅನೋರಾ’ ಚಿತ್ರವನ್ನು 60 ಲಕ್ಷ ಡಾಲರ್ (₹52.38 ಕೋಟಿ) ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಸಿನಿಮಾವು ಅತ್ಯುತ್ತಮ ನಿರ್ದೇಶಕ, ಅತ್ಯುತ್ತಮ ನಟಿ, ಅತ್ಯುತ್ತಮ ಮೂಲ ಚಿತ್ರಕಥೆ, ಅತ್ಯುತ್ತಮ ಚಿತ್ರ ಸಂಕಲನ ವಿಭಾಗಗಳಲ್ಲೂ 97ನೇ ಅಕಾಡೆಮಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.


ಅತ್ಯುತ್ತಮ ಚಲನಚಿತ್ರ ವಿಭಾಗದಲ್ಲಿ ಅನೋರಾಗೆ, ‘ಕಾನ್‌ಕ್ಲೇವ್’ ಮತ್ತು ‘ದಿ ಬ್ರೂಟಲಿಸ್ಟ್’ ಚಿತ್ರಗಳು ತೀವ್ರ ಪೈಪೋಟಿ ನೀಡಿದವು. ಒಟ್ಟು ಒಂಬತ್ತು ಸಿನಿಮಾಗಳು ಅಂತಿಮ ಸುತ್ತಿನಲ್ಲಿ ಪ್ರತಿಸ್ಪರ್ಧೆ ಒಡ್ಡಿದ್ದವು.

ಹಾಲಿವುಡ್‌ನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಅತ್ಯುತ್ತಮ ನಟ, ನಟಿ: ‘ದಿ ಬ್ರೂಟಲಿಸ್ಟ್’ ಚಿತ್ರದ ನಟ ಆ್ಯಡ್ರಿಯನ್ ಬ್ರಾಡಿ ಅತ್ಯುತ್ತಮ ನಟ ಹಾಗೂ ‘ಅನೋರಾ’ದ ನಟಿ ಮೈಕಿ ಮ್ಯಾಡಿಸನ್ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದರು.

‘ನನ್ನ ಕನಸು ನನಸಾಗಿದೆ. ನಾನು ಲಾಸ್ ಏಂಜಲೀಸ್‌ನಲ್ಲಿ ಬೆಳೆದವಳು. ಆದರೆ ಹಾಲಿವುಡ್ ನನ್ನಿಂದ ಯಾವಾಗಲೂ ತುಂಬ ದೂರವಿದೆ ಎಂದು ಭಾವಿಸಿದ್ದೆ. ಆದರೆ ಇಂದು ನಾನು ಇಲ್ಲೇ ನಿಂತಿದ್ದೇನೆ’ ಎಂದು ಮ್ಯಾಡಿಸನ್ ಸುದ್ದಿಗಾರರ ಬಳಿ ಸಂತಸ ಹಂಚಿಕೊಂಡರು.

ಬೇಕರ್‌ಗೆ ನಾಲ್ಕು ಪ್ರಶಸ್ತಿ: ‘ಅನೋರಾ’ದ ನಿರ್ದೇಶಕ ಸೀನ್ ಬೇಕರ್ ಅವರು ವೈಯಕ್ತಿಕವಾಗಿ ನಾಲ್ಕು ಆಸ್ಕರ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ಈ ಮೂಲಕ ಅವರು 1954ರಲ್ಲಿ ನಾಲ್ಕು ವಿಭಿನ್ನ ಚಿತ್ರಗಳಿಗೆ ಪ್ರಶಸ್ತಿ ಪಡೆದಿದ್ದ ವಾಲ್ಟ್ ಡಿಸ್ನಿ ಅವರ ದಾಖಲೆ ಸರಿಗಟ್ಟಿದರು.



ಅತ್ಯುತ್ತಮ ನಟಿ ಪ್ರಶಸ್ತಿ ಪಡೆದ ಮೈಕಿ ಮ್ಯಾಡಿಸನ್ –ಎಎಫ್‌ಪಿ ಚಿತ್ರ



ಅತ್ಯುತ್ತಮ ನಟ ಪ್ರಶಸ್ತಿ ಪಡೆದ ಆ್ಯಡ್ರಿಯನ್ ಬ್ರಾಡಿ –ಎಎಫ್‌ಪಿ ಚಿತ್ರ



‘ಅನೋರಾ’ ಚಿತ್ರಕ್ಕಾಗಿ ನಾಲ್ಕು ಪ್ರಶಸ್ತಿಗಳನ್ನು ಪಡೆದ ನಿರ್ದೇಶಕ ಸೀನ್ ಬೇಕರ್ – ಎಪಿ / ಪಿಟಿಐ ಚಿತ್ರ

‘ಅನುಜಾ’ಗೆ ತಪ್ಪಿದ ಆಸ್ಕರ್

ನವದೆಹಲಿ (ಪಿಟಿಐ): ‘ಬೆಸ್ಟ್ ಲೈವ್ ಆ್ಯಕ್ಷನ್ ಶಾರ್ಟ್ ಫಿಲ್ಮ್’ ವಿಭಾಗದಲ್ಲಿ ನಾಮನಿರ್ದೇಶನಗೊಂಡಿದ್ದ ಕಿರುಚಿತ್ರ ‘ಅನುಜಾ’ಗೆ ಆಸ್ಕರ್ ಪ್ರಶಸ್ತಿ ಕೈತಪ್ಪಿದೆ.

ಈ ವಿಭಾಗದಲ್ಲಿ 'ಐ ಆ್ಯಮ್ ನಾಟ್ ಎ ರೋಬೊಟ್' ಆಯ್ಕೆಯಾಗಿದೆ. ಆಡಂ ಜೆ ಗ್ರೇವ್ಸ್ ಮತ್ತು ಸುಚಿತ್ರಾ ಮಟ್ಟೈ ಅವರು ‘ಅನುಜಾ’ ಚಿತ್ರವನ್ನು ನಿರ್ದೇಶಿಸಿದ್ದಾರೆ. ಬಾಲ ಕಾರ್ಮಿಕ ಪದ್ಧತಿ ಸಮಸ್ಯೆ ಬಗ್ಗೆ ಗಮನ ಸೆಳೆಯುತ್ತದೆ. ಎರಡು ಬಾರಿ ಆಸ್ಕರ್ ವಿಜೇತ ನಿರ್ಮಾಪಕ ಗುನೀತ್ ಮೊಂಗಾ ಮತ್ತು ನಟಿ ಪ್ರಿಯಾಂಕಾ ಚೋಪ್ರಾ ಕಾರ್ಯನಿರ್ವಾಹಕ ನಿರ್ಮಾಪಕರಾಗಿದ್ದು, ಹಾಲಿವುಡ್‌ನ ಪ್ರಸಿದ್ಧ ಲೇಖಕ ಮಿಂಡಿ ಕಾಲಿಂಗ್ ನಿರ್ಮಾಪಕರಾಗಿದ್ದಾರೆ.

ಪ್ರಶಸ್ತಿ ವಿವರ

ಅತ್ಯುತ್ತಮ ಚಿತ್ರ	ಅನೋರಾ
ಅತ್ಯುತ್ತಮ ನಿರ್ದೇಶಕ	ಸೀನ್ ಬೇಕರ್ (ಅನೋರಾ)
ಅತ್ಯುತ್ತಮ ನಟ	ಆ್ಯಡ್ರಿಯನ್ ಬ್ರಾಡಿ (ದಿ ಬ್ರೂಟಲಿಸ್ಟ್)
ಅತ್ಯುತ್ತಮ ನಟಿ	ಮೈಕಿ ಮ್ಯಾಡಿಸನ್ (ಅನೋರಾ)
ಅತ್ಯುತ್ತಮ ಪೋಷಕ ನಟ	ಕೀರನ್ ಕುಲ್ಕಿನ್ (ಎ ರಿಯಲ್ ಪೇನ್)
ಅತ್ಯುತ್ತ ಪೋಷಕ ನಟಿ	ಜೋ ಸಲ್ಡಾನಾ (ಎಮಿಲಿಯಾ ಪೆರೆಜ್)
ಅತ್ಯುತ್ತಮ ಮೂಲ ಚಿತ್ರಕಥೆ	ಸೀನ್ ಬೇಕರ್ (ಅನೋರಾ)
ಅತ್ಯುತ್ತಮ ರೂಪಾಂತರ ಚಿತ್ರಕಥೆ	ಪೀಟರ್ ಸ್ಟ್ರಾಘನ್ (ಕಾನ್‌ಕ್ಲೇವ್)
ಅತ್ಯುತ್ತಮ ಅಂತರರಾಷ್ಟ್ರೀಯ ಸಿನಿಮಾ	ಐ ಆ್ಯಮ್ ಸ್ಟಿಲ್ ಹಿಯರ್ (ಬ್ರೆಜಿಲ್)
ಅತ್ಯುತ್ತಮ ಅನಿಮೇಟೆಡ್ ಚಿತ್ರ	ಫ್ಲೊ
ಅತ್ಯುತ್ತಮ ಚಿತ್ರ ಸಂಕಲನ	ಸೀನ್ ಬೇಕರ್ (ಅನೋರಾ)

ಗಾಜಾ ಬಿಕ್ಕಟ್ಟು ಚಿತ್ರಕ್ಕೆ ಪ್ರಶಸ್ತಿ

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಸಂಘರ್ಷದಿಂದ ಎದುರಾದ ಸಂಕಷ್ಟಗಳನ್ನು ಅನಾವರಣಗೊಳಿಸುವ 'ನೋ ಅದರ್ ಲ್ಯಾಂಡ್' ಚಿತ್ರವು ಅತ್ಯುತ್ತಮ ಸಾಕ್ಷ್ಯಚಿತ್ರ ವಿಭಾಗದಲ್ಲಿ ಪ್ರಶಸ್ತಿ ಗಿಟ್ಟಿಸಿದೆ.

ಪ್ಯಾಲೆಸ್ಟೀನ್ ಹೋರಾಟಗಾರ ಬಸೆಲ್ ಆದ್ರಾ, ಇಸ್ರೇಲಿ ಪತ್ರಕರ್ತ ಯುವಾಲ್ ಅಬ್ರಾಹಂ ಅವರು ಜೊತೆಯಾಗಿ ಸುಮಾರು ಐದು ವರ್ಷಗಳು ಶ್ರಮಿಸಿ ಈ ಸಾಕ್ಷ್ಯಚಿತ್ರ ನಿರ್ಮಿಸಿದ್ದಾರೆ.

ಮಿಲಿಟರಿ ತರಬೇತಿಯ ಮೈದಾನಕ್ಕಾಗಿ ಇಸ್ರೇಲಿ ಯೋಧರು ಮನೆಗಳನ್ನು ಕೆಡಹುವುದೂ ಸೇರಿದಂತೆ ಸಂಘರ್ಷದಿಂದ ಜನರು ಅನುಭವಿಸಿದ ಪರಿಸ್ಥಿತಿಗಳನ್ನು ಚಿತ್ರದಲ್ಲಿ ಬಿಂಬಿಸಲಾಗಿದೆ.

‘ನೋ ಅದರ್ ಲ್ಯಾಂಡ್ ವಾಸ್ತವ ಸಂಗತಿಗಳನ್ನು ಬಿಚ್ಚಿಟ್ಟಿದೆ. ಗಾಜಾದಲ್ಲಿ ಜನರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ನಿಲ್ಲಬೇಕು. ಗಾಜಾ ಮತ್ತು ಇಸ್ರೇಲ್‌ನ ಸಂಘರ್ಷವನ್ನು ಜಗತ್ತು ಅಂತ್ಯಗೊಳಿಸಬೇಕು. ಆದರೆ, ಅಮೆರಿಕವು ತಡೆಯೊಡ್ಡುತ್ತಿದೆ’ ಎಂದು ನಿರ್ದೇಶಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತನಿಖೆಗೆ ಸಹಕರಿಸಲು ಅಲಹಾಬಾದಿಯಾಗೆ ಸುಪ್ರೀಂ ಕೋರ್ಟ್ ಸೂಚನೆ

‘ದಿ ರಣವೀರ್ ಶೋ’ ಪ್ರಸಾರಕ್ಕೆ ಅಸ್ತು



ರಣವೀರ್

ನವದೆಹಲಿ (ಪಿಟಿಐ): ಪಾಡ್‌ಕಾಸ್ಟರ್ ರಣವೀರ್ ಅಲಹಾಬಾದಿಯಾ ಅವರು ‘ನೈತಿಕತೆ ಮತ್ತು ಸಭ್ಯತೆ’ಯನ್ನು ಪಾಲಿಸುವುದಾದರೆ ಅವರು ತಮ್ಮ ‘ದಿ ರಣವೀರ್ ಶೋ’ ಕಾರ್ಯಕ್ರಮವನ್ನು ಪ್ರಸಾರ ಮಾಡಲು ಅಡ್ಡಿಯಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಆದರೆ ಆ ಕಾರ್ಯಕ್ರಮವು ಎಲ್ಲ ವಯಸ್ಸಿನವರೂ ವೀಕ್ಷಿಸಲು ಸೂಕ್ತವಾಗಿರಬೇಕು ಎಂದು ತಾಕೀತು ಮಾಡಿದೆ.

ಪಾಡ್‌ಕಾಸ್ಟ್ ಮಾತ್ರವೇ ತಮ್ಮ ಜೀವನೋಪಾಯಕ್ಕೆ ಇರುವ ಮಾರ್ಗ, ತಾವು ನೇಮಕ ಮಾಡಿಕೊಂಡಿರುವ ಸರಿಸುಮಾರು 280 ಜನ ಈ ಪಾಡ್‌ಕಾಸ್ಟ್ ಅನ್ನೇ ನೆಚ್ಚಿಕೊಂಡಿದ್ದಾರೆ ಎಂದು ಅಲಹಾಬಾದಿಯಾ ಅವರು ಹೇಳಿದ್ದನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ದಾಖಲಿಸಿಕೊಂಡಿತು.

ಅಲಹಾಬಾದಿಯಾ ಅವರನ್ನು ಬಂಧಿಸದಂತೆ ನೀಡಿರುವ ಮಧ್ಯಂತರ ತಡೆಯಾಜ್ಞೆಯನ್ನು ಪೀಠವು ಮುಂದಿನ ಆದೇಶದವರೆಗೆ ವಿಸ್ತರಿಸಿತು. ಅಲಹಾಬಾದಿಯಾ ಅವರು ಗುವಾಹಟಿಯಲ್ಲಿ ತನಿಖೆಗೆ ಹಾಜರಾಗಬೇಕು ಎಂದು ಸೂಚಿಸಿತು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ‘ಇಂಡಿಯಾಸ್ ಗಾಟ್ ಲೇಟೆಂಟ್ ಹೆಸರಿನ ವಿವಾದಿತ ಕಾರ್ಯಕ್ರಮದಲ್ಲಿ ಅಲಹಾಬಾದಿಯಾ ಆಡಿದ ಮಾತುಗಳು ಅಶ್ಲೀಲ ಮಾತ್ರವೇ ಅಲ್ಲ, ವಿಕೃತವಾಗಿಯೂ ಇವೆ’ ಎಂದು ಹೇಳಿದರು. ಅಲಹಾಬಾದಿಯಾ ಅವರು ಯಾವುದೇ ಕಾರ್ಯಕ್ರಮ ಪ್ರಸಾರ ಮಾಡಬಾರದು ಎಂದು ನೀಡಿರುವ ಆದೇಶವನ್ನು ಬದಲಾಯಿಸಬಾರದು ಎಂದು ಮೆಹ್ತಾ ಕೋರಿದರು.

‘ಅವರು ಸ್ವಲ್ಪ ಕಾಲ ಮೌನವಾಗಿ ಇರಲಿ’ ಎಂದು ಮೆಹ್ತಾ ಹೇಳಿದರು. ಅಲಹಾಬಾದಿಯಾ ಅವರನ್ನು ಪ್ರತಿನಿಧಿಸುತ್ತಿರುವ ಹಿರಿಯ ವಕೀಲ ಅಭಿನವ್ ಚಂದ್ರಚೂಡ್ ಅವರನ್ನು ಉದ್ದೇಶಿಸಿ ಪೀಠವು, ‘ಮೂಲಭೂತ ಹಕ್ಕುಗಳು ಅಂದರೆ ತಟ್ಟೆಯಲ್ಲಿ ಸಿಗುವ ಊಟದಂತೆ ಅಲ್ಲ. ಅವುಗಳ ಬಳಕೆಗೆ ನಿರ್ಬಂಧಗಳೂ ಇವೆ’ ಎಂದು ಹೇಳಿತು.

ಆರೋಪಿಗಳ ಪೈಕಿ ಒಬ್ಬರು ಕೆನಡಾಕ್ಕೆ ಹೋಗಿ, ಅಲ್ಲಿ ಪ್ರಕರಣದ ಬಗ್ಗೆ ಮಾತನಾಡಿದ್ದಾರೆ ಎಂದು ಸೂರ್ಯ ಕಾಂತ್ ಹೇಳಿದರು. ‘ನಾವು ಹಳೆಯ ಕಾಲದವರು ಎಂದು ಈ ಯುವಕರು ಭಾವಿಸಿರಬಹುದು. ಆದರೆ ಅವರೊಂದಿಗೆ ಹೇಗೆ ವ್ಯವಹರಿಸಬೇಕು ಎಂಬುದು ನಮಗೆ ಗೊತ್ತಿದೆ. ನ್ಯಾಯಾಲಯಗಳನ್ನು ಹಗುರವಾಗಿ ಪರಿಗಣಿಸಬೇಡಿ’ ಎಂದರು.

ಅಲಹಾಬಾದಿಯಾ ಅವರು ತಮ್ಮ ಕಾರ್ಯಕ್ರಮದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಏನನ್ನೂ ಮಾತನಾಡುವಂತಿಲ್ಲ, ವಿದೇಶಕ್ಕೆ ತೆರಳುವಂತಿಲ್ಲ ಎಂದು ಪೀಠವು ಸೂಚಿಸಿತು.

‘ಇಂಡಿಯಾಸ್ ಗಾಟ್ ಲೇಟೆಂಟ್’ ಕಾರ್ಯಕ್ರಮದಲ್ಲಿ ತಂದೆ–ತಾಯಿ ಮತ್ತು ಲೈಂಗಿಕತೆ ವಿಚಾರವಾಗಿ ಅಲಹಾಬಾದಿಯಾ ಅವರು ಆಡಿರುವ ಮಾತುಗಳು ಭಾರಿ ವಿವಾದ ಸೃಷ್ಟಿಸಿದ್ದವು. ಅಲಹಾಬಾದಿಯಾ ವಿರುದ್ಧ ಹಲವೆಡೆ ಎಫ್‌ಐಆರ್‌ಗಳು ದಾಖಲಾಗಿವೆ.

> ಮೂಲಭೂತ ಹಕ್ಕುಗಳು ಅಂದರೆ ತಟ್ಟೆಯಲ್ಲಿ ಸಿಗುವ ಊಟದಂತೆ ಅಲ್ಲ. ಅವುಗಳ ಬಳಕೆಗೆ ನಿರ್ಬಂಧಗಳೂ ಇವೆ
> **ಸುಪ್ರೀಂ ಕೋರ್ಟ್ ವಿಭಾಗೀಯ ಪೀಠ**

‘ದೃಷ್ಟಿದೋಷ ಇರುವವರಿಗೆ ಅವಕಾಶ ನಿರಾಕರಿಸುವಂತಿಲ್ಲ’

ದೃಷ್ಟಿದೋಷ ಇರುವ ವ್ಯಕ್ತಿಗಳ ನ್ಯಾಯಾಂಗದಲ್ಲಿ ನೌಕರಿ ಗಿಟ್ಟಿಸಿಕೊಳ್ಳುವ ಅವಕಾಶ ನಿರಾಕರಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ತೀರ್ಪು ನೀಡಿದೆ.

ಕೆಲವು ರಾಜ್ಯಗಳಲ್ಲಿ ದೃಷ್ಟಿದೋಷ ಇರುವವರಿಗೆ ನ್ಯಾಯಾಂಗದ ಹುದ್ದೆಗಳಲ್ಲಿ ಕೋಟಾ ಇಲ್ಲದಿರುವುದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಹಾಗೂ ಸ್ವಯಂಪ್ರೇರಿತವಾಗಿ ದಾಖಲು ಮಾಡಿಕೊಂಡ ಅರ್ಜಿಯೊಂದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ಡಿಸೆಂಬರ್ 3ರಂದು ತೀರ್ಪು ಕಾಯ್ದಿರಿಸಿತ್ತು.

ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿ ಮಹಾದೇವನ್ ಅವರು, ‘ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳು ನ್ಯಾಯಾಂಗಕ್ಕೆ ಸಂಬಂಧಿಸಿದ ನೇಮಕಾತಿಗಳಲ್ಲಿ ಯಾವುದೇ ಬಗೆಯ ತಾರತಮ್ಯಕ್ಕೆ ಗುರಿಯಾಗಬಾರದು, ಸರ್ಕಾರಗಳು ಅವರಿಗಾಗಿ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಹೇಳಿದ್ದಾರೆ. ಯಾವುದೇ ಅಭ್ಯರ್ಥಿಯ ಅರ್ಜಿಯನ್ನು ಆತ ಅಂಗವಿಕಲ ಎಂಬ ಒಂದೇ ಕಾರಣಕ್ಕೆ ಪರಿಗಣಿಸದೆ ಇರುವಂತಿಲ್ಲ ಎಂದಿದೆ.

ಮಾಹಿತಿ ತಡೆಹಿಡಿಯುವ ಆದೇಶ: ಅರ್ಜಿ ವಿಚಾರಣೆಗೆ ಒಪ್ಪಿಗೆ

ಸಾಮಾಜಿಕ ಜಾಲತಾಣಗಳ ಮೂಲಕ ವಿಷಯವೊಂದನ್ನು ಪ್ರಕಟಿಸಿದ ವ್ಯಕ್ತಿಗೆ ನೋಟಿಸ್ ನೀಡದೆಯೇ ಆ ವಿಷಯವನ್ನು ತಡೆಹಿಡಿಯುವುದಕ್ಕೆ ಸಂಬಂಧಿಸಿದ ಅರ್ಜಿಯೊಂದರ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಈ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಮಾಹಿತಿ ತಂತ್ರಜ್ಞಾನ ನಿಯಮ–2009ರಲ್ಲಿನ 16ನೆಯ ನಿಯಮವನ್ನು ರದ್ದುಪಡಿಸಬೇಕು ಎಂಬ ಕೋರಿಕೆಯು ಅರ್ಜಿಯಲ್ಲಿದೆ.

ಅರ್ಜಿದಾರ ಸಂಸ್ಥೆ ‘ಸಾಫ್ಟ್‌ವೇರ್ ಫ್ರೀಡಂ ಲಾ ಸೆಂಟರ್’ ಪರವಾಗಿ ಹಾಜರಿದ್ದ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಅವರು, ‘ಮಾಹಿತಿಯನ್ನು ಬಿತ್ತರಿಸಿದ ಮೂಲ ವ್ಯಕ್ತಿಗೆ ನೋಟಿಸ್ ನೀಡಿರಲಿಲ್ಲ. ‘ಎಕ್ಸ್’ನಂತಹ ವೇದಿಕೆಗಳಿಗೆ ಮಾತ್ರ ನೋಟಿಸ್ ನೀಡಲಾಗಿತ್ತು’ ಎಂದು ತಿಳಿಸಿದರು.


‘ಮಾಹಿತಿಯನ್ನು ತಡೆಹಿಡಿಯುವ ಅಧಿಕಾರವು ಸರ್ಕಾರಕ್ಕೆ ಇದೆಯೇ ಎಂಬ ಪ್ರಶ್ನೆ ಅರ್ಜಿಯಲ್ಲಿಲ್ಲ. ಆದರೆ, ಮಾಹಿತಿಯನ್ನು ತಡೆಹಿಡಿಯುವಾಗ ಆ ಮಾಹಿತಿಯನ್ನು ಬಹಿರಂಗಪಡಿಸಿದ ವ್ಯಕ್ತಿಗೆ ನೋಟಿಸ್ ನೀಡಬೇಕಾಗಿತ್ತು’ ಎಂದು ಇಂದಿರಾ ವಾದಿಸಿದರು.



ಕರಡು ಮಾರ್ಗಸೂಚಿಗೆ ಸೂಚನೆ

ಸಾಮಾಜಿಕ ಜಾಲತಾಣಗಳ ಮೂಲಕ ಪ್ರಸಾರವಾಗುವ, ಪ್ರಕಟವಾಗುವ ವಿಷಯಗಳ ನಿಯಂತ್ರಣದ ವಿಚಾರವಾಗಿ ಕರಡು ಸಿದ್ಧಪಡಿಸಬೇಕು, ಅದನ್ನು ಸಾರ್ವಜನಿಕರ ಅವಗಾಹನೆಗೆ ಬಿಡುಗಡೆ ಮಾಡಬೇಕು ಎಂದು ಪೀಠವು ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿತು.

‘ಸಿಂಹಗಳ ಗಣತಿ ಮೇ ತಿಂಗಳಲ್ಲಿ’



ಪ್ರಧಾನಿ ಮೋದಿ –ಪಿಟಿಐ ಚಿತ್ರ

ಸಾಸನ್ (ಗುಜರಾತ್) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವ ವನ್ಯಜೀವಿ ದಿನದ ಅಂಗವಾಗಿ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಏಳನೆಯ ಸಭೆಯನ್ನು ಇಲ್ಲಿ ಸೋಮವಾರ ನಡೆಸಿದರು. ಸಿಂಹಗಳ ಗಣತಿಯನ್ನು ಮೇ ತಿಂಗಳಲ್ಲಿ ನಡೆಸಲಾಗುವುದು ಎಂದು ಪ್ರಕಟಿಸಿದರು.

ಮೋದಿ ಅವರು ಸೋಮವಾರ ಬೆಳಿಗ್ಗೆ ಗಿರ್ ರಾಷ್ಟ್ರೀಯ ಉದ್ಯಾನದಲ್ಲಿ ಸಫಾರಿ ನಡೆಸಿದರು. ನಂತರ ಮಂಡಳಿಯ ಸಭೆಗೆ ತೆರಳಿದರು. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಅವರೂ ಸಭೆಯಲ್ಲಿ ಭಾಗಿಯಾಗಿದ್ದರು.

ಶಾಸನಾತ್ಮಕ ಸಂಸ್ಥೆಯಾಗಿರುವ ವನ್ಯಜೀವಿ ಮಂಡಳಿಗೆ ಪ್ರಧಾನಿಯವರು ಅಧ್ಯಕ್ಷರಾಗಿರುತ್ತಾರೆ. ವನ್ಯಜೀವಿಗಳ ಆರೋಗ್ಯಕ್ಕೆ ಸಂಬಂಧಿಸಿದ ವಿವಿಧ ವಿಷಯಗಳಲ್ಲಿ ಸಮನ್ವಯ ಸಾಧಿಸುವ ಕೇಂದ್ರಕ್ಕೆ ಮೋದಿ ಅವರು ಇದೇ ಸಂದರ್ಭದಲ್ಲಿ ಶಂಕುಸ್ಥಾಪನೆ ನೆರವೇರಿಸಿದರು. ಮಾನವ–ವನ್ಯಜೀವಿ ಸಂಘರ್ಷವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಕೊಯಮತ್ತೂರಿನಲ್ಲಿ ಕೇಂದ್ರವೊಂದನ್ನು ಆರಂಭಿಸುವ ಘೋಷಣೆಯನ್ನು ಮೋದಿ ಮಾಡಿದರು.

ಸಂಘಟಿತ ಯತ್ನಗಳ ಫಲವಾಗಿ ಸಿಂಹಗಳ ಸಂಖ್ಯೆಯು ನಿರಂತರವಾಗಿ ಹೆಚ್ಚಳ ಕಂಡಿದೆ ಎಂದು ಮೋದಿ ಅವರು ‘ಎಕ್ಸ್’ನಲ್ಲಿ ಬರೆದಿದ್ದಾರೆ. ಈ ಸಿಂಹಗಳ ಆವಾಸಸ್ಥಾನವನ್ನು ಕಾಪಾಡುವಲ್ಲಿ ಬುಡಕಟ್ಟು ಸಮುದಾಯಗಳ ಮತ್ತು ಮಹಿಳೆಯರ ಕೊಡುಗೆಯನ್ನು ಅವರು ಶ್ಲಾಘಿಸಿದ್ದಾರೆ.

ಬೇಗ ಮಕ್ಕಳು ಪಡೆಯಿರಿ: ಸ್ಟಾಲಿನ್



ಸ್ಟಾಲಿನ್

ನಾಗಪಟ್ಟಣಂ (ತಮಿಳುನಾಡು) (ಪಿಟಿಐ): ಹೆಚ್ಚು ಸಂಸದರನ್ನು ಪಡೆಯಲು ಹೆಚ್ಚಿನ ಜನಸಂಖ್ಯೆಯೇ ಮಾನದಂಡವಾಗಿದೆ. ಹೀಗಾಗಿ, ರಾಜ್ಯದ ಯುವಜನರು ಮದುವೆಯಾಗುತ್ತಿದ್ದಂತೆಯೇ ಮಕ್ಕಳನ್ನು ಮಾಡಿಕೊಳ್ಳುವಂತೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸಲಹೆ ನೀಡಿದ್ದಾರೆ.

ಮದುವೆ ಸಮಾರಂಭವೊಂದರಲ್ಲಿ ಭಾಗಿಯಾಗಿ ಮಾತನಾಡಿ, ‘ಮದುವೆಯಾಗುತ್ತಿದ್ದಂತೆಯೇ ಮಕ್ಕಳನ್ನು ಮಾಡಿಕೊಳ್ಳಬೇಡಿ ಎಂದು ಸಲಹೆ ನೀಡುವ ಕಾಲವೊಂದಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಕ್ಷೇತ್ರ ಪುನರ್ ವಿಂಗಡಣೆಯ ಸಂದರ್ಭದಲ್ಲಿ ಅತಿ ಹೆಚ್ಚು ಜನಸಂಖ್ಯೆಯೇ ಸಂಸದರ ಸಂಖ್ಯೆ ಹೆಚ್ಚಳಕ್ಕೆ ಮಾನದಂಡವಾಗಿದೆ’ ಎಂದು ವ್ಯಂಗ್ಯದ ಧಾಟಿಯಲ್ಲಿ ಹೇಳಿದರು.

ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿ ತಮಿಳುನಾಡು ಯಶಸ್ವಿಯಾಗಿದೆ. ಆದರೆ, ರಾಜ್ಯದ ಈಗಿನ ದುಃಸ್ಥಿತಿಗೆ ಜನಸಂಖ್ಯಾ ನಿಯಂತ್ರಣವೇ ಕಾರಣವಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಕಾರ್ಯಕರ್ತೆ ಹತ್ಯೆ



ಹಿಮಾನಿ

ಚಂಡೀಗಢ (ಪಿಟಿಐ): ಕಾಂಗ್ರೆಸ್ ಕಾರ್ಯಕರ್ತೆ ಹಿಮಾನಿ ನರವಾಲ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಕೆಯ ಸ್ನೇಹಿತನನ್ನು ಬಂಧಿಸಲಾಗಿದೆ ಎಂದು ಹರಿಯಾಣ ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಝಜ್ಜರ್‌ನ ನಿವಾಸಿ ಸಚಿನ್ ಬಂಧಿತ ಆರೋಪಿ. ಮೊಬೈಲ್ ಅಂಗಡಿ ನಡೆಸುತ್ತಿದ್ದ ಈತನನ್ನು ದೆಹಲಿಯಲ್ಲಿ ಬಂಧಿಸಲಾಗಿದೆ ಎಂದು ಹೆಚ್ಚುವರಿ ಡಿಜಿಪಿ ಕೆ.ಕೆ. ರಾವ್ ರೋಹ್ಟಕ್‌ನಲ್ಲಿ ಪತ್ರಕರ್ತರಿಗೆ ಮಾಹಿತಿ ನೀಡಿದರು.

ಸಚಿನ್ ಮತ್ತು ಹಿಮಾನಿಯ ನಡುವೆ ಜಗಳವಾಗಿತ್ತು. ನಂತರ ಆತ, ಆಕೆಯ ಕತ್ತು ಹಿಸುಕಿ ಕೊಲೆ ಮಾಡಿದ್ದ. ಮೃತದೇಹವನ್ನು ಸೂಟ್‌ಕೇಸ್‌ನೊಳಗೆ ತುಂಬಿ ಎಸೆದಿದ್ದ. ಶವವಿದ್ದ ಸೂಟ್‌ಕೇಸ್ ರೋಹ್ಟಕ್‌ನಲ್ಲಿ ಶನಿವಾರ ಪತ್ತೆಯಾಗಿತ್ತು. ಈ ಹತ್ಯೆಯ ತನಿಖೆಗಾಗಿ ಪೊಲೀಸರು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ್ದರು.

‘ನನ್ನ ಮಗಳ ಕೊಲೆ ಎಸಗಿದವನಿಗೆ ಮರಣದಂಡನೆ ವಿಧಿಸಬೇಕು’ ಎಂದು ಹಿಮಾನಿಯ ತಾಯಿ ಸವಿತಾ ಆಗ್ರಹಿಸಿದರು. ಭಾರತ್ ಜೋಡೋ ಯಾತ್ರೆಯಲ್ಲಿ ಹಿಮಾನಿ ಸಕ್ರಿಯವಾಗಿ ಭಾಗವಹಿಸಿದ್ದರು ಎಂದು ಕಾಂಗ್ರೆಸ್‌ನ ಕೆಲ ಸದಸ್ಯರು ತಿಳಿಸಿದ್ದಾರೆ.

ಎಪಿಕ್ ಸಂಖ್ಯೆ: ತಪ್ಪು ಒಪ್ಪಿಕೊಳ್ಳಲು ಆಯೋಗಕ್ಕೆ ಟಿಎಂಸಿ ಗಡುವು

ಪ್ರಜಾವಾಣಿ ವಾರ್ತೆ



ನವದೆಹಲಿ: ಹಲವು ಮತದಾರರ ಗುರುತಿನ ಚೀಟಿಗಳು ಒಂದೇ ಎಪಿಕ್ ಸಂಖ್ಯೆಯನ್ನು ಹೊಂದಿರುವುದರ ಬಗ್ಗೆ ಕೇಂದ್ರ ಚುನಾವಣಾ ಆಯೋಗ ನೀಡಿರುವ ವಿವರಣೆಯನ್ನು ಒಪ್ಪಲು ನಿರಾಕರಿಸಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ), ‘ಆಯೋಗವು ತಪ್ಪನ್ನು 24 ಗಂಟೆಗಳಲ್ಲಿ ಒಪ್ಪಿಕೊಳ್ಳಬೇಕು’ ಎಂದು ಹೇಳಿದೆ. ಮತದಾರರ ಪಟ್ಟಿಯನ್ನು ನೂರು ದಿನಗಳಲ್ಲಿ ಸರಿಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಆಯೋಗವು ತನ್ನ ತಪ್ಪನ್ನು ಒಪ್ಪಿಕೊಳ್ಳದೆ ಇದ್ದರೆ, ಆಯೋಗಕ್ಕೆ ಇನ್ನಷ್ಟು ಮುಜುಗರ ಉಂಟುಮಾಡುವ ದಾಖಲೆಗಳನ್ನು ಮಂಗಳವಾರ ಬಿಡುಗಡೆ ಮಾಡಲಾಗುವುದು ಎಂದು ಟಿಎಂಸಿ ಎಚ್ಚರಿಕೆ ನೀಡಿದೆ.

ತಪ್ಪುಗಳ ಹಿಂದೆ ಇರುವ ‘ಬಿಜೆಪಿಯ ಸೂತ್ರಧಾರ ಯಾರು’ ಎಂಬುದನ್ನು ಪತ್ತೆ ಮಾಡಲು ತನಿಖೆ ಆಗಬೇಕು ಎಂದು ಕೂಡ ಪಕ್ಷ ಒತ್ತಾಯ ಮಾಡಿದೆ.

ಬೇರೆ ಬೇರೆ ರಾಜ್ಯಗಳಲ್ಲಿ ಮತದಾರರ ಎಪಿಕ್ ಕಾರ್ಡ್‌ಗಳಲ್ಲಿನ ಸಂಖ್ಯೆ ಒಂದೇ ರೀತಿ ಇರುವುದನ್ನು ಚುನಾವಣಾ ಆಯೋಗವು ಭಾನುವಾರ ಒಪ್ಪಿಕೊಂಡಿದೆ.

ಪಕ್ಷದ ಸಂಸದರಾದ ಸಾಗರಿಕಾ ಘೋಷ್ ಮತ್ತು ಕೀರ್ತಿ ಆಜಾದ್ ಅವರ ಜೊತೆಗೂಡಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಂಸದ ಡೆರೆಕ್ ಒ’ಬ್ರಯಾನ್, ಒಂದೇ ಎಪಿಕ್ ಸಂಖ್ಯೆ ಇರುವ ಬೇರೆ ಬೇರೆ ಮತದಾರರ ಗುರುತಿನ ಚೀಟಿಗಳನ್ನು ಪ್ರದರ್ಶಿಸಿದರು. ಒಂದೇ ಎಪಿಕ್ ಸಂಖ್ಯೆಗಳು ಇರುವ 128 ಉದಾಹರಣೆಗಳನ್ನು ಅವರು ತೋರಿಸಿದರು. ಇನ್ನೊಂದು ಉದಾಹರಣೆಯಲ್ಲಿ ಮೂರು ಮತದಾರರ ಚೀಟಿಗಳ ಎಪಿಕ್ ಸಂಖ್ಯೆ ಒಂದೇ ಆಗಿತ್ತು. ಇಷ್ಟೂ ಮತದಾರರ ಚೀಟಿಗಳು ಪಶ್ಚಿಮ ಬಂಗಾಳ ಮತ್ತು ಹರಿಯಾಣಕ್ಕೆ ಸೇರಿದವು.

ಕೆಲವು ರಾಜ್ಯಗಳಲ್ಲಿ ಚುನಾವಣೆಗೆ ಮುನ್ನ ನಿರ್ಮಾಣ ಕಾಮಗಾರಿಗಳನ್ನು ಆರಂಭಿಸಲಾಗುತ್ತಿದೆ. ಅಲ್ಲಿ ಕೆಲಸ ಮಾಡುವವರ ವೇಷದಲ್ಲಿ ಹಲವು ಮತದಾರರನ್ನು ಕರೆತರಲಾಗುತ್ತಿದೆ ಎಂದು ಒಬ್ರಯಾನ್ ದೂರಿದರು.

‘ರೋಹಿತ್ ದಪ್ಪ’: ‘ಎಕ್ಸ್’ ಪೋಸ್ಟ್ ವಿವಾದ

ಒಂದನೇ ಪುಟದಿಂದ...

‘ಭಾರತ ಕಂಡ ಅತ್ಯಂತ ಪೇಲವವಾದ ನಾಯಕ ಅವರು’ ಎಂದು ಡಾ. ಶಮಾ ಮೊಹಮ್ಮದ್ ಅವರು ಹೇಳಿದ್ದರು. ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್‌ನಲ್ಲಿ ಭಾರತ ಹಾಗೂ ನ್ಯೂಜಿಲೆಂಡ್ ನಡುವಿನ ಪಂದ್ಯದಲ್ಲಿ ರೋಹಿತ್ ಶರ್ಮಾ ಅವರು 15 ರನ್ ಗಳಿಸಿ ಔಟಾದ ಬೆನ್ನಲ್ಲೇ, ಈ ಪೋಸ್ಟ್ ಮಾಡಿದ್ದರು.

ಅಂತರ ಕಾಯ್ದುಕೊಂಡ ಕಾಂಗ್ರೆಸ್: ಶಮಾ ಪೋಸ್ಟ್ ಬೆನ್ನಲ್ಲೇ ಸ್ಪಷ್ಟನೆ ನೀಡಿದ ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ, ‘ರೋಹಿತ್ ಶರ್ಮಾ ಕುರಿತು ಪಕ್ಷದ ರಾಷ್ಟ್ರೀಯ ವಕ್ತಾರೆ ಶಮಾ ಮೊಹಮ್ಮದ್ ಮಾಡಿದ ಪೋಸ್ಟ್ ಪಕ್ಷದ ನಿಲುವನ್ನು ಪ್ರತಿನಿಧಿಸುವುದಿಲ್ಲ. ಪೋಸ್ಟ್ ಅನ್ನು ತೆಗೆದುಹಾಕುವಂತೆ ತಿಳಿಸಿದ್ದು, ಇಂತಹ ತಪ್ಪನ್ನು ಮತ್ತೆ ಮಾಡದಂತೆ ತಿಳಿಸಲಾಗಿದೆ’ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಕಿಡಿ: ‘ರಾಹುಲ್ ಗಾಂಧಿ ಅವರ ನಾಯಕತ್ವದಲ್ಲಿ 90 ಚುನಾವಣೆ ಕಳೆದುಕೊಂಡವರು, ರೋಹಿತ್ ಶರ್ಮಾ ಅವರ ನಾಯಕತ್ವವನ್ನು ಪೇಲವ ಎಂದು ಹೇಳುತ್ತಿದ್ದಾರೆ’ ಎಂದು ಬಿಜೆಪಿ ನಾಯಕ ಶೆಹಜಾದ್ ಪೂನಾವಾಲಾ ‘ಎಕ್ಸ್’ನಲ್ಲೇ ತಿರುಗೇಟು ನೀಡಿದ್ದಾರೆ.

> ಅತ್ಯಂತ ಜವಾಬ್ದಾರಿಯುತ ವ್ಯಕ್ತಿಯೊಬ್ಬರು ಇಂತಹ ಕ್ಷುಲ್ಲಕ ಹೇಳಿಕೆ ನೀಡಿರುವುದು ದುರದೃಷ್ಟಕರ. ಇದರಿಂದ ಆಟಗಾರರು, ತಂಡವೇ ಎದೆಗುಂದುವ ಸಾಧ್ಯತೆಯಿದೆ
> **ದೇವಜೀತ್ ಸೈಕಿಯಾ,** ಬಿಸಿಸಿಐ ಕಾರ್ಯದರ್ಶಿ

> ಕಾಂಗ್ರೆಸ್ ಮತ್ತು ಟಿಎಂಸಿ ಅವರು ಕ್ರೀಡಾಪಟುಗಳ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಆಟಗಾರರಿಗೆ ತಮ್ಮ ವೃತ್ತಿಪರತೆ ನಿಭಾಯಿಸುವುದು ಗೊತ್ತು
> **ಮನ್ಸುಖ್ ಮಾಂಡವೀಯ,** ಕ್ರೀಡಾ ಸಚಿವ

ಶಮಾ ಬೆಂಬಲಿಸಿದ ರಾಯ್

‘ರೋಹಿತ್ ಶರ್ಮಾ ಅವರ ಪ್ರದರ್ಶನ ಅತ್ಯಂತ ಕಳಪೆಯಾಗಿದೆ ಎಂಬುದು ನಿಜ. ಅವರು ಒಂದು ಶತಕ ಬಾರಿಸಿದ್ದು ಬಿಟ್ಟರೆ, ಉಳಿದಂತೆ 2,3,4, ಅಥವಾ 5 ರನ್ ಗಳಿಸಿದ್ದಾರೆ. ಅವರು ತಂಡದಲ್ಲಿರಬಾರದು. ಬೇರೆ ಆಟಗಾರರು, ಚೆನ್ನಾಗಿ ಆಟವಾಡುತ್ತಿರುವ ಕಾರಣ ಭಾರತ ತಂಡ ಗೆಲ್ಲುತ್ತಿದೆ. ನಾಯಕನಾಗಿ ಅವರ ಕೊಡುಗೆ ಏನೂ ಇಲ್ಲ’ ಎಂದು ಪಶ್ಚಿಮ ಬಂಗಾಳದ ಡಂ–ಡಂ ಲೋಕಸಭಾ ಕ್ಷೇತ್ರದ ತೃಣಮೂಲ ಸಂಸದ ಸೌಗತ ರಾಯ್ ಹೇಳಿದ್ದಾರೆ.

‘ಫಿಟ್‌ನೆಸ್ ಬಗ್ಗೆ ಮಾಡಿದ ಸಾಮಾನ್ಯ ಟ್ವೀಟ್’





ರೋಹಿತ್ ಶರ್ಮಾ ಬಗ್ಗೆ ಮಾಡಿರುವ ಟ್ವೀಟ್ ಬಗ್ಗೆ ಟೀಕೆ ವ್ಯಕ್ತವಾಗುತ್ತಿರುವಂತೆಯೇ ಪ್ರತಿಕ್ರಿಯಿಸಿರುವ ಶಮಾ, ‘ಕ್ರೀಡಾಪಟುವಿನ ಫಿಟ್‌ನೆಸ್ ಬಗ್ಗೆ ನಾನು ಮಾಡಿರುವ ಸಾಮಾನ್ಯ ಟ್ವೀಟ್ ಅದಾಗಿತ್ತು. ಅವರನ್ನು ಅವಮಾನಿಸುವ ಉದ್ದೇಶ ಇರಲಿಲ್ಲ. ಒಬ್ಬ ಕ್ರೀಡಾಪಟು ಫಿಟ್ ಆಗಿರಬೇಕು ಎಂಬುದು ನನ್ನ ನಂಬಿಕೆ. ಅವರು (ರೋಹಿತ್) ಸ್ವಲ್ಪ ಹೆಚ್ಚು ತೂಕ ಹೊಂದಿದ್ದಾರೆ ಎಂಬ ಕಾರಣಕ್ಕೆ ಆ ಬಗ್ಗೆ ಟ್ವೀಟ್ ಮಾಡಿದ್ದೇನೆ. ವಿನಾಕಾರಣ ನನ್ನನ್ನು ಟೀಕಿಸಲಾಗಿದೆ. ಅವರನ್ನು ಹಿಂದಿನ ನಾಯಕರೊಂದಿಗೆ ಹೋಲಿಸಿದಾಗ, ನಾನು ಆ ಹೇಳಿಕೆ ನೀಡಿದ್ದೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನನಗೆ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕಿದೆ. ಆ ರೀತಿ ಹೇಳುವುದರಲ್ಲಿ ತಪ್ಪೇನು?’ ಎಂದಿದ್ದಾರೆ.

ಚುಟುಕು ಸುದ್ದಿ

ಬಿಎಸ್‌ಪಿಯಿಂದ ಆಕಾಶ್ ಆನಂದ್ ಉಚ್ಚಾಟನೆ



ಲಖನೌ (ಪಿಟಿಐ): ತಮ್ಮ ಸೋದರ ಸಂಬಂಧಿ ಆಕಾಶ್ ಆನಂದ್ ಅವರನ್ನು ಪಕ್ಷದ ಹಿತಾಸಕ್ತಿಯ ಕಾರಣದಿಂದ ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಸೋಮವಾರ ತಿಳಿಸಿದರು.

ಪಕ್ಷದ ಎಲ್ಲಾ ಹುದ್ದೆಗಳಿಂದ ಆಕಾಶ್ ಅವರನ್ನು ವಜಾಗೊಳಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ತೆಲಂಗಾಣ: 14 ನಕ್ಸಲರ ಶರಣಾಗತಿ

ಹೈದರಾಬಾದ್ (ಪಿಟಿಐ): ತೆಲಂಗಾಣದ ಭದ್ರಾದ್ರಿ ಕೊತ್ತಗೂಡೆಂ ಜಿಲ್ಲೆಯಲ್ಲಿ 14 ನಕ್ಸಲರು ಸೋಮವಾರ ಶರಣಾಗತರಾಗಿದ್ದಾರೆ.

ಶರಣಾಗತ ನಕ್ಸಲರಿಗೆ ರೂಪಿಸಲಾಗಿರುವ ಕಲ್ಯಾಣ ಕ್ರಮಗಳ ಬಗ್ಗೆ ತಿಳಿದ ನಂತರ, ಪೊಲೀಸ್ ವರಿಷ್ಠಾಧಿಕಾರಿ ಬಿ. ರೋಹಿತ್ ರಾಜು ಮುಂದೆ ಅವರು ಶರಣಾದರು ಎಂದು ಪ್ರಕಟಣೆ ತಿಳಿಸಿದೆ.

ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ರಹಾನೆ ಸಾರಥ್ಯ



ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಆಟಗಾರ ಅಜಿಂಕ್ಯ ರಹಾನೆ ಅವರು ಇಂಡಿಯನ್ ಪ್ರೀಮಿಯರ್ ಲೀಗ್‌ನ ಹಾಲಿ ಚಾಂಪಿಯನ್ ತಂಡ ವಾದ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕತ್ವ ವಹಿಸಲಿದ್ದಾರೆ ಎಂದು ಫ್ರಾಂಚೈಸಿ ಸೋಮವಾರ ಪ್ರಕಟಿಸಿದೆ.

ಕೋಲ್ಕತ್ತ ತಂಡವು, ಮಾರ್ಚ್ 22ರಂದು ನಡೆಯುವ ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ.

ದೀರ್ಘಕಾಲದಿಂದ ಕೆಕೆಆರ್ ತಂಡದಲ್ಲಿರುವ ವೆಂಕಟೇಶ್ ಅಯ್ಯರ್ ಅವರು ತಂಡದ ಉಪನಾಯಕರಾಗಿದ್ದಾರೆ.

ಪಾಕ್‌ಗೆ ಮತ್ತೊಂದು ಐಸಿಸಿ ಟೂರ್ನಿ ಆತಿಥ್ಯ

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಬೆನ್ನಲ್ಲೇ ಮತ್ತೊಂದು ಐಸಿಸಿ ಟೂರ್ನಿಯ ಆತಿಥ್ಯವನ್ನು ಪಾಕಿಸ್ತಾನ ಪಡೆದಿದೆ. ಈ ತಿಂಗಳ ಕೊನೆಯಲ್ಲಿ ಆರು ತಂಡಗಳ ಮಹಿಳಾ ಏಕದಿನ ವಿಶ್ವಕಪ್ ಕ್ವಾಲಿಫೈಯರ್ ಟೂರ್ನಿಯು ಪಾಕಿಸ್ತಾನದಲ್ಲಿ ನಡೆಯಲಿದೆ.

ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಅಧಿಕಾರಿಯೊಬ್ಬರು ಸೋಮವಾರ ಇದನ್ನು ಖಚಿತಪಡಿಸಿದ್ದಾರೆ. ಪಂದ್ಯಗಳ ದಿನಾಂಕ ಮತ್ತು ಸ್ಥಳಗಳನ್ನು ಅಂತಿಮಗೊಳಿಸುವ ಕುರಿತು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಜೊತೆ ಚರ್ಚೆ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

ಆತಿಥೇಯ ಪಾಕಿಸ್ತಾನ ಸೇರಿದಂತೆ ಸ್ಕಾಟ್ಲೆಂಡ್, ಐರ್ಲೆಂಡ್, ಶ್ರೀಲಂಕಾ, ಥಾಯ್ಲೆಂಡ್ ಮತ್ತು ವೆಸ್ಟ್ ಇಂಡೀಸ್ ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿವೆ. ಪಾಕ್‌ನಲ್ಲಿ ಇದೇ ಮೊದಲ ಬಾರಿಗೆ ಬಹು ತಂಡಗಳ ಮಹಿಳಾ ಐಸಿಸಿ ಟೂರ್ನಿ ನಡೆಯುತ್ತಿದೆ.

ಸಂಕ್ಷಿಪ್ತ ಸುದ್ದಿ

ಗಾಂಜಾ ಸೇವನೆ: ಐಐಟಿ ಬಾಬಾ ಬಂಧನ, ಬಿಡುಗಡೆ



ಐಐಟಿ ಬಾಬಾ

ಜೈಪುರ (ಪಿಟಿಐ): ಇಲ್ಲಿನ ಶಿಪ್ರಪಥದಲ್ಲಿರುವ ಹೋಟೆಲ್‌ನಲ್ಲಿ ಸಣ್ಣ ಪ್ರಮಾಣದ ಗಾಂಜಾ ಹೊಂದಿದ್ದ ಆರೋಪದ ಮೇಲೆ ಅಭಯ್ ಸಿಂಗ್ (ಐಐಟಿ ಬಾಬಾ) ಅವರನ್ನು ಬಂಧಿಸಲಾಗಿದೆ. ನಂತರ ಜಾಮೀನಿನ ಮೇಲೆ ಅವರನ್ನು ಬಿಡುಗಡೆಗೊಳಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಮಹಾಕುಂಭದ ಅವಧಿಯಲ್ಲಿ ಸಾಮಾಜಿಕ ಮಾಧ್ಯಮಗಳಿಂದಾಗಿ ‘ಐಐಟಿ ಬಾಬಾ’ ಜನಪ್ರಿಯರಾಗಿದ್ದರು. ಐಐಟಿ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿ, ನಂತರ ಸನ್ಯಾಸ ಸ್ವೀಕರಿಸಿದ್ದರಿಂದ ಸಾಕಷ್ಟು ಚರ್ಚೆಗೂ ಕಾರಣರಾಗಿದ್ದರು.

‘ಅಭಯ್ ಅವರು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ವಿಡಿಯೊ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದ ಕುರಿತು ಪೊಲೀಸರಿಗೆ ಮಾಹಿತಿ ಬಂದಿತ್ತು. ಸ್ಥಳಕ್ಕೆ ಭೇಟಿ ನೀಡಿ ಪೊಲೀಸರು ಪರಿಶೀಲನೆ ನಡೆಸಿದ ವೇಳೆ ಗಾಂಜಾ ಪತ್ತೆಯಾಗಿದೆ’ ಎಂದು ಶಿಪ್ರಪಥ ಪೊಲೀಸ್ ಠಾಣೆಯ ಠಾಣಾಧಿಕಾರಿ ರಾಜೇಂದ್ರ ಕುಮಾರ್ ಗೊದಾರಾ ಅವರು ತಿಳಿಸಿದರು. ಅಭಯ್ ಅವರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಯಿತು.

‘ರ‍್ಯಾಗಿಂಗ್: ಐವರು ವಜಾ’

ತಿರುವನಂತಪುರ (ಪಿಟಿಐ): ಕೋಟಯಂನ ಸರ್ಕಾರಿ ನರ್ಸಿಂಗ್ ಕಾಲೇಜಿನಲ್ಲಿ ಅಮಾನವೀಯವಾಗಿ ರ‍್ಯಾಗಿಂಗ್ ಮಾಡಿದ್ದ ಐವರು ವಿದ್ಯಾರ್ಥಿಗಳನ್ನು ಸಂಸ್ಥೆಯಿಂದ ವಜಾಗೊಳಿಸಲಾಗುವುದು ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಸೋಮವಾರ ತಿಳಿಸಿದ್ದಾರೆ.

ವಿಧಾನಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಈ ಘಟನೆಯ ಕುರಿತು ಮಾತನಾಡಿದ ಅವರು, ‘ಇದು ಕೇರಳ ಸಮಾಜದ ಆತ್ಮಸಾಕ್ಷಿಗೆ ಆಘಾತ ತಂದಿದೆ’ ಎಂದು ಹೇಳಿದರು. ‘ಐವರು ವಿದ್ಯಾರ್ಥಿಗಳು ಈಗಾಗಲೇ ಅಮಾನತುಗೊಂಡಿದ್ದಾರೆ ಮತ್ತು ಅವರನ್ನು ಕಾಲೇಜಿನಿಂದ ವಜಾಗೊಳಿಸಲು ಸೂಚಿಸಲಾಗಿದೆ. ಈ ಸಂಬಂಧ ಶೀಘ್ರದಲ್ಲೇ ಅಧಿಕೃತ ಆದೇಶ ಹೊರಡಿಸಲಾಗುವುದು’ ಎಂದರು.

ಎಎಪಿ ಶಾಸಕರಿಗೆ ಎಚ್ಚರಿಕೆ

ನವದೆಹಲಿ (ಪಿಟಿಐ): ಕಲಾಪದ ಫೋಟೊವನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದ ಎಎಪಿ ಶಾಸಕ ಜರನೈಲ್ ಸಿಂಗ್ ಅವರಿಗೆ, ದೆಹಲಿ ವಿಧಾನಸಭೆ ಸ್ಪೀಕರ್ ವಿಜೇಂದರ್ ಗುಪ್ತಾ ಅವರು ಹಕ್ಕುಚ್ಯುತಿ ಮಂಡಿಸುವ ಎಚ್ಚರಿಕೆ ನೀಡಿದರು. ಜಾಲತಾಣದಿಂದ ಫೋಟೊವನ್ನು ತೆಗೆದುಹಾಕುವಂತೆ ತಾಕೀತು ಮಾಡಿದರು.

ಕಲಾಪದ ಫೋಟೊ ಹಂಚಿಕೊಂಡಿದ್ದ ಶಾಸಕ ಜರನೈಲ್, ‘ವಿಧಾನಸಭೆಯಲ್ಲಿ ಇದೇ ಮೊದಲ ಬಾರಿಗೆ ಸಚಿವರ ಉಪಸ್ಥಿತಿ ಇಲ್ಲದೆ ಕಲಾಪ ನಡೆಯುತ್ತಿದೆ. ಸರ್ಕಾರದ ಪರ ಉತ್ತರಿಸುವವರು ಯಾರು?’ ಎಂದಿದ್ದರು.

ರಸ್ತೆಯಲ್ಲಿ ಹುಟ್ಟುಹಬ್ಬ ಆಚರಿಸಿದ ಮೇಯರ್ ಪುತ್ರ ಬಂಧನ

ರಾಯಪುರ (ಪಿಟಿಐ): ನಡುರಸ್ತೆಯಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡು ಸಂಚಾರಕ್ಕೆ ಅಡ್ಡಿಪಡಿಸಿದ ಆರೋಪದಡಿ, ಛತ್ತೀಸಗಢದ ರಾಯಪುರ ಜಿಲ್ಲೆಯ ನೂತನ ಮೇಯರ್ ಪುತ್ರ ಸೇರಿದಂತೆ ಇತರ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಡಿಡಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಮೇಯರ್ ನಿವಾಸದ ಮುಂದೆ ಶನಿವಾರ ಈ ಘಟನೆಯು ನಡೆದಿದೆ. ರಾಯಪುರ ಮೇಯರ್ ಮೀನಲ್ ಚೌಬೆ ಅವರ ಪುತ್ರ ಮೃಣಾಕ್ ಚೌಬೆ ಮತ್ತು ಅವರ ಸ್ನೇಹಿತರನ್ನು ಶನಿವಾರ ಬಂಧಿಸಲಾಗಿದೆ. ಬಳಿಕ ಅವರಿಗೆ ಜಾಮೀನು ದೊರೆತಿದೆ.

ಮಾಹೆ ವಿವಿಯೊಂದಿಗೆ ಟೆನ್‌ವಿಕ್ ಸ್ಪೋರ್ಟ್ಸ್ ಒಪ್ಪಂದ

ಕ್ರೀಡಾಪಟುವಿಗೆ ಶಿಕ್ಷಣವೂ ಮುಖ್ಯ: ಕುಂಬ್ಳೆ

ಪ್ರಜಾವಾಣಿ ವಾರ್ತೆ



ಕ್ರಿಕೆಟ್ ದಿಗ್ಗಜ ಅನಿಲ್ ಕುಂಬ್ಳೆ ಅವರನ್ನು ಮಾಹೆ ಕುಲಪತಿ ಡಾ.ವೆಂಕಟೇಶ್ ಗೌರವಿಸಿದರು

ಯಲಹಂಕ: ‘ಯಶಸ್ವಿ ಕ್ರೀಡಾಪಟುವಿನ ಬದುಕಿನಲ್ಲಿ ಶಿಕ್ಷಣವೂ ಬಹಳ ಮುಖ್ಯ. ಶಿಕ್ಷಣ ಮತ್ತು ಕ್ರೀಡೆ ಪರಸ್ಪರ ಸಮಾನಾಂತರವಾಗಿ ಸಾಗಬೇಕು’ ಎಂದು ಭಾರತದ ಕ್ರಿಕೆಟ್ ದಿಗ್ಗಜ ಅನಿಲ್ ಕುಂಬ್ಳೆ ಅಭಿಪ್ರಾಯಪಟ್ಟರು.

ಕ್ರೀಡಾ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆ ಇಟ್ಟಿರುವ ಮಣಿಪಾಲ ಉನ್ನತ ಶಿಕ್ಷಣ ಅಕಾಡೆಮಿ (ಮಾಹೆ) ಮತ್ತು ಟೆನ್‌ವಿಕ್ ಸ್ಪೋರ್ಟ್ಸ್ ಸಂಸ್ಥೆ ಮುಂದಿನ ಪೀಳಿಗೆಯ ಕ್ರೀಡಾ ವೃತ್ತಿಪರರನ್ನು ಬೆಳೆಸುವ ಉದ್ದೇಶದಿಂದ ಒಪ್ಪಂದ ವಿನಿಮಯ ಪತ್ರಕ್ಕೆ ಸೋಮವಾರ ಸಹಿ ಹಾಕಿದವು.

‘15 ವರ್ಷಗಳ ಹಿಂದೆ ಟೆನ್‌ವಿಕ್ ಸ್ಪೋರ್ಟ್ಸ್ ಸ್ಥಾಪನೆಯಾದಂದಿನಿಂದ ಶಿಕ್ಷಣ ಮತ್ತು ಕ್ರೀಡೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದು ನನ್ನ ಕನಸಾಗಿತ್ತು. ಮಾಹೆ ಜೊತೆಗಿನ ನಮ್ಮ ಒಪ್ಪಂದದಿಂದ ಆ ಕನಸು ಸಾಕಾರಗೊಳ್ಳುತ್ತಿದೆ’ಎಂದು ಟೆನ್‌ವಿಕ್‌ಸ್ಪೋರ್ಟ್ಸ್‌ನಸ್ಥಾಪಕರೂಆಗಿರುವ ಕುಂಬ್ಳೆ ಹೇಳಿದರು.


‘ಮಾಹೆ ಜೊತೆಗಿನ ನಮ್ಮ ಒಪ್ಪಂದವು ಕ್ರೀಡಾ ತರಬೇತಿ, ತಂತ್ರಜ್ಞಾನ, ವಿಜ್ಞಾನ ಮತ್ತು ನಿರ್ವಹಣೆ ವಿಭಾಗದಲ್ಲಿ ಭಾರತೀಯ ಪ್ರತಿಭೆಗಳನ್ನು ಬೆಳೆಸುವ ಕಾರ್ಯಕ್ಕೆ ಉತ್ತೇಜನ ನೀಡಲಿದೆ. ಈ ಮೂಲಕ ಜಾಗತಿಕ ಕ್ರೀಡಾಕ್ಷೇತ್ರದಲ್ಲಿ ಭಾರತವನ್ನು ಪ್ರಮುಖ ಶಕ್ತಿಯನ್ನಾಗಿ ರೂಪಿಸುವ ಗುರಿ ಹೊಂದಿದೆ’ ಎಂದು ಟೆನ್‌ವಿಕ್ ಸ್ಪೋರ್ಟ್ಸ್‌ನ ಸಹ ಸಂಸ್ಥಾಪಕ, ಮಾಜಿ ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಆಟಗಾರ ವಸಂತ ಭಾರದ್ವಾಜ್ ಹೇಳಿದರು.

‘ಮಣಿಪಾಲ ಉನ್ನತ ಶಿಕ್ಷಣ ಅಕಾಡೆಮಿವು ಸುಮಾರು ₹300 ಕೋಟಿಯ ಅತ್ಯಾಧುನಿಕ ಕ್ರೀಡಾಸೌಕರ್ಯಗಳನ್ನು ಒಳಗೊಂಡಿದೆ. ₹15 ಕೋಟಿ ವೆಚ್ಚದಲ್ಲಿ ನೂತನ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ’ ಎಂದು ಮಾಹೆ ಕುಲಪತಿ ಡಾ.ವೆಂಕಟೇಶ್ ತಿಳಿಸಿದರು.

ಮಣಿಪಾಲ ಉನ್ನತ ಶಿಕ್ಷಣ ಅಕಾಡೆಮಿಯ ಸಹ ಕುಲಪತಿ ಡಾ.ಮಧು ವೀರರಾಘವನ್, ಕುಲಸಚಿವ ಡಾ.ಪಿ.ಗಿರಿಧರ್ ಕಿಣಿ ಇದ್ದರು.

ಒಡಿಶಾದಲ್ಲಿ ಭುಗಿಲೆದ್ದ ವಿವಾದ, ಮಹಿಳೆ ವಿರುದ್ಧ ಪ್ರಕರಣ ದಾಖಲು

ತೊಡೆಯ ಮೇಲೆ ಜಗನ್ನಾಥನ ಟ್ಯಾಟೂ



ಭುವನೇಶ್ವರ (ಪಿಟಿಐ): ವಿದೇಶಿ ಮಹಿಳೆಯೊಬ್ಬರು ತಮ್ಮ ತೊಡೆಯ ಮೇಲೆ ಜಗನ್ನಾಥ ದೇವರ ಹಚ್ಚೆ ಹಾಕಿಸಿಕೊಂಡಿದ್ದು, ಒಡಿಶಾದಲ್ಲಿ ವಿವಾದಕ್ಕೆ ಕಾರಣವಾಗಿದೆ. ವಿದೇಶಿ ಮಹಿಳೆ ವಿರುದ್ಧ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಪ್ರಕರಣ ಸಂಬಂಧಿಸಿದಂತೆ ಹಚ್ಚೆ ಹಾಕಿದ ಕಲಾವಿದೆ ಅಶ್ವಿನಿ ಕುಮಾರ್ ಪ್ರಧಾನ್ ಮತ್ತು ಪಾರ್ಲರ್ ಮಾಲೀಕ ರಾಕಿ ರಂಜನ್ ಬಿಸೋಯ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಟ್ಯಾಟೂ ಹಾಕಿಸಿಕೊಂಡಿರುವ ಮಹಿಳೆಯ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮಹಿಳೆ ವಿರುದ್ಧ ಜಗನ್ನಾಥ ದೇವರ ಭಕ್ತರು ಪ್ರತಿಭಟನೆ ಆರಂಭಿಸಿದ್ದಾರೆ. ಶಹೀದ್ ನಗರ ಠಾಣೆಯಲ್ಲಿ ಭಾನುವಾರ ಕೆಲವರು ಮಹಿಳೆ ವಿರುದ್ಧ ದೂರು ದಾಖಲಿಸಿದ್ದಾರೆ. ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 299 (ಧಾರ್ಮಿಕ ಭಾವನೆಗೆ ಧಕ್ಕೆ ತರುವ ಯತ್ನ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದರು.

ಕ್ಷಮೆಯಾಚನೆ: ವಿವಾದದ ಬೆನ್ನಲ್ಲೇ ವಿದೇಶಿ ಮಹಿಳೆ ಮತ್ತು ಹಚ್ಚೆ ಹಾಕಿದ ಪಾರ್ಲರ್‌ನ ಮಾಲೀಕ ರಾಕಿ ರಂಜನ್ ಅವರು ಜಾಲತಾಣದಲ್ಲಿ ವಿಡಿಯೊ ಮೂಲಕ ಕ್ಷಮೆಯಾಚಿಸಿದ್ದಾರೆ.

ಕೈಮುಗಿದು ಕ್ಷಮೆಯಾಚಿಸಿರುವ ವಿದೇಶಿ ಮಹಿಳೆ, ‘ಜಗನ್ನಾಥ ದೇವರಿಗೆ ಅಗೌರವ ತೋರುವುದು ನನ್ನ ಉದ್ದೇಶವಾಗಿರಲಿಲ್ಲ. ನಾನೂ ಜಗನ್ನಾಥನ ಭಕ್ತೆ. ಪ್ರತಿದಿನವೂ ದೇಗುಲಕ್ಕೆ ಹೋಗುತ್ತೇನೆ. ನನ್ನಿಂದ ತಪ್ಪಾಗಿದೆ, ಕ್ಷಮಿಸಿ. ಶೀಘ್ರವೇ ಇದನ್ನು ಅಳಿಸಿಹಾಕುತ್ತೇನೆ’ ಎಂದು ಹೇಳಿದ್ದಾರೆ.

ರಾಕಿ ರಂಜನ್ ಅವರು, ‘ತೊಡೆಯ ಬದಲಾಗಿ ಕೈ ಮೇಲೆ ಜಗನ್ನಾಥ ದೇವರ ಹಚ್ಚೆ ಹಾಕಿಸಿಕೊಳ್ಳುವಂತೆ ಸಿಬ್ಬಂದಿ ಸಲಹೆ ನೀಡಿದ್ದರು. ಆದರೆ ವಿದೇಶಿ ಮಹಿಳೆ ಅದನ್ನು ಕೇಳದೆ ತೊಡೆ ಮೇಲೆಯೇ ಟ್ಯಾಟೂ ಹಾಕಿಸಿಕೊಂಡರು. ಈ ಸಂದರ್ಭದಲ್ಲಿ ನಾನು ಪಾರ್ಲರ್‌ನಲ್ಲಿ ಇರಲಿಲ್ಲ. ಈ ತಪ್ಪಿಗೆ ಕ್ಷಮೆಯಾಚಿಸುತ್ತೇನೆ’ ಎಂದು ಹೇಳಿದ್ದಾರೆ.

ಮಗುವಿಗೆ 40 ಸಲ ಬರೆ

ಭುವನೇಶ್ವರ (ಪಿಟಿಐ): ಒಂದು ತಿಂಗಳ ಗಂಡುಮಗುವಿನ ಕಾಯಿಲೆ ಗುಣವಾಗುತ್ತದೆ ಎಂಬ ಮೌಢ್ಯದಲ್ಲಿ ಕಾದ ಕಬ್ಬಿಣದಿಂದ 40 ಸಲ ಬರೆ ಎಳೆದ ಘಟನೆ ಒಡಿಶಾದ ನವರಂಗಪುರ ಜಿಲ್ಲೆಯಲ್ಲಿ ನಡೆದಿದೆ. ಇದಾದ ಬಳಿಕ ಮಗುವನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಜಿಲ್ಲೆಯ ಚಂದಹಂಡಿ ಬ್ಲಾಕ್‌ನ ಗಂಬರಿಗುಡಾ ಪಂಚಾಯಿತಿಯ ಫುಂಡೆಲ್‌ಪಾಢ ಗ್ರಾಮದಲ್ಲಿ ಈ ಘಟನೆ ನಡೆದಿದೆ.

‘ಕಾಯಿಲೆ ಉಲ್ಬಣಿಸಿದ್ದರಿಂದ, ಮಗುವನ್ನು ತಕ್ಷಣವೇ ಉಮರ್‌ಕೋಟ್ ವಿಭಾಗೀಯ ಆಸ್ಪತ್ರೆಗೆ ದಾಖಲಿಸಲಾಯಿತು. ಆಸ್ಪತ್ರೆಗೆ ಭೇಟಿ ನೀಡಿ, ಮಗುವಿನ ಆರೋಗ್ಯ ಸ್ಥಿತಿ ಪರಿಶೀಲಿಸಿದ್ದು, ಸ್ಥಿರವಾಗಿದೆ. ಮಗುವಿನ ಹೊಟ್ಟೆ ಹಾಗೂ ಹಣೆಯ ಮೇಲೆ ಬರೆ ಹಾಕಲಾಗಿದೆ’ ಎಂದು ನವರಂಗಪುರದ ಮುಖ್ಯ ವೈದ್ಯಾಧಿಕಾರಿ ಡಾ. ಸಂತೋಷ್ ಕುಮಾರ್ ಪಾಂಡಾ ತಿಳಿಸಿದರು.

‘ರಾಜ್ಯದ ಹಲವು ಗ್ರಾಮಗಳಲ್ಲಿ ಇಂತಹ ಬರೆ ಹಾಕುವ ಪದ್ಧತಿ ಇದ್ದು, ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸಲಾಗುವುದು’ ಎಂದು ಸಂತೋಷ್ ಹೇಳಿದರು.



ಕೆಎಸ್‌ಸಿಎ 14 ವರ್ಷದೊಳಗಿನ ಶಾಲಾ ಪ್ರಥಮ ಡಿವಿಷನ್ ಕ್ರಿಕೆಟ್ ಟೂರ್ನಿಯಲ್ಲಿ ಬಿ.ಟಿ.ರಾಮಯ್ಯ ಶೀಲ್ಡ್ ಪ್ರಶಸ್ತಿ ಗೆದ್ದ ಮ್ಯಾಕ್ಸ್ ಮುಲ್ಲರ್ ಹೈಸ್ಕೂಲ್ ತಂಡ. ನಿಂತವರು (ಎಡದಿಂದ); ನರಸಿಂಹ ರೆಡ್ಡಿ, ಅರ್ಣವ್ ರವೀಂದ್ರ (ಉಪ ನಾಯಕ), ಗೌತಮ್, ವಿನೀತ್ ಪಾಟೀಲ, ಸ್ಕಂದ ಸುಬ್ಬಯ್ಯ, ನಿತೀಶ್ ಆರ್ಯ (ನಾಯಕ), ಮಧ್ಯದಲ್ಲಿ ಕುಳಿತವರು: ಗೀತಾ ಬಿ.ಆರ್ (ಮುಖ್ಯಶಿಕ್ಷಕಿ), ಮಣಿ ಮೇಘಲೈ (ನಿರ್ದೇಶಕ), ಸುರೇಶ್ ಕುಮಾರ್ ಜಿ. (ಪ್ರಾಂಶುಪಾಲ), ಲಕ್ಷ್ಮೀಕಾಂತ್ ವಿ. (ಕೋಚ್), ಕುಳಿತವರು; ಸೌಮಿತ್ ಕೊಂಗರ, ಜೀವನ್ ಕೃಷ್ಣ, ನೀರಜ್ ಎಂ, ಅಹಾನ್, ಸುಯೋಗ್ ಗೌಡ, ಧಾತ್ವಿಕ್, ಶ್ರೀಜೇಶ್

ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9

(ಪಾಕಿಸ್ತಾನ–ದುಬೈ)

ರೋಹಿತ್ ಶರ್ಮಾ ಪಡೆಗೆ, ಸ್ಟೀವ್ ಸ್ಮಿತ್ ಬಳಗದ ಪೈಪೋಟಿ • ಸೆಮಿಫೈನಲ್ ಹಣಾಹಣಿ ಇಂದು

ನಾಕೌಟ್ ಸವಾಲು ಮೀರುವುದೇ ಭಾರತ?



ಭಾರತ ತಂಡದ ವರುಣ್ ಚಕ್ರವರ್ತಿ ಪಿಟಿಐ ಚಿತ್ರ

ದುಬೈ (ಪಿಟಿಐ): ಐಸಿಸಿ ಟ್ರೋಫಿ ಕ್ರಿಕೆಟ್ ಟೂರ್ನಿಗಳ ಇತಿಹಾಸದ ಪುಟಗಳನ್ನು ತಿರುವಿದಾಗ ಭಾರತ ತಂಡವು ಆಸ್ಟ್ರೇಲಿಯಾ ಎದುರು ನಾಕೌಟ್ ಹಂತದಲ್ಲಿ ಎಡವಿದ್ದು ಹೆಚ್ಚು. ಇದೀಗ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಭಾರತ ತಂಡವು ತನ್ನ ಸ್ಪಿನ್ ಬೌಲರ್‌ಗಳ ಬಲವನ್ನು ನೆಚ್ಚಿಕೊಂಡಿದ್ದು, ಬಲಾಢ್ಯ ಆಸ್ಟ್ರೇಲಿಯಾವನ್ನು ಮಣಿಸುವ ಉತ್ಸಾಹದಲ್ಲಿದೆ. ಆಸ್ಟ್ರೇಲಿಯಾ ತಂಡಕ್ಕೆ ಪ್ರಮುಖ ವೇಗಿಗಳಾದ ಪ್ಯಾಟ್ ಕಮಿನ್ಸ್, ಜೋಶ್ ಹ್ಯಾಜಲ್‌ವುಡ್ ಮತ್ತು ಮಿಚೆಲ್ ಸ್ಟಾರ್ಕ್ ಅವರು ಲಭ್ಯವಿಲ್ಲ. ಗಾಯಗೊಂಡಿರುವ ಅವರು ಕಣಕ್ಕಿಳಿದಿಲ್ಲ. ಆದರೂ ಆಸ್ಟ್ರೇಲಿಯಾವು ಈ ಸವಾಲನ್ನು ಮೀರಿ ನಿಂತಿದೆ. ಗುಂಪು ಹಂತದ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 352 ರನ್‌ಗಳ ಕಠಿಣ ಗುರಿಯನ್ನು ಮುಟ್ಟುವಲ್ಲಿ ಯಶಸ್ವಿಯಾಗಿತ್ತು.

ಭಾರತ ತಂಡವು ಐಸಿಸಿ ಟ್ರೋಫಿ ಟೂರ್ನಿಯ ನಾಕೌಟ್ ಹಂತದಲ್ಲಿ ಆಸ್ಟ್ರೇಲಿಯಾ ತಂಡವನ್ನು 2011ರ ವಿಶ್ವಕಪ್ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲಿಸಿತ್ತು. 2015ರ ಏಕದಿನ ವಿಶ್ವಕಪ್ ಸೆಮಿಫೈನಲ್, 2023ರ ಏಕದಿನ ವಿಶ್ವಕಪ್ ಫೈನಲ್ ಹಾಗೂ ಅದೇ ವರ್ಷ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಭಾರತ ಪರಾಭವಗೊಂಡಿತ್ತು.

14 ವರ್ಷಗಳ ನಂತರ ಆಸ್ಟ್ರೇಲಿಯಾ ಎದುರು ಜಯಿಸಿ ಫೈನಲ್‌ಗೆ ಮುನ್ನಡೆಯುವ ಛಲದಲ್ಲಿ ರೋಹಿತ್ ಶರ್ಮಾ ಬಳಗವಿದೆ. ನುರಿತ ಸ್ಪಿನ್ನರ್‌ಗಳು ಇರುವ ಭಾರತ ತಂಡವು ಮೇಲ್ನೋಟಕ್ಕೆ ಆಸ್ಟ್ರೇಲಿಯಾಕ್ಕೆ ಕಠಿಣ ಪೈಪೋಟಿಯೊಡ್ಡುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು.

ಮುಖ್ಯಾಂಶಗಳು

- ವಿರಾಟ್ ಕೊಹ್ಲಿಗೆ ಇದು 301ನೇ ಏಕದಿನ ಪಂದ್ಯ
- ಕಳೆದ ಪಂದ್ಯದಲ್ಲಿ ವರುಣ್ ಚಕ್ರವರ್ತಿ ಐದು ವಿಕೆಟ್ ಗೊಂಚಲು ಗಳಿಸಿದ್ದರು
- ಮುಯ್ಯಿ ತೀರಿಸಿಕೊಳ್ಳುವುದೇ ಭಾರತ?

ಗಫಾನಿ, ಇಲಿಂಗ್‌ವರ್ಥ್ ಅಂಪೈರಿಂಗ್

ನ್ಯೂಜಿಲೆಂಡ್‌ನ ಕ್ರಿಸ್ ಗಫಾನಿ ಮತ್ತು ಇಂಗ್ಲೆಂಡ್‌ನ ರಿಚರ್ಡ್ ಇಲಿಂಗ್‌ವರ್ಥ್ ಅವರು ಮಂಗಳವಾರದ ಸೆಮಿಫೈನಲ್ ಪಂದ್ಯಕ್ಕೆ ಆನ್‌ಫೀಲ್ಡ್ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸುವರು. ಇಂಗ್ಲೆಂಡ್‌ನ ಮೈಕೆಲ್ ಗಾಫ್ ಮೂರನೇ ಅಂಪೈರ್ ಮತ್ತು ಜಿಂಬಾಬ್ವೆಯ ಆ್ಯಂಡಿ ಪೈಕ್ರಾಫ್ಟ್ ಅವರು ಪಂದ್ಯ ರೆಫರಿಯಾಗಿ ಕಾರ್ಯನಿರ್ವಹಿಸುವರು ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಚಾಂಪಿಯನ್ಸ್ ಟ್ರೋಫಿ ಟೂರ್ನಿ ಆರಂಭಕ್ಕೂ ಮುನ್ನ ಭಾರತ ತಂಡವು ಪ್ರಕಟಗೊಂಡಾಗ ಐವರು ಸ್ಪಿನ್ನರ್‌ಗಳಿಗೆ ಸ್ಥಾನ ಕೊಟ್ಟ ಬಗ್ಗೆ ಬಹಳಷ್ಟು ಚರ್ಚೆಗಳು ನಡೆದಿದ್ದವು. ಆದರೆ ಈಗ ಆ ನಿರ್ಧಾರವು ಸೂಕ್ತ ಎನಿಸಲು ಶುರುವಾಗಿದೆ. ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ವರುಣ ಚಕ್ರವರ್ತಿ, ಕುಲದೀಪ್ ಯಾದವ್, ರವೀಂದ್ರ ಜಡೇಜ ಮತ್ತು ಅಕ್ಷರ್ ಪಟೇಲ್ ಸೇರಿ 9 ವಿಕೆಟ್‌ಗಳನ್ನು ಹಂಚಿಕೊಂಡಿದ್ದರು. ಇನಿಂಗ್ಸ್‌ನಲ್ಲಿ ಬೌಲಿಂಗ್ ಮಾಡಲಾದ 39 ಓವರ್‌ಗಳಲ್ಲಿ 128 ಡಾಟ್ ಬಾಲ್‌ಗಳನ್ನು ಬೌಲರ್‌ಗಳು ಪ್ರಯೋಗಿಸಿದ್ದರು.

ಶತಕದತ್ತ ಸಾಗಿದ್ದ ಕೇನ್ ವಿಲಿಯಮ್ಸನ್ ಅವರು ಮುನ್ನುಗ್ಗಿ ಆಡುವ ಪ್ರಲೋಭನೆಗೆ ಒಳಗಾಗುವಂತೆ ಅಕ್ಷರ್ ಪಟೇಲ್ ಎಸೆತ ಹಾಕಿದ್ದರು. ಕೆ.ಎಲ್. ರಾಹುಲ್ ಚುರುಕಾಗಿ ಸ್ಟಂಪಿಂಗ್ ಮಾಡಿದರು.

ಆದರೆ ಆಸ್ಟ್ರೇಲಿಯಾ ಬೌಲರ್‌ಗಳು ಇಂಗ್ಲೆಂಡ್ (351ರನ್) ಮತ್ತು ಅಫ್ಗಾನಿಸ್ತಾನ (273 ರನ್) ಎದುರು ಹೆಚ್ಚು ರನ್ ಬಿಟ್ಟುಕೊಟ್ಟಿದ್ದರು. ರೋಹಿತ್ ಶರ್ಮಾ, ಶುಭಮನ್ ಗಿಲ್, ಶ್ರೇಯಸ್ ಅಯ್ಯರ್ ಮತ್ತು ವಿರಾಟ್ ಕೊಹ್ಲಿ ಅವರು ಆಸ್ಟ್ರೇಲಿಯಾ ಬೌಲರ್‌ಗಳನ್ನು ದಂಡಿಸಲು ಸಿದ್ಧರಾಗಿದ್ದಾರೆ.



ಆಸ್ಟ್ರೇಲಿಯಾ ತಂಡದ ನಾಯಕ ಸ್ಟೀವ್ ಸ್ಮಿತ್ —ಪಿಟಿಐ ಚಿತ್ರ

ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್, ನಾಯಕ ಸ್ಟೀವ್ ಸ್ಮಿತ್, ಜೋಷ್ ಇಂಗ್ಲಿಸ್ ಅವರು ಉತ್ತಮ ಲಯದಲ್ಲಿದ್ದಾರೆ. ಅವರನ್ನು ನಿಯಂತ್ರಿಸಲು ಭಾರತದ ಬೌಲರ್‌ಗಳು ಉತ್ತಮ ಯೋಜನೆಯೊಂದಿಗೆ ಕಣಕ್ಕಿಳಿದರೆ ಎರಡು ವರ್ಷಗಳ ಹಿಂದಿನ ಏಕದಿನ ವಿಶ್ವಕಪ್ ಫೈನಲ್ ಸೋಲಿನ ಮುಯ್ಯಿ ತೀರಿಸಿಕೊಳ್ಳಬಹುದು.

ಪಂದ್ಯ ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್



ಭಾರತ ತಂಡದ ನಾಯಕ ರೋಹಿತ್ ಶರ್ಮಾ

ಲಾರಿಯಸ್ ಪ್ರಶಸ್ತಿಗೆ ಪಂತ್ ನಾಮನಿರ್ದೇಶನ



ರಿಷಭ್ ಪಂತ್

ನವದೆಹಲಿ (ಪಿಟಿಐ): ರಸ್ತೆ ಅಪಘಾತದಿಂದ ಗಂಭೀರ ಗಾಯಗೊಂಡು ಕ್ರಿಕೆಟ್‌ಗೆ ಪುನರಾಗಮನ ಮಾಡಿದ ಭಾರತ ಕ್ರಿಕೆಟ್ ತಂಡದ ಬ್ಯಾಟರ್- ವಿಕೆಟ್ ಕೀಪರ್ ರಿಷಭ್ ಪಂತ್ ಅವರನ್ನು ವರ್ಷದ 'ಕಮ್‌ಬ್ಯಾಕ್' (ಪುನರಾಗಮನ) ವಿಭಾಗದಲ್ಲಿ ಪ್ರತಿಷ್ಠಿತ 'ಲಾರಿಯಸ್ ವರ್ಲ್ಡ್ ಸ್ಪೋರ್ಟ್ಸ್ ಪ್ರಶಸ್ತಿ 2025'ಕ್ಕೆ ನಾಮನಿರ್ದೇಶನ ಮಾಡಲಾಗಿದೆ.

27 ವರ್ಷ ವಯಸ್ಸಿನ ಪಂತ್ 2022ರ ಡಿಸೆಂಬರ್ 30ರಂದು ದೆಹಲಿಯಿಂದ ತಮ್ಮ ತವರು ರೂರ್ಕಿಗೆ ತೆರಳುವಾಗ ಭೀಕರ ಕಾರು ಅಪಘಾತಕ್ಕೆ ಒಳಗಾಗಿದ್ದರು. ಡೆಹ್ರಾಡೂನ್‌ನ ಆಸ್ಪತ್ರೆಯಲ್ಲಿ ಆರಂಭಿಕ ಚಿಕಿತ್ಸೆ ಪಡೆದ ನಂತರ, ಪಂತ್ ಅವರನ್ನು ಮುಂಬೈಗೆ ಏರ್ ಲಿಫ್ಟ್ ಮಾಡಲಾಗಿತ್ತು. ಅಲ್ಲಿ ಅವರು ಬಿಸಿಸಿಐನ ತಜ್ಞ ಸಲಹೆಗಾರರ ಆರೈಕೆ ಪಡೆದಿದ್ದರು. ನಂತರ ಬಲ ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಿ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಚೇತರಿಸಿಕೊಂಡಿದ್ದರು.

ಕಳೆದ ವರ್ಷ ಮುಲ್ಲನ್‌ಪುರದಲ್ಲಿ ನಡೆದ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ತಮ್ಮ ಹಿಂದಿನ ಐಪಿಎಲ್ ಫ್ರಾಂಚೈಸಿ ಡೆಲ್ಲಿ ಕ್ಯಾಪಿಟಲ್ಸ್ ಪರ ಆಟಕ್ಕೆ ಮರಳಿದ್ದರು. ನಂತರ ಟೆಸ್ಟ್ ಕ್ರಿಕೆಟ್‌ಗೂ ಪುನರಾಗಮನ ಮಾಡಿದ್ದ ಅವರು, ಬಾಂಗ್ಲಾದೇಶ ವಿರುದ್ಧ ಅಮೋಘ ಶತಕ ಸಿಡಿಸಿದ್ದರು. ಈ ಪಂದ್ಯವನ್ನು ಭಾರತ 280 ರನ್‌ಗಳಿಂದ ಗೆದ್ದಿತ್ತು.

ಲಾರಿಯಸ್ ವರ್ಲ್ಡ್ ಸ್ಪೋರ್ಟ್ಸ್ ಪ್ರಶಸ್ತಿ ಪ್ರದಾನ ಸಮಾರಂಭ ಏಪ್ರಿಲ್ 21ರಂದು ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ನಡೆಯಲಿದೆ.

ಗುಜರಾತ್ ಜೈಂಟ್ಸ್‌ಗೆ ಮಣಿದ ಯುಪಿ ವಾರಿಯರ್ಸ್

ಮೂನಿ ಆಟಕ್ಕೆ ಒಲಿದ ಜಯ

ಲಖನೌ (ಪಿಟಿಐ): ಬೆತ್ ಮೂನಿ ಅವರ ಅಬ್ಬರದ ಬ್ಯಾಟಿಂಗ್ ಬಳಿಕ ಬೌಲರ್‌ಗಳ ಪರಿಣಾಮಕಾರಿ ದಾಳಿಯ ನೆರವಿನಿಂದ ಗುಜರಾತ್ ಜೈಂಟ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ 81 ರನ್‌ಗಳಿಂದ ಯು.ಪಿ. ವಾರಿಯರ್ಸ್ ತಂಡವನ್ನು ಮಣಿಸಿತು.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಸೋಮವಾರ ಆರಂಭಗೊಂಡ ಲೆಗ್‌ನ ಆರಂಭಿಕ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್‌ತಂಡವು ಮೂನಿ (ಔಟಾಗದೇ 96;59ಎ, 4x17) ಅಬ್ಬರದ ಆಟದ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 186 ರನ್ ಗಳಿಸಿತು. ಈ ಕಠಿಣ ಗುರಿಯನ್ನು ಬೆನ್ನಟ್ಟಿದ ವಾರಿಯರ್ಸ್ 17.1 ಓವರ್‌ಗಳಲ್ಲಿ 105 ರನ್‌ಗಳಿಸಿ ಹೋರಾಟ ಮುಗಿಸಿತು.

ಜೈಂಟ್ಸ್‌ನ ವೇಗಿ ದಿಯಾಂದ್ರ ಡಾಟಿನ್ ಮೊದಲ ಓವರ್‌ನಲ್ಲೇ ವಾರಿಯರ್ಸ್‌ಗೆ ಪೆಟ್ಟು ನೀಡಿದರು. ಕಿರಣ್ ನವಗಿರೆ (0) ಮತ್ತು ಜಾರ್ಜಿಯಾ ವೋಲ್ (0) ಅವರಿಗೆ ಖಾತೆ ತೆರೆಯಲು ಅವಕಾಶ ನೀಡಲಿಲ್ಲ. ನಂತರವೂ ನಿಯಮಿತವಾಗಿ ವಿಕೆಟ್ ಉರುಳಿದವು. ಆರಂಭಿಕ ಆಟಗಾರ್ತಿ ಗ್ರೇಸ್ ಹ್ಯಾರಿಸ್ (25;30ಎ) ಮತ್ತು ಷಿನೆಲ್ ಹೆನ್ರಿ (28;14ಎ) ಹೊರತುಪಡಿಸಿ ಉಳಿದವರು ಬೇಗನೆ ನಿರ್ಗಮಿಸಿದರು. ವೇಗಿ ಕಶ್ವಿ ಗೌತಮ್ ಮತ್ತು ಸ್ಪಿನ್ನರ್ ತನುಜಾ ಕನ್ವರ್ ತಲಾ 3 ವಿಕೆಟ್ ಪಡೆದು ಮಿಂಚಿದರು.



ಜೈಂಟ್ಸ್ ತಂಡದ ಬೆತ್ ಮೂನಿ ಅವರ ಬ್ಯಾಟಿಂಗ್ ಪಿಟಿಐ ಚಿತ್ರ

ಮಹಿಳಾ ಪ್ರೀಮಿಯರ್ ಲೀಗ್

ಮೂನಿ ಅಬ್ಬರ: ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲ ಓವರ್‌ನಲ್ಲಿಯೇ ಷಿನೆಲ್ ಹೆನ್ರಿ ಅವರ ಎಸೆತದಲ್ಲಿ ಹೇಮಲತಾ ದಯಾಳನ್ (2) ಅವರು ಔಟಾದರು. ಆದರೆ, ಆಸ್ಟ್ರೇಲಿಯಾದ ಎಡಗೈ ಬ್ಯಾಟರ್ ಮೂನಿ ಮತ್ತು ಹರ್ಲೀನ್ ಡಿಯೊಲ್ (45; 32ಎಸೆತ) ಎರಡನೇ ವಿಕೆಟ್ ಜೊತೆಯಾಟದಲ್ಲಿ 101 ರನ್ ಸೇರಿಸಿದರು. ಮೂನಿ ಅವರ 96 ರನ್, ಈ ಬಾರಿಯ ಲೀಗ್‌ನಲ್ಲಿ ಆಟಗಾರ್ತಿಯೊಬ್ಬರ ಗರಿಷ್ಠ ವೈಯಕ್ತಿಕ ಮೊತ್ತವಾಗಿದೆ.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್ : 20 ಓವರ್‌ಗಳಲ್ಲಿ 5ಕ್ಕೆ186 (ಬೆತ್ ಮೂನಿ ಔಟಾಗದೇ 96, ಹರ್ಲೀನ್ ಡಿಯೊಲ್ 45, ಸೋಫಿ ಎಕ್ಲೆಸ್ಟೋನ್ 34ಕ್ಕೆ2.
ಯು.ಪಿ ವಾರಿಯರ್ಸ್: 17.1 ಓವರ್‌ಗಳಲ್ಲಿ 105 (ಗ್ರೇಸ್ ಹ್ಯಾರಿಸ್ 25, ಷಿನೆಲ್ ಹೆನ್ರಿ 28; ಕಶ್ವಿ ಗೌತಮ್ 11ಕ್ಕೆ 3, ತನುಜಾ ಕನ್ವರ್ 17ಕ್ಕೆ 3, ದಿಯಾಂದ್ರ ಡಾಟಿನ್ 14ಕ್ಕೆ 2). **ಪಂದ್ಯದ ಆಟಗಾರ್ತಿ:** ಬೆತ್ ಮೂನಿ

ದೇಶಿ ಕ್ರಿಕೆಟ್‌ನ ಸ್ಪಿನ್ ಮೋಡಿಗಾರ ಶಿವಲ್ಕರ್ ಇನ್ನಿಲ್ಲ



ಮುಂಬೈ (ಪಿಟಿಐ): ದೇಶಿ ಕ್ರಿಕೆಟ್‌ನಲ್ಲಿ ಅಮೋಘ ಸಾಧನೆ ಮಾಡಿಯೂ ಭಾರತ ತಂಡದಲ್ಲಿ ಆಡುವ ಅವಕಾಶ ಸಿಗದ ಸ್ಪಿನ್ ದಂತಕಥೆ ಪದ್ಮಾಕರ್ ಶಿವಲ್ಕರ್ (84) ನಿಧನರಾದರು. ವಯೋಸಹಜವಾದ ಸಮಸ್ಯೆಗಳಿಂದ ಅವರು ಬಳಲುತ್ತಿದ್ದರು.

ಮುಂಬೈನ ಪದ್ಮಾಕರ್ 124 ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯಗಳನ್ನು ಆಡಿದ್ದರು. ಅದರಲ್ಲಿ 19.69ರ ಸರಾಸರಿಯಲ್ಲಿ 589 ವಿಕೆಟ್‌ಗಳನ್ನು ಗಳಿಸಿದ್ದರು. 1961–62 ರಿಂದ 1987–8ರ ಅವಧಿಯಲ್ಲಿ ಅವರು ಆಡಿದ್ದರು. ಎಡಗೈ ಸ್ಪಿನ್ನರ್ ಆಗಿದ್ದ ಪದ್ಮಾಕರ್ ತಮ್ಮ 22ನೇ ವಯಸ್ಸಿನಲ್ಲಿಯೇ ರಣಜಿ ಟ್ರೋಫಿ ಟೂರ್ನಿಯಲ್ಲಿ ಪದಾರ್ಪಣೆ ಮಾಡಿದ್ದರು. ಅಲ್ಲಿಂದ 48 ವರ್ಷ ವಯಸ್ಸಿನವರೆಗೂ ಅವರು ಆಡಿದರು.

ರಣಜಿ ಟ್ರೋಫಿ ಕ್ರಿಕೆಟ್‌ನಲ್ಲಿ ಅವರು 361 ವಿಕೆಟ್‌ಗಳನ್ನು ಗಳಿಸಿದರು. ಅದರಲ್ಲಿ 11 ಬಾರಿ ಒಟ್ಟು ಹತ್ತು ವಿಕೆಟ್‌ಗಳ ಗೊಂಚಲು ಗಳಿಸಿದ್ದರು. 12 ಲಿಸ್ಟ್ ಎ ಪಂದ್ಯಗಳನ್ನು ಆಡಿದ್ದ ಅವರು 16 ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿ ಕೊಂಡಿದ್ದರು.

2017ರಲ್ಲಿ ಅವರಿಗೆ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿಯನ್ನು ಬಿಸಿಸಿಐ ಪ್ರದಾನ ಮಾಡಿತ್ತು.

'ಮುಂಬೈ ಕ್ರಿಕೆಟ್ ಇವತ್ತು ತನ್ನ ನಿಜವಾದ ದಿಗ್ಗಜನನ್ನು ಕಳೆದುಕೊಂಡಿದೆ. ಪದ್ಮಾಕರ್ ಶಿವಲ್ಕರ್ ಅವರು ಕ್ರೀಡೆಗೆ ನೀಡಿದ ಕಾಣಿಕೆಯು ಅಮೂಲ್ಯವಾದದ್ದು. ಅವರು ಸಾರ್ವಕಾಲಿಕ ಶ್ರೇಷ್ಠ ಸ್ಪಿನ್ನರ್‌ಗಳಲ್ಲಿ ಒಬ್ಬರು' ಎಂದು ಮುಂಬೈ ಕ್ರಿಕೆಟ್ ಸಂಸ್ಥೆ (ಎಂ.ಸಿ.ಎ) ಅಧ್ಯಕ್ಷ ಅಜಿಂಕ್ಯ ನಾಯಕ ಸ್ಮರಿಸಿದ್ದಾರೆ. ಪದ್ಮಾಕರ್ ಅವರು ಭಾರತ ತಂಡದಲ್ಲಿ ಆಡುವ ಎಲ್ಲ ಅರ್ಹತೆಗಳನ್ನೂ ಹೊಂದಿದ್ದರು. ಆದರೆ ಆ ಕಾಲಘಟ್ಟದಲ್ಲಿ ರಾಷ್ಟ್ರೀಯ ತಂಡದಲ್ಲಿ ಖ್ಯಾತನಾಮ ಸ್ಪಿನ್ನರ್‌ಗಳು ಉತ್ತುಂಗದಲ್ಲಿದ್ದರು. ಅದರಿಂದಾಗಿ ಪದ್ಮಾಕರ್ ಅವಕಾಶವಂಚಿತರಾದರು.

ಪ್ರಜ್ಞಾನಂದ– ಅರವಿಂದ್ ಪಂದ್ಯ ಡ್ರಾ

ಪ್ರಾಗ್ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ಭಾನುವಾರ ಸ್ವದೇಶದ ಅರವಿಂದ ಚಿದಂಬರಮ್ ಜೊತೆ ಡ್ರಾ ಮಾಡಿಕೊಂಡರು. ಇಬ್ಬರೂ ತಲಾ 3.5 ಪಾಯಿಂಟ್ಸ್ ಗಳಿಸಿದ್ದು ಜಂಟಿಯಾಗಿ ಅಗ್ರಸ್ಥಾನವದಲ್ಲಿ ಮುಂದುವರಿದಿದ್ದಾರೆ.

ಈ ಇಬ್ಬರು ಆಟಗಾರರನ್ನು ಬೆನ್ನತ್ತಿರುವ ಅಗ್ರ ಶ್ರೇಯಾಂಕದ ವೀ ಯಿ (ಚೀನಾ), ಹಾಲೆಂಡ್‌ನ ಅನಿಶ್ ಗಿರಿ, ವಿಯೆಟ್ನಾಇನ ಕ್ವಾಂಗ್ ಲೀಮ್ ಲಿ ಮತ್ತು ಜರ್ಮನಿಯ ವಿನ್ಸೆಂಟ್ ಕೀಮರ್ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಝೆಕ್ ರಿಪಬ್ಲಿಕ್‌ನ ಡೇವಿಡ್ ನವಾರ, ಗ್ಯುಯೆನ್ ಥಾಯ್ ದೈವಾನ್, ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಮತ್ತು ಟರ್ಕಿಯ ಗುರೆಲ್ ಎಡಿಜ್ ತಲಾ ಎರಡು ಪಾಯಿಂಟ್ಸ್ ಗಳಿಸಿದ್ದಾರೆ.

ಹತ್ತು ಆಟಗಾರರು ಭಾಗವಹಿಸುತ್ತಿರುವ ಈ ಟೂರ್ನಿಯಲ್ಲಿ ಇನ್ನೂ 4 ಸುತ್ತುಗಳು ಆಡಲು ಉಳಿದಿವೆ. ಐದನೇ ಸುತ್ತಿನಲ್ಲಿ ಒಂದು ಪಂದ್ಯದಲ್ಲಿ ಮಾತ್ರ ಜಯಾಪಜಯ ನಿರ್ಧಾರವಾಯಿತು. ಉತ್ತಮ ಆಟ ಕಂಡುಕೊಳ್ಳಲು ಪರದಾಡುತ್ತಿದ್ದ ವೀ ಯಿ ಐದನೇ ಸುತ್ತಿನಲ್ಲಿ ಅಮೆರಿಕದ ಶಂಕ್ಲಾಂಡ್ ಅವರನ್ನು 27 ನಡೆಗಳಲ್ಲಿ ಮಣಿಸಿದರು. ಉಳಿದ ನಾಲ್ಕು ಪಂದ್ಯಗಳು ಡ್ರಾ ಆದವು.

ಡೇವಿಡ್ ನವಾರ, ವಿನ್ಸೆಂಟ್ ಕೀಮರ್ ಜೊತೆ, ಕ್ವಾಂಗ್ ಲೀಮ್ ಲಿ, ಗುರೆಜ್ ಎಡಿಜ್ ಜೊತೆ; ಅನಿಶ್ ಗಿರಿ, ಗುಯೆನ್ ಥಾಯ್ ವಾನ್ ಜೊತೆ ಡ್ರಾ ಮಾಡಿಕೊಂಡರು.

ಇನಿಯನ್‌ಗೆ ಕಾನ್ ಚೆಸ್ ಪ್ರಶಸ್ತಿ



ನವದೆಹಲಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್, ಪಿ. ಇನಿಯನ್ ಅವರು ಫ್ರಾನ್ಸ್‌ನಲ್ಲಿ ನಡೆದ ಕಾನ್ ಇಂಟರ್‌ನ್ಯಾಷನಲ್ ಓಪನ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಭಾನುವಾರ ನಡೆದ ಟೂರ್ನಿಯ ಒಂಬತ್ತನೇ ಹಾಗೂ ಅಂತಿಮ ಸುತ್ತಿನಲ್ಲಿ ಸ್ವದೇಶದ ವಿ.ಪ್ರಾಣೇಶ್ ಅವರನ್ನು ಮಣಿಸಿದರು.

ಇನಿಯನ್ ಏಳೂವರೆ ಪಾಯಿಂಟ್ಸ್ ಸಂಗ್ರಹಿಸಿದರು. ದೆಹಲಿಯ ಐಎಂ ಆಟಗಾರ ಆರಾಧ್ಯ ಗರ್ಗ್ (7 ಪಾಯಿಂಟ್ಸ್) ಎರಡನೇ ಸ್ಥಾನ ಪಡೆದರು. ಗರ್ಗ್ ಅವರಂತೆ, ಹಾಲಿ ವಿಶ್ವ ಜೂನಿಯರ್ ಚಾಂಪಿಯನ್ ಕಝಿಬೆಕ್ ನದಿರ್ಬೆಕ್ (ಕಜಕಸ್ತಾನ) ಅವರೂ ಸಹ ಏಳು ಪಾಯಿಂಟ್ಸ್ ಗಳಿಸಿದರೂ, ಕಡಿಮೆ ಟೈಬ್ರೇಕ್ ಕಾರಣ ಮೂರನೇ ಸ್ಥಾನಕ್ಕೆ ಸರಿದರು.

ಆರು ಜಿಎಂ ಆಟಗಾರರು, 21 ಐಎಂ ಆಟಗಾರರು ಕಣದಲ್ಲಿದ್ದರು.